# ಕರ್ನಾಟಕ ಸಾಮಾಜಿಕ ಕಾವಲು ಪಡೆ

## ವರದಿ - 2012

2011ರ ಕರ್ನಾಟಕ ವಿಧಾನಮಂಡಲದ
ಪ್ರಶ್ನೋತ್ತರಗಳ ವಿಶ್ಲೇಷಣೆ

**Karnataka Social Watch**

SOCIAL WATCH INDIA



# 2011ರ ಕರ್ನಾಟಕ ವಿಧಾನಮಂಡಲದ ಪ್ರಶ್ನೋತ್ತರಗಳ ವಿಶ್ಲೇಷಣೆ

**ಮುದ್ರಕರು ಮತ್ತು ಪ್ರಕಾಶಕರು**
ಕರ್ನಾಟಕ ಸಾಮಾಜಿಕ ಕಾವಲುಪಡೆ
C/O ಇ–1, ಮೈತ್ರಿ ಅಪಾರ್ಟ್‌ಮೆಂಟ್ಸ್,
6ನೇ ಮುಖ್ಯ ರಸ್ತೆ, 15ನೇ ತಿರುವು, ಮಲ್ಲೇಶ್ವರಂ,
ಬೆಂಗಳೂರು – 560003.
ಕರ್ನಾಟಕ ರಾಜ್ಯ, ಭಾರತ.
ದೂರವಾಣಿ: 0091–2364509;
ಫ್ಯಾಕ್ಸ್: 0091–23567664;
ಸಂಚಾರವಾಣಿ: 0091–94488–49353.

ಮೊದಲ ಆವೃತ್ತಿ : ಜೂನ್ 2012
ಪ್ರತಿಗಳು : 1000

ಎಲ್ಲಾ ಹಕ್ಕುಗಳನ್ನೂ ಕಾಯ್ದಿರಿಸಲಾಗಿಲ್ಲ. ಈ ಪುಸ್ತಕದ ಯಾವುದೇ ಭಾಗವನ್ನು ಯಾವುದೇ ನಮೂನೆಯಲ್ಲಿ ಅಥವಾ ಯಾವುದೇ ರೀತಿಯಲ್ಲಿ, ಎಲೆಕ್ಟ್ರಾನಿಕ್ ಅಥವಾ ಯಾಂತ್ರಿಕ, ತದ್ರೂಪು ಮುದ್ರಣವನ್ನೂ ಒಳಗೊಂಡಂತೆ ಅಥವಾ ಯಾವುದೇ ಮಾಹಿತಿಯನ್ನು ಅಥವಾ ಪುನರ್ಸ್ಮರಣೆಯ ವಯವಸ್ಥೆಯ ಮೂಲಕ ಪ್ರಕಾಶಕರ ಲಿಖಿತ ಅನುಮತಿ ಇಲ್ಲದೇ ಯಥಾವತ್ತು ಮುದ್ರಿಸಬಹುದು ಅಥವಾ ಬಳಸಬಹುದು. ಈ ಮಾಹಿತಿಯ ಬಳಕೆಯನ್ನು ಒಂದು ಪ್ರತಿಯನ್ನು ಕಳುಹಿಸುವ ಮೂಲಕ ದಯಮಾಡಿ ಸ್ಮರಿಸಬಹುದು.

ಪ್ರಕಾಶಕರು

ಕರ್ನಾಟಕ ಸಾಮಾಜಿಕ ಕಾವಲುಪಡೆ (Karnataka Social Watch)
C/O ಇ–1, ಮೈತ್ರಿ ಅಪಾರ್ಟ್‌ಮೆಂಟ್ಸ್,
6ನೇ ಮುಖ್ಯ ರಸ್ತೆ, 15ನೇ ತಿರುವು, ಮಲ್ಲೇಶ್ವರಂ,
ಬೆಂಗಳೂರು – 560003.
ಕರ್ನಾಟಕ ರಾಜ್ಯ, ಭಾರತ.
ದೂರವಾಣಿ: 0091–2364509;
ಫ್ಯಾಕ್ಸ್: 0091–23567664;
ಸಂಚಾರವಾಣಿ: 0091–9448849353; 9880378900; 9448472513

ಮುದ್ರಕರು:
ಧನಪಾಲ್ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್
ನಂ. 50, 3ನೇ ಮುಖ್ಯರಸ್ತೆ, ತರಗುಪೇಟೆ
ಬೆಂಗಳೂರು – 560 002
ದೂರವಾಣಿ: 080–41221110

**ಸಲಹಾ ತಂಡ (ಸಮಿತಿ)**

ಶ್ರೀ ಆನಂದ್.ಎಸ್
ಶ್ರೀಮತಿ ಅನಿತಾ ಚೆರಿಯಾ
ಶ್ರೀ ಅಶೋಕ್ ಮಾಥ್ಯೂಸ್ ಫಿಲಿಪ್ಸ್
ಶ್ರೀ ಎಡ್ವಿನ್ ಜಯದಾಸ್
ಡಾ. ವಾಸವಿ ಎ.ಆರ್
ಶ್ರೀ ವಾಸುದೇವ ಶರ್ಮಾ
ಶ್ರೀ ವಿನಯ್ ಬೈಂದೂರ್
ಶ್ರೀ ವಿನೋದ್ ವ್ಯಾಸುಲು

**ಕೊಡುಗೆದಾತರು**

| | | |
|---|---|---|
| **ಶ್ರೀ ಶಿವಶಂಕರ್** | : | ಕಾರ್ಮಿಕ ಇಲಾಖೆ |
| **ಶ್ರೀಮತಿ ಮಂಜು ಜಾರ್ಜ್** | : | ಅರಣ್ಯ ಮತ್ತು ಪರಿಸರ ಹಾಗು ತೋಟಗಾರಿಕೆ |
| **ಶ್ರೀಮತಿ ಅಮೃತ** | : | ಸಾರಿಗೆ |
| **ಶ್ರೀ ಮಲ್ಲಿಕಾರ್ಜುನ್** | : | ವಿಜ್ಞಾನ ಮತ್ತು ತಂತ್ರಜ್ಞಾನ, ಆರ್ಥಿಕ, ವಾರ್ತಾ ಮತ್ತು ಪ್ರಚಾರ, ಬೃಹತ್ ಮತ್ತು ಮಧ್ಯಮ ಕೈಗಾರಿಕೆ |
| **ಶ್ರೀ ಅತರುಲ್ಲಾ ಶರೀಫ್ ಮತ್ತು ಶ್ರೀ ಸೈಯ್ಯದ್ ಇಶ್ತಿಯಾಖ್** | : | ಉನ್ನತ ಶಿಕ್ಷಣ ಮತ್ತು ಹಜ್ ಹಾಗು ವಕ್ಫ್ |
| **ಚೈಲ್ಡ್ ರೈಟ್ಸ್ ಟ್ರಸ್ಟ್** | : | ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಸಮಾಜ ಕಲ್ಯಾಣ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ |
| **ಶ್ರೀ ಧನಂಜಯ ಮತ್ತು ಶ್ರೀ ಶಿವರಾಜ್** | : | ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ |
| **ಕುಮಾರಿ ರಶ್ಮಿ** | : | ಪ್ರವಾಸೋದ್ಯಮ, ಬಂದೀಖಾನೆ, ರೇಷ್ಮೆ ಮತ್ತು ಜವಳಿ |
| **ಶ್ರೀ ಮನೋಹರ್.ಆರ್** | : | ಗೃಹ |

**ಆಡಳಿತ ಸಹಾಯ**
ಚೈಲ್ಡ್ ರೈಟ್ಸ್ ಟ್ರಸ್ಟ್, ಬೆಂಗಳೂರು

**ಕಾರ್ಯಕ್ರಮಕ್ಕೆ ಬೆಂಬಲ**
ಶ್ರೀ ಮನೋಹರ್ ಆರ್.
ಶ್ರೀ ಸತ್ಯನಾರಾಯಣ
ಶ್ರೀ ಮಂಜುನಾಥ ಎ.ವಿ.
ಕುಮಾರಿ ತನುಜ
ಶ್ರೀ ವಿನಯ್ ಬೈಂದೂರ್
ಶ್ರೀ ಗುರುರಾಜ್ ಬುಧ್ಯ
ಶ್ರೀ ಅನಿಲ್ ಕುಮಾರ್ ಟಿ.ಎಂ.

**ಸಂಪಾದಕರು**
ಶ್ರೀ ವಾಸುದೇವ ಶರ್ಮಾ
ಶ್ರೀ ಸತೀಶ್. ಜಿ. ಸಿ.
ಶ್ರೀ ಗುರುರಾಜ್ ಬುಧ್ಯ

**ಅನುವಾದ**
ಶ್ರೀ ಸತೀಶ್. ಜಿ. ಸಿ.

# ಪರಿವಿಡಿ

**ಕ್ರ.ಸಂ. ವಿಷಯಸೂಚಿ** **ಪುಟ ಸಂಖ್ಯೆ**


1 ಮುನ್ನುಡಿ

2 ಕರ್ನಾಟಕ ಒಂದು ಸಂಕ್ಷಿಪ್ತ ಪರಿಚಯ

3 ವರದಿಯ ಉದ್ದೇಶ ಮತ್ತು ಅಧ್ಯಯನಕ್ಕಾಗಿ ಅನುಸರಿಸಿದ ವಿಧಾನಗಳು

4 ಕರ್ನಾಟಕ ವಿಧಾನ ಸಭೆ ಮತ್ತು ವಿಧಾನ ಪರಿಷತ್ತು – ಒಂದು ನೋಟ

5 ವಿಧಾನಸಭಾ ಕಾರ್ಯಕಲಾಪಗಳ ಪರಿಚಯ

6 2011 ವಿಧಾನಸಭಾ ಅಧಿವೇಶನಗಳ ಪಕ್ಷಿನೋಟ

7 ವಿಧಾನ ಸಭೆ ಮತ್ತು ಪರಿಷತ್ತಿನಲ್ಲಿ ಶಾಸಕರ ಹಾಜರಾತಿ

8 ಇಲಾಖಾವಾರು ಪ್ರಶ್ನೆಗಳು – ವಿಧಾನಸಭೆ ಮತ್ತು ಪರಿಷತ್ತು

9 ಪಕ್ಷಾವಾರು ಪ್ರಶ್ನೆಗಳು – ವಿಧಾನಸಭೆ ಮತ್ತು ಪರಿಷತ್ತು

10 ಜಿಲ್ಲಾವಾರು ಪ್ರಶ್ನೆಗಳು – ವಿಧಾನಸಭೆ

11 ಕ್ಷೇತ್ರಾವಾರು ಪ್ರಶ್ನೆಗಳು – ವಿಧಾನಸಭೆ ಮತ್ತು ಪರಿಷತ್ತು

12 ಮಹಿಳಾ ಶಾಸಕರ ಭಾಗವಹಿಸುವಿಕೆ

13 ಅಲ್ಪಸಂಖ್ಯಾತ ಶಾಸಕರ ಭಾಗವಹಿಸುವಿಕೆ

14 ಪರಿಶಿಷ್ಟ ಜಾತಿ ಮತ್ತು ಪಂಗಡ ಶಾಸಕರ ಭಾಗವಹಿಸುವಿಕೆ

15 ಇಲಾಖಾವಾರು ಪ್ರಶ್ನೆಗಳ ವಿಶ್ಲೇಷಣೆ

16 ಪ್ರಕ್ರಿಯೆಯ ಯೋಜನೆ ಮತ್ತು ಜಾರಿಯಲ್ಲಿ ಭಾಗವಹಿಸಿದ ವ್ಯಕ್ತಿಗಳು ಮತ್ತು ಸಂಸ್ಥೆಗಳು


***

# ಪರಿಚಯ

**ವಾಸುದೇವ ಶರ್ಮಾ & ಗುರುರಾಜ ಬುಧ್ಯ**

‘ವಿಧಾನ ಸೌಧ’ ರಾಜ್ಯದ ಜನರ ಆಸೆ ಆಶೋತ್ತರಗಳನ್ನು ಅರಿತು, ಅವರ ಬದುಕು ಮತ್ತು ಭವಿಷ್ಯ ನಿರ್ಮಿಸಬೇಕಾದ ಶಕ್ತಿಯ ಆಗರ. ಅಲ್ಲಿ ನಮ್ಮ ರಾಜ್ಯದ ಆಡಳಿತಾತ್ಮಕ ಮುಖ್ಯಸ್ಥರು ಮತ್ತು ಜನಪ್ರತಿನಿಧಿಗಳು ಸೇರುವ ‘ವಿಧಾನ ಮಂಡಲ’ವಿರುವುದು. ವಿಧಾನ ಮಂಡಲದಲ್ಲಿರುವ ವಿಧಾನ ಸಭೆ ಮತ್ತು ವಿಧಾನ ಪರಿಷತ್ ಅನ್ನು ರಾಜ್ಯದ ಜನರೆಲ್ಲರ ಪ್ರತಿನಿಧಿಗಳು ಕಾಲಕಾಲಕ್ಕೆ ಸೇರಿ ರಾಜ್ಯದ ಒಟ್ಟೂ ಅಭಿವೃದ್ಧಿಯನ್ನು ಕುರಿತು ರಾಜ್ಯದ ಹಿಂದಿನ ಪರಿಸ್ಥಿತಿಗಳು, ಪ್ರಸಕ್ತ ಸನ್ನಿವೇಶವನ್ನು ಎದುರಿಟ್ಟುಕೊಂಡು ಮುಂದಿನ ದಿನಗಳನ್ನು ಕುರಿತು ಸಂಘಟಿತರಾಗಿ ಚರ್ಚಿಸಿ, ಸಾಧ್ಯಾಸಾಧ್ಯತೆಗಳು, ಸಾಧಕ ಬಾಧಕಗಳನ್ನು ಕಂಡುಕೊಂಡು ಚಿಂತಿಸಿ, ಯೋಜಿಸಿ, ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಂಡು ‘ಎಲ್ಲರ ಹಿತಕ್ಕಾಗಿ’ಯೇ ರಚಿಸಲಾಗಿರುವುದು. ಇಂತಹ ವಿಧಾನಸಭೆ ಮತ್ತು ಪರಿಷತ್‌ಗೆ ಚುನಾಯಿತರಾದ ನಮ್ಮದೇ ಸಮುದಾಯದ ಪ್ರತಿನಿಧಿಗಳು ವಿಧಾನಸೌಧಕ್ಕೆ ಹೋದಮೇಲೆ ಅವರೇನು ಮಾಡುತ್ತಿದ್ದಾರೆ, ಅಲ್ಲಿ ರಾಜ್ಯದ ಹಿತ ಕಾಯುವ ಕೆಲಸ ಮಾಡುತ್ತಿದ್ದಾರೋ ಇಲ್ಲವೋ, ನಿಜವಾಗಿಯೂ ಅವರು ವಿಧಾನ ಸೌಧದಲ್ಲಿ ನಡೆಯುವ ಸಭೆಗಳಿಗೆ ಹಾಜರಾಗುತ್ತಿದ್ದಾರೋ ಇಲ್ಲವೋ ಎಂದು ಗಮನಿಸುವ ಜನ ತೀರಾ ವಿರಳ. ಯಾವಾಗಲಾದರೊಮ್ಮೆ ಮಾಧ್ಯಮಗಳಲ್ಲಿ, ಅದರಲ್ಲೂ ದೃಷ್ಯ ಮಾಧ್ಯಮಗಳಲ್ಲಿ ಏನಾದರೂ ವಿಧಾನಸೌಧದ ಬಗ್ಗೆ ವರದಿ ಬಂದಾಗ ಕಣ್ಣರಳಿಸಿಕೊಂಡು ನೋಡುವುದಷ್ಟೇ ಆಗಿದೆ. ಅಲ್ಲೇನಾದರೂ ದುರಂತ, ಗದ್ದಲ, ಅಶ್ಲೀಲ, ಅನಾವಶ್ಯಕವಾದದ್ದು ಆದಾಗ ಮಾತ್ರ ಎಲ್ಲರ ಗಮನ ಅತ್ತ ಹೋಗುತ್ತದೆ. ಆದರೆ, ಅಲ್ಲಿ ಎಷ್ಟೋ ಬಾರಿ ಮೌಲ್ಯಯುತವಾದ ಚರ್ಚೆಗಳು ಆಗುತ್ತವೆ, ಹಲವು ಬಾರಿ ಸಭೆಗಳಿಗೆ ಎಲ್ಲ ಸದಸ್ಯರು ಹಾಜರಾಗುತ್ತಾರೆ, ರಾಜ್ಯದ ಅಭಿವೃದ್ಧಿ, ರಕ್ಷಣೆ, ವಿಕಾಸಕ್ಕಾಗಿ ಅರ್ಥಬದ್ಧವಾದ ಚರ್ಚೆಗಳಾಗಿ ನಿರ್ಣಯಗಳನ್ನು ಕೈಗೊಳ್ಳುತ್ತಾರೆ, ಅವರ ಅಲ್ಲಿನ ನಡವಳಿಕೆ, ವಿಚಾರಧಾರೆ ಮಾದರಿಯಾಗುತ್ತದೆ. ಆದರೆ, ಇವೆಲ್ಲಾ ಒಂದು ದಿನದ ಸುದ್ದಿಯಾಗಿ ಜನ ಮಾನಸದಿಂದ ಮರೆತು ಹೋಗುತ್ತದೆ. ಎಷ್ಟೋ ಬಾರಿ ಅಲ್ಲಿ ನಡೆಯುವ ಪ್ರಶ್ನೋತ್ತರಗಳನ್ನು ಯಾರೂ ಗಂಭೀರವಾಗಿ ತೆಗೆದುಕೊಳ್ಳುವುದೇ ಇಲ್ಲ. ಇದು ಸ್ವಲ್ಪ ಮಟ್ಟಿಗೆ ನಿಜವೂ ಕೂಡಾ. ಏಕೆಂದರೆ ಅಲ್ಲಿ ಅನೇಕರು ಕೇಳುವ ಪ್ರಶ್ನೆಗಳು ಅದಕ್ಕೆ ಸಚಿವರು ಕೊಡುವ ಉತ್ತರಗಳು ಎಲ್ಲವೋ, ಎಲ್ಲೋ ಇವರು ಜನರಿಗೆ ಮೋಸ ಮಾಡುತ್ತಿದ್ದಾರೇನು, ಸಮಯ ವ್ಯರ್ಥ ಮಾಡುತ್ತಿದ್ದಾರೇನು, ಇದಕ್ಕೇನು ಇವರನ್ನು ಜನಪ್ರತಿನಿಧಿಗಳಾಗಿ ಆಯ್ಕೆ ಮಾಡಿ ಕಳುಹಿಸಿದ್ದು ಎಂದು ಪ್ರಶ್ನಿಸಬೇಕಾಗುತ್ತದೆ.

ಇಂತಹ ಎಷ್ಟೋ ವಿಚಾರಗಳನ್ನು ಎದುರಿಟ್ಟುಕೊಂಡು ‘ಕರ್ನಾಟಕ ಸಾಮಾಜಿಕ ಕಾವಲು ಪಡೆ’ ಈ ಬಾರಿ ಕರ್ನಾಟಕದ ವಿಧಾನ ಸಭೆ ಮತ್ತು ಪರಿಷತ್ತಿನ ಕಾರ್ಯಕಲಾಪಗಳನ್ನು–ಶಾಸಕರ ಹಾಜರಾತಿ ಮತ್ತು ಕೆಲವು ಆಯ್ದ ಇಲಾಖೆಗಳನ್ನು ಕುರಿತು ಶಾಸಕರು ಕೇಳಿರುವ ಪ್ರಶ್ನೆಗಳು ಮತ್ತು ಅದಕ್ಕೆ ಸಚಿವರು ನೀಡಿರುವ ಉತ್ತರಗಳನ್ನು ಪರಿಶೀಲಿಸುವ ಪ್ರಾಥಮಿಕ ಪ್ರಯತ್ನವನ್ನು ಮಾಡಿದೆ. ಕರ್ನಾಟಕ ಕಾವಲು ಪಡೆಯ ಸಕ್ರಿಯ ಸದಸ್ಯರಲ್ಲೊಂದಾದ ಕರ್ನಾಟಕ ಮಕ್ಕಳ ಹಕ್ಕುಗಳ ನಿಗಾ ಕೇಂದ್ರ ‘ಮಕ್ಕಳ ಹಕ್ಕುಗಳನ್ನು ಕುರಿತು ನಡೆದಿರುವ ಪ್ರಶ್ನೋತ್ತರಗಳನ್ನು ಕುರಿತು ವಿಶ್ಲೇಷಿಸುವುದನ್ನು’ 2005ರಿಂದಲೇ ಆರಂಭಿಸಿದೆ. ಕರ್ನಾಟಕ ಮಕ್ಕಳ ಹಕ್ಕುಗಳ ನಿಗಾ ಕೇಂದ್ರ ಆರಂಭಿಸಿದ ಈ ಪ್ರಕ್ರಿಯೆಗೆ ಸಿಕ್ಕ ಸಕಾರಾತ್ಮಕ ಪ್ರತಿಕ್ರಿಯೆಯೇ ನಾವು ಈ ವರದಿಯನ್ನು ತರಲು ಪೇರಣೆ.

ಈ ಬಾರಿ ನಾವು ಕೈಗೊಂಡಿರುವ ಈ ವಿಶ್ಲೇಷಣೆಯಲ್ಲಿ ಹಲವಾರು ಸಂಘಟನೆಗಳು ಮತ್ತು ಆಸಕ್ತ ವ್ಯಕ್ತಿಗಳು ಕೈಜೋಡಿಸಿದ್ದು ಮುಂದಿನ ದಿನಗಳಲ್ಲಿ ಇನ್ನೂ ವಿಸ್ತೃತವಾಗಿ ವಿಧಾನಸಭೆ ಮತ್ತು ಪರಿಷತ್ತಿನ ಅಧಿವೇಶನಗಳು ನಡೆಯುತ್ತಿರುವಾಗಲೇ ವಿಶ್ಲೇಷಣೆ ನಡೆಸುವ ಆಸಕ್ತಿ ತೋರುತ್ತಿದ್ದಾರೆ. ಇದಕ್ಕೆ ಅತ್ಯಂತ ಅವಶ್ಯಕವಾಗಿ ಆಗಬೇಕಿರುವುದು, ವಿಧಾನ ಸೌಧದ ಅಂತರ್ಜಾಲದಲ್ಲಿ ಎಲ್ಲ ಶಾಸಕರ ವಿವರಗಳು, ಅವರ ಹಾಜರಾತಿ, ಅವರು ಕೇಳುತ್ತಿರುವ ಪ್ರಶ್ನೆಗಳು, ವಿವಿಧ ಇಲಾಖೆಗಳು ನೀಡುತ್ತಿರುವ ಉತ್ತರಗಳು, ವಿಧಾನಸಭೆ ಮತ್ತು ಪರಿಷತ್ತಿನ ವಿವಿಧ ಸಮಿತಿಗಳು ಮತ್ತು ಅವುಗಳ ಕಾರ್ಯಕಲಾಪ ಇವುಗಳೆಲ್ಲವೂ ಲಭ್ಯವಾಗಬೇಕು. ಉಭಯ ಸದನಗಳ ಅಧ್ಯಕ್ಷರು ಐಟಿ ನಗರವೆಂದೇ ಖ್ಯಾತಿ ಹೊಂದಿರುವ ರಾಜ್ಯಕ್ಕೆ ಈ ಸೌಲಭ್ಯವನ್ನು ಮಾಡಿಕೊಡಲೇಬೇಕಿದೆ.

ಅತಿ ಮುಖ್ಯವಾಗಿ ನಮ್ಮ ಜನತಂತ್ರ ವ್ಯವಸ್ಥೆಯ ಒಂದು ಮುಖ್ಯ ಆಧಾರ ಸ್ತಂಭವೆನಿಸಿಕೊಂಡ ಶಾಸಕಾಂಗದ, ವಿಧಾನಮಂಡಳ ಅಧಿವೇಶನದ ಹಲವು ಅಂಕಿ ಅಂಶಗಳನ್ನು ಸಾರ್ವಜನಿಕರ ಮುಂದಿಡುವ ಮೂಲಕ, ಸಾರ್ವಜನಿಕರ ಆಸಕ್ತಿ ಮತ್ತು ಶಾಸಕಾಂಗ ವ್ಯವಸ್ಥೆಯ ಕಾರ್ಯಕ್ಷಮತೆಯನ್ನು ಎತ್ತಿಹಿಡಿಯುವ ಸಾಮಾಜಿಕ ಪ್ರಯತ್ನವನ್ನು ಕರ್ನಾಟಕ ಸಾಮಾಜಿಕ ಕಾವಲು ಪಡೆ ಮಾಡಿದೆ.

# ಸಾಮಾಜಿಕ ಕಾವಲು ಪಡೆ

## ಅಂತಾರಾಷ್ಟ್ರೀಯ ಸಾಮಾಜಿಕ ಕಾವಲು ಪಡೆ

ಅಂತಾರಾಷ್ಟ್ರೀಯ ಮಟ್ಟದ ನಾಗರೀಕ ಸಂಸ್ಥೆಗಳ ಜಾಲವಾಗಿರುವ 'ಅಂತಾರಾಷ್ಟ್ರೀಯ ಸಾಮಾಜಿಕ ಕಾವಲು ಪಡೆ'ಯು (International Social Watch) ಬಡತನ ಮತ್ತು ಬಡತನಕ್ಕಿರುವ ಕಾರಣಗಳನ್ನು ಅಳಿಸಲು ಹೋರಾಟ ನಡೆಸುತ್ತಾ ಎಲ್ಲ ರೀತಿಯ ಸಂಪನ್ಮೂಲಗಳ ಸಮಾನ ಹಂಚಿಕೆಯಾಗುವುದನ್ನು ಖಾತ್ರಿಗೊಳಿಸಿ ಹಾಗು ಮಾನವ ಹಕ್ಕುಗಳನ್ನು ಸಾಕಾರಗೊಳಿಸಲು ಯತ್ನಿಸುತ್ತಿದೆ. ಸಾಮಾಜಿಕ ಕಾವಲು ಪಡೆಯು ಸಾಮಾಜಿಕ, ಆರ್ಥಿಕ ಮತ್ತು ಲಿಂಗ ನ್ಯಾಯಕ್ಕೆ ಬದ್ಧವಾಗಿದ್ದು, ಎಲ್ಲ ಜನರು ಬಡತನದ ಶೃಂಖಲೆಗಳಿಂದ ಬಿಡುಗಡೆಗೊಳ್ಳುವ ಹಕ್ಕನ್ನು ಕುರಿತು ಬೆಳಕು ಚೆಲ್ಲುತ್ತಿದೆ.

ಸಾಮಾಜಿಕ ಕಾವಲು ಪಡೆಯು ಬಡತನವನ್ನು ನಿರ್ಮೂಲನೆಗೊಳಿಸಲು ಬೇಕಾದ ಅಂತಾರಾಷ್ಟ್ರೀಯ, ರಾಷ್ಟ್ರೀಯ ಮತ್ತು ಸ್ಥಳೀಯ ಅವಶ್ಯಕತೆಗಳನ್ನು ಪೂರೈಸಲು ಸರ್ಕಾರ, ವಿಶ್ವಸಂಸ್ಥೆಯ ವ್ಯವಸ್ಥೆ ಮತ್ತು ಅಂತರಾಷ್ಟ್ರೀಯ ಸಂಸ್ಥೆಗಳನ್ನು ಬದ್ಧರನ್ನಾಗಿಸಿದೆ. ಸಾಮಾಜಿಕ ಕಾವಲು ಪಡೆಯು ಸಮುದಾಯ ಕೇಂದ್ರಿತ ಸುಸ್ಥಿರ ಅಭಿವೃದ್ಧಿಯನ್ನು ಉತ್ತೇಜಿಸುತ್ತದೆ.

ಸಾಮಾಜಿಕ ಕಾವಲು ಪಡೆಯು ತನ್ನ ಉದ್ದೇಶಗಳನ್ನು ವಕೀಲಿ, ಸಾಮರ್ಥ್ಯವರ್ಧನೆ, ಉಸ್ತುವಾರಿ, ಸಾಂಸ್ಥಿಕ ಬೆಳವಣಿಗೆ ಮತ್ತು ಜಾಲಗಳಿಗೆ ಸಮಗ್ರ ನೀತಿಯನ್ನು ರೂಪಿಸುವುದರ ಮೂಲಕ ಸಾಧಿಸುವ ಗುರಿಯನ್ನು ಹೊಂದಿದೆ. ಸಾಮಾಜಿಕ ಕಾವಲು ಪಡೆಯು ಮಹಿಳೆಯರ, ಬಡಜನರ ಮತ್ತು ಅಸಹಾಯಕ ಗುಂಪುಗಳ ಮೇಲೆ ಪರಿಣಾಮ ಬೀರುವ ನೀತಿಗಳನ್ನು ಪರಿಣಾಮಕಾರಿಯಾಗಿ ಉಸ್ತುವಾರಿ ಮಾಡುವ ಸಲುವಾಗಿ ರಾಷ್ಟ್ರೀಯ ಪಾಲುದಾರರ ಸಾಮರ್ಥ್ಯವರ್ಧನೆಯನ್ನು ಗುರಿಯನ್ನಾಗಿಸಿಕೊಂಡಿದೆ.

ಸಾಮಾಜಿಕ ಕಾವಲು ಪಡೆಯನ್ನು 1955ರಲ್ಲಿ 'ಸಾಮಾಜಿಕ ಅಭಿವೃದ್ಧಿ ಮತ್ತು ಲಿಂಗ ತಾರತಮ್ಯದಲ್ಲಿ ಕಾಳಜಿಯುಳ್ಳ ಹಾಗು ಅಸಮಾನತೆ ಮತ್ತು ಬಡಜನರ ಮೇಲೆ ಪರಿಣಾಮ ಬೀರುವ ನೀತಿಗಳ ಉಸ್ತುವಾರಿಯಲ್ಲಿ ತೊಡಗಿಸಿಕೊಂಡಿರುವ ಸರ್ಕಾರೇತರ ಸಂಸ್ಥೆಗಳು ಒಂದೆಡೆ ಸೇರುವ ಸಲುವಾಗಿ' ಪ್ರಾರಂಭಿಸಲಾಯಿತು.

ಸರ್ಕಾರಗಳನ್ನು ಅದರ ವಾಗ್ದಾನಗಳಿಗೆ ಬದ್ಧರನ್ನಾಗಿಸುವ ಮೂಲಕ ಅವುಗಳನ್ನು ಜಾರಿಮಾಡುವ ರಾಜಕೀಯ ಇಚ್ಛಾಶಕ್ತಿಯನ್ನು ಉತ್ತೇಜಿಸುವ ಸಾಮಾಜಿಕ ಕಾವಲು ಪಡೆಯ ಮೂಲ ಉದ್ದೇಶ ಈಗಲೂ ಹಾಗೆಯೇ ಇದೆ.[1](http://www.socialwatch.org/node/63) ಪ್ರಪಂಚದಾದ್ಯಂತ 70 ರಾಷ್ಟ್ರಗಳಲ್ಲಿ ಸಾಮಾಜಿಕ ಕಾವಲು ಪಡೆಯ ಜಾಲ ಸಂಸ್ಥೆಗಳಿವೆ.

## ಭಾರತ ಸಾಮಾಜಿಕ ಕಾವಲು ಪಡೆ

ರಾಷ್ಟ್ರೀಯ ಕಾವಲು ಪಡೆಯು ಸಮುದಾಯ ಸಂಸ್ಥೆಗಳ, ನಾಗರೀಕರ ಮತ್ತು ಸಮುದಾಯಗಳ ವಿಸ್ತೃತ ಜಾಲವಾಗಿದ್ದು, ಸಾಮಾಜಿಕ ಅಭಿವೃದ್ಧಿಗೆ, ಅದರಲ್ಲೂ ವಿಶೇಷವಾಗಿ ದೇಶದ ಶೋಷಿತ/ಹಿಂದುಳಿದ ವರ್ಗದ ಜನರ ಅಭಿವೃದ್ಧಿಯ ಗುರಿಗಳನ್ನು ಸಾಕಾರಗೊಳಿಸಲು ಆಡಳಿತಾತ್ಮಕ ಉಸ್ತುವಾರಿ ಪ್ರಕ್ರಿಯೆಯನ್ನು ರೂಪಿಸುತ್ತಿದೆ. ಇದು ಆಡಳಿತಾತ್ಮಕ ಸಂಸ್ಥೆಗಳು ಮತ್ತವುಗಳ ಸಮುದಾಯ ಹಾಗು ಜನತಂತ್ರದ ನೀತಿಗಳ ಉಸ್ತುವಾರಿ ಮಾಡುತ್ತಿದೆ.

---

1 ಈ ವಾಗ್ದಾನಗಳು ಈ ರೀತಿಯಾಗಿವೆ

* 1995ರ ಸಾಮಾಜಿಕ ಸಮ್ಮೇಳನ
* 1995ರ ಮಹಿಳೆಯರನ್ನು ಕುರಿತು ಬೀಜಿಂಗ್ ಸಮ್ಮೇಳನ
* ಸಹಸ್ರಮಾನದ ಅಭಿವೃದ್ಧಿ ಗುರಿಗಳು (2000)
* 1992ರ ರಿಯೋ ಸಮ್ಮೇಳನ
* ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಹಕ್ಕುಗಳು, ಕಾರ್ಮಿಕ ಹಕ್ಕುಗಳು, ಮಹಿಳಾ ಹಕ್ಕುಗಳು, ಪರಿಸರದ ಹಕ್ಕುಗಳು, ವಿಶೇಷ ವರ್ಗ ಮತ್ತು ವಲಸೆ ಜನರ ಹಕ್ಕುಗಳು ಮತ್ತು ಅಭಿವೃದ್ಧಿ ಹೊಂದುವ ಹಕ್ಕುಗಳನ್ನು ಒಳಗೊಂಡಂತೆ ಮಾನವ ಹಕ್ಕುಗಳ ಚೌಕಟ್ಟು; ಹಾಗು
* ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಹಕ್ಕುಗಳನ್ನು ಒಳಗೊಂಡ ರಾಷ್ಟ್ರೀಯ ಬದ್ಧತೆಗಳು, ಸಂವಿಧಾನದ ಅಡಕಗಳು, ಸರ್ಕಾರಿ ಯೋಜನೆಗಳು, ಆಯವ್ಯಯ ಮತ್ತು ಕಾನೂನುಗಳು.

ಸಾಮಾಜಿಕ ಕಾವಲು ಪಡೆಯ ಪ್ರಕ್ರಿಯೆಯು ಆಡಳಿತಾತ್ಮಕ ಪ್ರಕ್ರಿಯೆಯಲ್ಲಿ ಗುಣಾತ್ಮಕವಾಗಿ ತೊಡಗಿಸಿಕೊಳ್ಳುವುದನ್ನು ಖಾತ್ರಿಪಡಿಸುವ ಸಲುವಾಗಿ ಹಲವಾರು ಸಂಸ್ಥೆಗಳು, ಸಾಮಾಜಿಕ ಕ್ರಿಯಾ ಗುಂಪುಗಳು ಮತ್ತು ನಾಗರೀಕರು ಕ್ರೋಢೀಕರಿಸಿದ ಪ್ರತಿಕ್ರಿಯೆಯಾಗಿದೆ. ಇದು ಪ್ರಜಾಪ್ರಭುತ್ವವನ್ನು ಅರ್ಥಪೂರ್ಣವಾಗಿಸಲು ಮತ್ತು ಜನರ ಭಾಗವಹಿಸುವಿಕೆಯನ್ನು ಎತ್ತಿಹಿಡಿಯಲು ಆರಂಭಿಸಲ್ಪಟ್ಟ ಪ್ರಕ್ರಿಯೆಯ ಭಾಗವಾಗಿದೆ.

ಸಾಮಾಜಿಕ ಕಾವಲು ಪಡೆಯ ಪ್ರಕ್ರಿಯೆಯು ಆಡಳಿತದ [ಕಾರ್ಯಕಾರಿ (ನೀತಿಗಳು ಮತ್ತು ಆಚರಣೆಗಳು), ನ್ಯಾಯಾಂಗ, ಸಂಸತ್ತಿನ ಪ್ರತಿನಿಧಿಗಳು ಮತ್ತು ಸ್ಥಳೀಯ ಸರ್ಕಾರಗಳು] ಕಾರ್ಯನಿರ್ವಹಣೆ ಮತ್ತು ಕ್ಷಮತೆಯನ್ನು ಪರಿಶೀಲಿಸುವ ಮೂಲಕ ತನ್ನ ವಿಶಿಷ್ಟತೆಯನ್ನು ಹೊಂದಿದೆ. ಸಾಮಾಜಿಕ ಕಾವಲು ಪಡೆಯ ವರದಿಯು ಆಡಳಿತಾತ್ಮಕ ಸಂಸ್ಥೆಗಳ ಉಸ್ತುವಾರಿ ಮತ್ತು ಪ್ರಜಾಪ್ರಭುತ್ವವನ್ನು ಮೂಲಭೂತ ಆರ್ಥಿಕ ಮತ್ತು ಸಾಮಾಜಿಕ ಮೌಲ್ಯಗಳಾದ ಹಕ್ಕುಗಳು, ಅಭಿವೃದ್ಧಿ, ಸ್ವಾತಂತ್ರ್ಯ ಮತ್ತು ರಕ್ಷಣೆಯ ದೃಷ್ಟಿಕೋನದಿಂದ ಪ್ರತಿ ವರ್ಷ ವಿಶ್ಲೇಷಿಸುತ್ತದೆ. ಈ ಪಡೆಯ 2004ರ ವರದಿಯು ಮೂರು ಮೂಲಭೂತ ಹಕ್ಕುಗಳಾದ ಆರೋಗ್ಯ, ಶಿಕ್ಷಣ ಮತ್ತು ಜೀವನೋಪಾಯ (ಆಹಾರ ಮತ್ತು ಉದ್ಯೋಗ)ಗಳನ್ನು ಖಾತ್ರಿಪಡಿಸಲು ಆಡಳಿತಾತ್ಮಕ ಸಂಸ್ಥೆಗಳ ಸೂಕ್ಷ್ಮತೆ, ಕ್ಷಮತೆ ಮತ್ತು ಉಪಯೋಗಗಳನ್ನು ವಿಶ್ಲೇಷಿಸಿತ್ತು.

ಸಾಮಾಜಿಕ ಕಾವಲು ಪಡೆಯು ಸಹಸ್ರಮಾನದ ಅಭಿವೃದ್ಧಿ ಗುರಿಗಳನ್ನು ಸಾಧಿಸುವ ಚಿತ್ರಣವನ್ನು ನೀಡುವಲ್ಲಿಯೂ ಸಹ ತನ್ನ ಕೊಡುಗೆಯನ್ನು ನೀಡಿದೆ. ಇನ್ನೂ ಮುಂದುವರೆದು ನಾಗರೀಕ ಸಮುದಾಯದ ಸಹಭಾಗಿತ್ವ ಮತ್ತು ಉಸ್ತುವಾರಿಯ ಮೂಲಕ ಸಹಸ್ರಮಾನದ ಅಭಿವೃದ್ಧಿ ಗುರಿಗಳನ್ನು ರಾಜ್ಯದ ಸ್ವಾಮ್ಯತೆಯಿಂದ ನಾಗರೀಕರ ಸ್ವಾಮ್ಯತೆಯೆಡೆಗೆ ಸಾಗಿಸಲು ಇದು ಶ್ರಮಿಸುತ್ತಿದೆ. ಇದು ರಾಜ್ಯ ಮತ್ತು ಸ್ಥಳೀಯ ಸಮುದಾಯದ ಕ್ರಿಯೆಗಳನ್ನು ರಾಷ್ಟ್ರೀಯ ಚಳುವಳಿಗೆ ಬೆಸೆಯುತ್ತಿದೆ. ಸಹಸ್ರಮಾನದ ಅಭಿವೃದ್ಧಿ ಗುರಿಗಳನ್ನು ರಾಷ್ಟ್ರೀಯ/ ಸಮುದಾಯದ ಅಭಿವೃದ್ಧಿ ಗುರಿಗಳನ್ನಾಗಿಸಲು ಯತ್ನಿಸುತ್ತಿದೆ. ದೇಶದ 16 ರಾಜ್ಯಗಳಲ್ಲಿ ಸಾಮಾಜಿಕ ಕಾವಲು ಪಡೆಯು ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿವೆ. (http://socialwatchindia.net/about-us/about-us)

## ಕರ್ನಾಟಕ ಸಾಮಾಜಿಕ ಕಾವಲು ಪಡೆ

ಕರ್ನಾಟಕ ಸಾಮಾಜಿಕ ಕಾವಲು ಪಡೆಯ ಪ್ರಕ್ರಿಯೆಯು ಕೆಲವು ವರ್ಷಗಳ ಹಿಂದೆ ಅಂದರೆ 2009ರಲ್ಲಿ ಪ್ರಾಥಮಿಕ ಶಿಕ್ಷಣದ ಕುರಿತು ವರದಿಯನ್ನು ತರುವುದರ ಮೂಲಕ ಪ್ರಾರಂಭವಾಯಿತು. 2010ರ ಕಾವಲು ಪಡೆಯ ಎರಡನೇ ವರದಿಯ ಪ್ರಜಾಪ್ರಭುತ್ವದ ವಿಶ್ಲೇಷಣೆ ಮತ್ತು ಕರ್ನಾಟಕ ಸರ್ಕಾರದ ಸಾಧನೆ, ಕರ್ನಾಟಕದ 14ನೇ ಲೋಕಸಭೆಯ ಸಂಸದರು (2004–2009), ರಾಜ್ಯದ ಮಕ್ಕಳ ಹಕ್ಕುಗಳ ಸ್ಥಿತಿ, ಮಹಿಳೆಯರ ಸ್ಥಿತಿ–ಮನೆ ಕೆಲಸದವರು, ನಗರಾಡಳಿತ, ನೀತಿ ಸುಧಾರಣೆಗಳು, ಸರ್ವೋಚ್ಚ ನ್ಯಾಯಾಲಯದ ನಿರ್ದೇಶನಗಳನ್ನು ರಾಜ್ಯ ಸರ್ಕಾರ ಜಾರಿಗೊಳಿಸದಿರುವುದು, ಕರ್ನಾಟಕ ರಾಜ್ಯ ಸರ್ಕಾರವು ಪರಿಣಾಮಕಾರಿ ರಾಜ್ಯ ಮಾನವ ಹಕ್ಕುಗಳ ಆಯೋಗಕ್ಕೆ ಬದ್ಧವಾಗಿದೆಯೇ?, ಕರ್ನಾಟಕ ಲೋಕಾಯುಕ್ತ ಇವೇ ಮೊದಲಾದ ವಿಷಯಗಳನ್ನು ಒಳಗೊಂಡಿತ್ತು. ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಸಕ್ರಿಯವಾಗಿರುವ ಸ್ವಯಂಸೇವಾ ಸಂಘಟನೆಗಳು ಮತ್ತು ವ್ಯಕ್ತಿಗಳು ಕರ್ನಾಟಕ ಸಾಮಾಜಿಕ ಕಾವಲು ಪಡೆಯ ಸದಸ್ಯರಾಗಿದ್ದಾರೆ. ರಾಜ್ಯದ ಅಭಿವೃದ್ಧಿಯ ಆಗುಹೋಗುಗಳನ್ನು ತಮ್ಮದೇ ದೃಷ್ಟಿಕೋನದಿದ ವಿಶ್ಲೇಷಿಸುತ್ತಿರುವ ಕರ್ನಾಟಕ ಸಾಮಾಜಿಕ ಕಾವಲು ಪಡೆ ಈ ಬಾರಿಯ ಮೂರನೇ ವರದಿಯಲ್ಲಿ ರಾಜ್ಯದ ಶಾಸಕರ ಕಾರ್ಯಕಲಾಪಗಳತ್ತ ಕ್ಷ ಕಿರಣ ಬೀರಿದೆ.

## ಕರ್ನಾಟಕ – ಪರಿಚಯ

ಕರ್ನಾಟಕ ರಾಜ್ಯವು ಭಾರತದ ದಕ್ಕನ್ ಪ್ರಸ್ಥಭೂಮಿಯ ಪಶ್ಚಿಮಭಾಗದ, ಪಶ್ಚಿಮ ಮತ್ತು ಪೂರ್ವ ಘಟ್ಟಗಳು ನೀಲಗಿರಿ ಪರ್ವತ ಶ್ರೇಣಿಗೆ ಹಬ್ಬಿಕೊಂಡಿದೆ. ಕರ್ನಾಟಕವು ಉತ್ತರ ಮತ್ತು ವಾಯುವ್ಯದಲ್ಲಿ ಮಹರಾಷ್ಟ್ರ ಮತ್ತು ಗೋವಾ ರಾಜ್ಯಗಳಿಂದ, ಪಶ್ಚಿಮದಲ್ಲಿ ಅರಬ್ಬಿ ಸಮುದ್ರ, ಪೂರ್ವದಲ್ಲಿ ಆಂಧ್ರಪ್ರದೇಶ, ಆಗ್ನೇಯದಲ್ಲಿ ತಮಿಳುನಾಡು, ನೈರುತ್ಯದಲ್ಲಿ ಕೇರಳದಿಂದ ಸುತ್ತುವರಿಯಲ್ಪಟ್ಟಿದೆ. ಕರ್ನಾಟಕ ರಾಜ್ಯವು ಉತ್ತರದಿಂದ ದಕ್ಷಿಣಕ್ಕೆ 750 ಕಿ.ಮಿ. ಮತ್ತು ಪೂರ್ವದಿಂದ ಪಶ್ಚಿಮಕ್ಕೆ 400 ಕಿ.ಮಿ.ಗಳಷ್ಟು ವಿಸ್ತರಿಸಿದೆ.

ಕರ್ನಾಟಕವು ಮೊದಲು ಮೈಸೂರು ಎಂದು ಕರೆಯಲ್ಪಡುತ್ತಿದ್ದು ನವೆಂಬರ್ 1, 1973ರಲ್ಲಿ ಕರ್ನಾಟಕವೆಂದು ಹೆಸರಿಸಲ್ಪಟ್ಟಿತು. ಕನ್ನಡ ಭಾಷೆಯು ರಾಜ್ಯದ ಅಧಿಕೃತ ಭಾಷೆಯಾಗಿದೆ. ರಾಜ್ಯದಲ್ಲಿ ಪ್ರಮುಖ ನದಿಗಳಾದ ಕಾವೇರಿ, ತುಂಗಾ–ಭದ್ರ, ಕಾಳಿ, ಕೃಷ್ಣಾ ಮತ್ತು ಗೋದಾವರಿ ತಮ್ಮ ಉಪನದಿಗಳೊಂದಿಗೆ ಹರಿಯುತ್ತವೆ.

ಕರ್ನಾಟಕವು ಅತ್ಯಂತ ಶ್ರೀಮಂತ ಸಂಸ್ಕೃತಿ ಮತ್ತು ಸಂಪ್ರದಾಯವನ್ನು ಹೊಂದಿರುವುದರ ಜೊತೆಗೆ ಕೈಗಾರಿಕೆ ಮತ್ತು ಸೌಲಭ್ಯಗಳಲ್ಲಿ ಶೀಘ್ರವಾಗಿ ಬೆಳವಣಿಗೆ ಹೊಂದುತ್ತಿರುವ ರಾಜ್ಯಗಳಲ್ಲೊಂದಾಗಿದೆ.

ರಾಜ್ಯವು 30 ಜಿಲ್ಲೆಗಳನ್ನು ಮತ್ತು 176 ತಾಲ್ಲೂಕುಗಳನ್ನು ಹೊಂದಿದ್ದು, ಇದರ ಒಟ್ಟು ವಿಸ್ತೀರ್ಣ 1,91,791 ಚ.ಕಿ.ಮಿ. ಆಗಿದ್ದು ಇದು ದೇಶದ ಒಟ್ಟು ವಿಸ್ತೀರ್ಣದ ಶೇಕಡಾ 5.83ರಷ್ಟಿದ್ದು, ವಿಸ್ತೀರ್ಣದಲ್ಲಿ ಎಂಟನೇ ದೊಡ್ಡ ರಾಜ್ಯವಾಗಿದೆ. (ಭಾರತದ ವಿಸ್ತೀರ್ಣ 32.88 ಲಕ್ಷ ಚ.ಕಿ.ಮಿ.). 2011ರ ಜನಗಣತಿಯ ಪ್ರಕಾರ ರಾಜ್ಯದ ಜನಸಂಖ್ಯೆ 611 ಲಕ್ಷಗಳಾಗಿದ್ದು ಜನಸಾಂದ್ರತೆ 319ರಷ್ಟಿದೆ. ರಾಜ್ಯದಲ್ಲಿ ಶೇಕಡಾ 36.57ರಷ್ಟು ಜನ ನಗರ ಪ್ರದೇಶದಲ್ಲಿ ವಾಸಿಸುತ್ತಿದ್ದು, ಸಾಕ್ಷರತಾ ಪ್ರಮಾಣ 75.6 ಮತ್ತು ಲಿಂಗಪ್ರಮಾಣ 968 ಆಗಿದೆ.

2009–10ನೇ ಸಾಲಿನ ಮಾಹಿತಿಯಂತೆ ರಾಜ್ಯದಲ್ಲಿ 30 ಜಿಲ್ಲಾ ಪಂಚಾಯತ್‌ಗಳು, 176 ತಾಲೂಕು ಪಂಚಾಯತಿಗಳು, 219 ಪಟ್ಟಣ/ ನಗರ ಪುರಸಭೆಗಳು ಮತ್ತು 5,627 ಗ್ರಾಮ ಪಂಚಾಯಿತಿಗಳಿವೆ. ರಾಜ್ಯವು ಆಡಳಿತಾತ್ಮಕವಾಗಿ ನಾಲ್ಕು ವಿಭಾಗಗಳನ್ನು ಹೊಂದಿದ್ದು, 49 ಉಪವಿಭಾಗಗಳು, 745 ಹೋಬಳಿಗಳು/ಆದಾಯ ವೃತ್ತಗಳನ್ನು ಹೊಂದಿದೆ. ರಾಜ್ಯವು 27,028 ಜನವಸತಿ ಗ್ರಾಮಗಳನ್ನು ಮತ್ತು 2,362 ಜನರಹಿತ ಗ್ರಾಮಗಳನ್ನು ಹೊಂದಿದೆ. ದೇಶದ ಅತಿ ದೊಡ್ಡ ಮಹಾನಗರಗಳಲ್ಲಿ ಬೆಂಗಳೂರು 6ನೇ ಸ್ಥಾನವನ್ನು ಹೊಂದಿದೆ ಮತ್ತು ಪ್ರಪಂಚದಲ್ಲಿ ವೇಗವಾಗಿ ಬೆಳೆಯುತ್ತಿರುವ ನಗರಗಳಲ್ಲೊಂದಾಗಿದೆ.

# ವರದಿಯ ಉದ್ದೇಶ – ಅನುಸರಿಸಿದ ವಿಧಾನಗಳು

ಅಧಿವೇಶನದ ಕಾರ್ಯಸೂಚಿಯು ರಾಜ್ಯಪಾಲರ ಭಾಷಣ, ಆಯವ್ಯಯ ಮಂಡನೆ, ರಾಜ್ಯಪಾಲರು ಅಥವಾ ರಾಷ್ಟ್ರಪತಿಗಳಿಂದ ಅಂಕಿತಗೊಂಡ ಮಸೂದೆಗಳು, ಪ್ರಶ್ನೋತ್ತರಗಳು, ವಿದ್ಯುಕ್ತ ಸೂಚನೆಗಳು, ತುರ್ತು ವಿಷಯಗಳ ಮೇಲೆ ಅಲ್ಪಾವಧಿ ಚರ್ಚೆ, ನಿಲುವಳಿ ಸೂಚನೆಗಳು, ಅರ್ಧಗಂಟೆ ಚರ್ಚೆ, ಸಾರ್ವಜನಿಕ ಮಹತ್ವದ ತುರ್ತು ವಿಷಯಗಳೆಡೆಗೆ ಗಮನ ಸೆಳೆಯಲು ಚರ್ಚೆ, ಖಾಸಗಿ ಮಸೂದೆಗಳು, ಕಾಯಿದೆಗಳಿಗೆ ತಿದ್ದುಪಡಿ ಮತ್ತು ಹೊಸ ಮಸೂದೆಗಳ ಮಂಡನೆ ಇವೇ ಮೊದಲಾದವುಗಳನ್ನು ಒಳಗೊಂಡಿರುತ್ತದೆ.

ಈ ವರದಿಯು 2011ನೇ ಸಾಲಿನಲ್ಲಿ ವಿಧಾನಮಂಡಲ ಅಧಿವೇಶನದಲ್ಲಿ ಪ್ರಶ್ನೋತ್ತರಗಳಿಗೆ ಸಂಬಂಧಿಸಿದಂತೆ ಶಾಸಕರ ಭಾಗವಹಿಸುವಿಕೆಯನ್ನು ವಿಶ್ಲೇಷಿಸಿದೆ. ಈ ವರದಿಯ ಮುಖ್ಯ ಉದ್ದೇಶ 13ನೇ ವಿಧಾನಸಭೆಯ 9ನೇ ಅಧಿವೇಶನ (24–2–2011ರಿಂದ 16–3–2011) ಮತ್ತು ವಿಧಾನಪರಿಷತ್ತಿನ 115ನೇ ಅಧಿವೇಶನದ (24–2–2011 ಮತ್ತು 17–3–2011) ಪ್ರಶ್ನೋತ್ತರಗಳನ್ನು ವಿಶ್ಲೇಷಿಸುವುದಾಗಿದೆ.

## ಈ ವರದಿಯ ಉದ್ದೇಶಗಳು

– 2011ರ ವಿಧಾನಸಭೆ ಮತ್ತು ವಿಧಾನ ಪರಿಷತ್ತಿನ ಕಾರ್ಯವೈಖರಿಯನ್ನು ಅರ್ಥೈಸಿಕೊಳ್ಳುವುದು

– ಕರ್ನಾಟಕದ 13ನೇ ವಿಧಾನಸಭೆಯ 111ನೇ ಅಧಿವೇಶನ (24–2–2011 ರಿಂದ 16–3–2011) ಮತ್ತು ವಿಧಾನಪರಿಷತ್ತಿನ 9ನೇ ಅಧಿವೇಶನದ (24–2–2011 ಮತ್ತು 17–3–2011) ಪ್ರಶ್ನೋತ್ತರದಲ್ಲಿ ಶಾಸಕರ ಭಾಗವಹಿಸುವಿಕೆಯನ್ನು ಗಮನಿಸುವುದು.

– 2011ರ ವಿಧಾನಮಂಡಲ ಕಾರ್ಯಕಲಾಪಗಳ ಮುಖ್ಯಾಂಶಗಳನ್ನು ಗುರುತಿಸುವುದು ಮತ್ತು ಆಯವ್ಯಯ ಅಧಿವೇಶನದ (24–2–2011 ರಿಂದ 16–3–2011) ಕಾರ್ಯಕಲಾಪಗಳನ್ನು ಆಳವಾಗಿ ಅಭ್ಯಯಿಸುವುದು.

– ಪ್ರಶ್ನೋತ್ತರಗಳನ್ನು ವಿಶ್ಲೇಷಿಸುವುದು.

## ವರದಿಯನ್ನು ತಯಾರಿಸಲು ಅನುಸರಿಸಿದ ವಿಧಾನಗಳು

* ಈ ವರದಿಯ ತಯ್ಯಾರಿಯು ದೀರ್ಘಕಾಲಿಕ ಸಂಘಟಿತ ಪ್ರಯತ್ನದಿಂದಾಗಿದೆ. ಲಭ್ಯವಿರುವ ಮಾಹಿತಿಗಳನ್ನು ಸಂಗ್ರಹಿಸುವುದು ಒಂದೆಡೆಯಾದರೆ ಅವುಗಳನ್ನು ಅರ್ಥೈಸಿಕೊಂಡು ವಿಶ್ಲೇಷಿಸುವುದು ಮತ್ತೊಂದೆಡೆ.

**ಅಂಕಿಅಂಶಗಳು:**

* ಇಲ್ಲಿನ ಮಾಹಿತಿಗಳನ್ನು ಕರ್ನಾಟಕ ವಿಧಾನಸಭೆ ಮತ್ತು ವಿಧಾನಪರಿಷತ್ತಿನಿಂದ ಹಾಗು ಕರ್ನಾಟಕ ವಿಧಾನಸಭೆ ಮತ್ತು ವಿಧಾನಪರಿಷತ್ತಿನ ಜಾಲತಾಣದಿಂದ (website) ಸಂಗ್ರಹಿಸಲಾಗಿದೆ.

**ವಿಶ್ಲೇಷಣೆ :**

* ಪ್ರಾಥಮಿಕ ವಿಶ್ಲೇಷಣೆಯನ್ನು ಸಂಘಟಿತವಾಗಿ ಮಾಡಲಾಗಿದೆ. ಜೂನ್ 2011 ರಿಂದ ಮೇ 2012ರವರೆಗೆ ಹಲವಾರು ಸಭೆಗಳನ್ನು ನಡೆಸಲಾಯಿತು. ಕರ್ನಾಟಕ ಸಾಮಾಜಿಕ ಕಾವಲು ಪಡೆಯ ಸದಸ್ಯರು 13ನೇ ವಿಧಾನಸಭೆಯ ಮತ್ತು ಪರಿಷತ್ತಿನ 115ನೇ ಅಧಿವೇಶನದಲ್ಲಿ ಕೇಳಿಬಂದ ವಿವಿಧ ಇಲಾಖೆಗಳ ಮೇಲಿನ ಪ್ರಶ್ನೋತ್ತರಗಳನ್ನು ವಿಶ್ಲೇಷಿಸಲು ತೊಡಗಿದರು. ಈ ಒಂದು ಪ್ರಕ್ರಿಯೆಯಲ್ಲಿ ಕಳೆದ ಹಲವಾರು ವರ್ಷಗಳಿಂದ ವಿಧಾನಸಭಾ ಅಧಿವೇಶನಗಳಲ್ಲಿ ಕೇಳಿಬಂದ ಪ್ರಶ್ನೋತ್ತರಗಳನ್ನು ಮಕ್ಕಳ ಹಕ್ಕುಗಳ ದೃಷ್ಟಿಕೋನದಲ್ಲಿ ವಿಶ್ಲೇಷಿಸುತ್ತಿರುವ ಕರ್ನಾಟಕ ಮಕ್ಕಳ ಹಕ್ಕುಗಳ ನಿಗಾ ಕೇಂದ್ರದ ಕೊಡುಗೆ ಅಪಾರ.(http://www.kla.kar.nic.in/karnataka.htm)


# ಕರ್ನಾಟಕ ವಿಧಾನಸಭೆ ಮತ್ತು ಪರಿಷತ್ತು – ಒಂದು ನೋಟ


ಕರ್ನಾಟಕ ವಿಧಾನಮಂಡಲ ಎರಡು ಸದನಗಳನ್ನು ಹೊಂದಿದೆ – ವಿಧಾನಸಭೆ (ಕೆಳ ಮನೆ) ಮತ್ತು ವಿಧಾನ ಪರಿಷತ್ತು (ಮೇಲ್ಮನೆ). ಭಾರತ ದೇಶದಲ್ಲಿ ಎರಡು ಸದನಗಳನ್ನು ಹೊಂದಿದ ಆರು ರಾಜ್ಯಗಳಲ್ಲಿ ಕರ್ನಾಟಕವೂ ಒಂದಾಗಿದೆ (ಉಳಿದ ರಾಜ್ಯಗಳು ಆಂಧ್ರಪ್ರದೇಶ, ಬಿಹಾರ, ಜಮ್ಮು–ಕಾಶ್ಮೀರ, ಮಹಾರಾಷ್ಟ್ರ ಮತ್ತು ಉತ್ತರ ಪ್ರದೇಶ).


ವಿಧಾನಸಭಾ ಸದಸ್ಯರು ನೇರವಾಗಿ ಸಾಮಾನ್ಯ ಚುನಾವಣೆಗಳ ಮೂಲಕ ಆಯ್ಕೆಯಾದರೆ ವಿಧಾನ ಪರಿಷತ್ತು ಸದಸ್ಯರು, ವಿಧಾನಸಭೆ, ಸ್ಥಳೀಯ ಸಂಸ್ಥೆಗಳು, ಶಿಕ್ಷಕರು ಮತ್ತು ಪದವೀಧರರಿಂದ ಆಯ್ಕೆಯಾಗುತ್ತಾರೆ.

ಕರ್ನಾಟಕ ವಿಧಾನಪರಿಷತ್ತು 75 ಸದಸ್ಯರನ್ನು ಹೊಂದಿದ್ದು ಅವರ ಅವಧಿ ಆರು ವರ್ಷದ್ದಾಗಿರುತ್ತದೆ. ವಿಧಾನಸಭೆಯು 224 ಸದಸ್ಯರನ್ನು ಹೊಂದಿರುತ್ತದೆ. ಒಬ್ಬ ಸದಸ್ಯರನ್ನು ಆಂಗ್ಲ–ಭಾರತೀಯರ ಸಮುದಾಯದ ಪ್ರತಿನಿಧಿಯಾಗಿ ಸರ್ಕಾರ ಆಯ್ಕೆ ಮಾಡುತ್ತದೆ. ವಿಧಾನಸಭಾ ಸದಸ್ಯರನ್ನು ಆಯ್ಕೆ ಮಾಡಲು ರಾಜ್ಯವನ್ನು 224 ವಿಧಾನಸಭಾ ಕ್ಷೇತ್ರಗಳನ್ನಾಗಿ ವಿಭಾಗಿಸಲಾಗಿದೆ. ವಿಧಾನಸಭಾ ಸದಸ್ಯರ ಅಧಿಕಾರಾವಧಿ ಐದು ವರ್ಷಗಳು. ಸದಸ್ಯರು ಮರಣ ಹೊಂದಿದರೆ ಅಥವಾ ರಾಜೀನಾಮೆ ನೀಡಿದರೆ ಅಥವಾ ಅನರ್ಹಗೊಂಡರೆ ಅವರು ಪ್ರತಿನಿಧಿಸುವ ಕ್ಷೇತ್ರದಲ್ಲಿ ಮರುಚುನಾವಣೆ ನಡೆಯುತ್ತದೆ. ಯಾವ ಪಕ್ಷವು ಹೆಚ್ಚು ಸ್ಥಾನಗಳನ್ನು ಪಡೆಯುತ್ತದೆಯೋ ಆ ಪಕ್ಷವು ಆಡಳಿತ ನಡೆಸುತ್ತದೆ. ವಿಧಾನಪರಿಷತ್ತಿನ ಸದಸ್ಯರ ಅಧಿಕಾರಾವಧಿ 6 ವರುಷಗಳು. ಇಲ್ಲಿ ಪದವೀಧರರ ಕ್ಷೇತ್ರ (7 ಸದಸ್ಯರು), ಶಿಕ್ಷಣ ಕ್ಷೇತ್ರ (7), ಸ್ಥಳೀಯ [illegible] ಶಾಶ್ವತ ಸದನವಾಗಿದೆ. [illegible] ಗಳು ನಡೆಯುತ್ತಿರುತ್ತದೆ.


## [illegible] 2012ರ ಪ್ರಕಾರ)





ಅಧಿವೇಶನ ನಡೆದ ದಿನಗಳು – ವಿಧಾನ ಪರಿಷತ್
46 28 54 60 49 84 58 88 58 51 69 33 45 58 57 4 79 93 47 53 57 41 58 49 61 44 59 50 50 46 42 74 39 21 55 40 4 54 40 47 46 52 39 39 69 39 49 44 35 51 55 57 17 43 29 34 9
1956' 1957' 1958' 1959' 1960' 1961' 1962' 1963' 1964' 1965' 1966' 1967' 1968' 1969' 1970' 1971' 1972' 1973' 1974' 1975' 1976' 1977' 1978' 1979' 1980' 1981' 1982' 1983' 1984' 1985' 1986' 1987' 1988' 1989' 1990' 1991' 1992' 1993' 1994' 1995' 1996' 1997' 1998' 1999' 2000' 2001' 2002' 2003' 2004' 2005' 2006' 2007' 2008' 2009' 2010' 2011' 2012'



ಅಧಿವೇಶನದ ದಿನಗಳ ಸಂಖ್ಯೆ
269 375 365 226 427 337 103 221 246 235 252 190 111
1st (1952-1957)
2nd (1957-1962)
3rd (1962-1967)
4th (1967-1971)
5th (1972-1977)
6th (1978-1983)
7th (1983-1985)
8th (1985-1989)
9th (1989-1994)
10th (1994-1999)
11th (1999-2004)
12th (2004-2007)
13th (2008-present)


## ರಾಜ್ಯಪಾಲರ ಹೆಸರು ಮತ್ತು ದಿನಗಳು:1956–2012





## ರಾಜ್ಯದ ಮುಖ್ಯಮಂತ್ರಿಗಳು: 1947–2012




1952 ರಿಂದ ವಿಧಾನಸಭಾ ಅಧ್ಯಕ್ಷರುಗಳು
34
695
750
1906
2275
1296
2184
724
724
783
1735
1129
1408
1762
1686
1455
529
891
ದಿನಗಳು


1952 ರಿಂದ ವಿಧಾನ ಪರಿಷತ್ ಅಧ್ಯಕ್ಷರುಗಳು
1437
37
337
555
621
30
1383
38
683
20
620
61
61
140
763
1400
643
28
729
19
731
268
13
748
129
1715
247
517
20
50
2122
431
922
396
457
291
452
35
699
720
ದಿನಗಳು

# ಪ್ರಸ್ತುತ ಸರಕಾರದ ಮಂತ್ರಿಗಳು ಹೊಂದಿರುವ ಖಾತೆಗಳು (26 ಏಪ್ರಿಲ್ 2012ರ ಪ್ರಕಾರ)




(ಮೂಲ ಮಾಹಿತಿ : http://www.kla.kar.nic.in/karnataka.htm)

# ವಿಧಾನಮಂಡಲದ ಕಾರ್ಯಕಲಾಪಗಳು – ಒಂದು ಪರಿಚಯ

**ಅಧಿವೇಶನಗಳು:** ಕರ್ನಾಟಕದಲ್ಲಿ ಶಾಸನ ಸಭೆ ವರ್ಷದಲ್ಲಿ ಮೂರು ಬಾರಿ ಸೇರುತ್ತದೆ (ಆಯವ್ಯಯ, ಮುಂಗಾರು ಮತ್ತು ಚಳಿಗಾಲದ ಅಧಿವೇಶನಗಳು). ಸರ್ಕಾರದ ಇತರ ವ್ಯವಹಾರಗಳಿದ್ದರೆ, ಆವಶ್ಯಕತೆ ಇದ್ದಲ್ಲಿ ಇತರ ಸಮಯಗಳಲ್ಲಿಯೂ ಅಧಿವೇಶನಗಳನ್ನು ನಡೆಸಬಹುದು.

**ಹಾಜರಿ ಇರಲೇಬೇಕಾದ ಸದಸ್ಯರ ನಿರ್ದಿಷ್ಟ ಸಂಖ್ಯೆ (ಕೋರಂ):** ನಾಮಾಂಕಿತರಾದ ಸದಸ್ಯರೂ ಸೇರಿದಂತೆ, ಶಾಸಕಾಂಗ ಸಭೆಯ ಸದಸ್ಯರ ಸಂಖ್ಯೆ 225. ಈ ಸಂಖ್ಯೆಯ 1/10ರಷ್ಟು ಭಾಗವಿದ್ದರೂ, ವಿಧಾನಸಭೆಯಲ್ಲಿ ಹಾಜರಿ ಇರಲೇಬೇಕಾದ ಸದಸ್ಯರ ಕನಿಷ್ಟ ಸಂಖ್ಯೆಯಾಗುತ್ತದೆ. ಆದ್ದರಿಂದಲೇ, ಯಾವುದೇ ಸಭೆಯಲ್ಲಿ ಕನಿಷ್ಟ 23 ಸದಸ್ಯರಿರುವುದು ಆವಶ್ಯಕ. ಶಾಸಕಾಂಗ ಸಭೆಯ ಅಧ್ಯಕ್ಷ ಅಥವಾ ಸಭೆಯ ಅಧ್ಯಕ್ಷತೆ ವಹಿಸುವವರೂ ಈ ಸಂಖ್ಯೆಯಲ್ಲಿ ಸೇರಿರುತ್ತಾರೆ.

ಆವಶ್ಯಕ ಸಂಖ್ಯೆಯ ಸದಸ್ಯರು ಇಲ್ಲದಿದ್ದರೆ, ಶಾಸಕಾಂಗ ಸಭೆಯ ಅಧಿವೇಶನದ ಆರಂಭದಲ್ಲಿ, ಅಧ್ಯಕ್ಷ ಸ್ಥಾನದಲ್ಲಿರುವ ಯಾರೂ ಅಧ್ಯಕ್ಷ ಸ್ಥಾನವನ್ನು ಅಲಂಕರಿಸುವುದಿಲ್ಲ. ಅಧಿವೇಶನ ಸೇರಿದಾಗ, ಕನಿಷ್ಟ ಸಂಖ್ಯೆಯ ಸದಸ್ಯರಿಲ್ಲದಿರುವುದರ ಕುರಿತು ಸಭಾಧ್ಯಕ್ಷರ ಗಮನವನ್ನು ಸೆಳೆದರೆ ಸಭಾಧ್ಯಕ್ಷರ ಕಛೇರಿಯು ವಿಧಾನ ಸಭೆಯ ಅಧಿವೇಶನವನ್ನು ಮುಂದಿನ ದಿನಕ್ಕೆ ದೂಡುತ್ತಾರೆ ಅಥವಾ ಕನಿಷ್ಟ ಇರಲೇಬೇಕಾದ ಸಂಖ್ಯೆಯ ಸದಸ್ಯರು ಸೇರುವವರೆಗೆ ಸಭೆಯನ್ನು ಮುಂದೂಡುತ್ತಾರೆ.

## ಶಾಸನ ಸಭೆಯ ಉಭಯ ಸದನಗಳ ಕಾರ್ಯಕಲಾಪಗಳು

### ಎ. ರಾಜ್ಯಪಾಲರ ಭಾಷಣ:

ವಿಧಾನಸಭೆಗೆ ಪ್ರತಿ ಬಾರಿ ಸಾರ್ವತ್ರಿಕ ಚುನಾವಣೆ ನಡೆದ ನಂತರ ನಡೆಯುವ ವಿಧಾನಸಭೆಯ ಪ್ರಥಮ ಅಧಿವೇಶನದ ಆರಂಭದಲ್ಲಿ ಮತ್ತು ಪ್ರತಿ ವರ್ಷದ ಆರಂಭದಲ್ಲಿ ನಡೆಯುವ ವಿಧಾನ ಸಭೆಯ ಪ್ರಥಮ ಅಧಿವೇಶನದಲ್ಲಿ ರಾಜ್ಯಪಾಲರು ವಿಧಾನಸಭೆ ಮತ್ತು ವಿಧಾನ ಪರಿಷತ್ತಿನ ಜಂಟಿ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾರೆ. ಈ ಭಾಷಣದಲ್ಲಿ ಹಿಂದಿನ ವರ್ಷದ ಸರ್ಕಾರದ ಚಟುವಟಿಕೆಗಳು ಮತ್ತು ಸಾಧನೆಗಳ ಪರಾಮರ್ಷೆ ಮತ್ತು ಅಧಿವೇಶನದ ಕಾರ್ಯಕಲಾಪಗಳ ಬಗ್ಗೆ ಸಂಕ್ಷಿಪ್ತ ಪರಿಚಯವಿರುತ್ತದೆ. ಅಧಿಕಾರದಲ್ಲಿರುವ ಪಕ್ಷದ ಒಬ್ಬ ಹಿರಿಯ ಸದಸ್ಯರು ರಾಜ್ಯಪಾಲರ ಭಾಷಣಕ್ಕೆ ವಿದ್ಯುಕ್ತವಾಗಿ ವಂದನೆ ಸಲ್ಲಿಸುತ್ತಾರೆ ಮತ್ತು ಅದೇ ಪಕ್ಷದ ಇನ್ನೊಬ್ಬ ಸದಸ್ಯರು ಅದಕ್ಕೆ ಅನುಮೋದನೆ ನೀಡುತ್ತಾರೆ.

### ಬಿ. ವಿದ್ಯುಕ್ತ ಸೂಚನೆಗಳು:

ಕರ್ನಾಟಕ ವಿಧಾನಸಭೆಯ ಕಾರ್ಯಕಲಾಪಗಳ ವಿಧಿವಿಧಾನಗಳಲ್ಲಿ 'ವಿದ್ಯುಕ್ತ ಸೂಚನೆ' (ಮೋಷನ್) ಎಂಬ ಪದದ ವಿವರಣೆ ಇಲ್ಲ. ಆದರೆ, ವಿಧಾನಸಭೆಯ ನಿರ್ಧಾರವನ್ನು ಪಡೆದುಕೊಳ್ಳಲು ವಿಧಾನಸಭೆಗೆ ಸಲ್ಲಿಸಿದ ಯಾವುದೇ ಸಲಹೆ ಸೂಚನೆಗಳನ್ನು ವಿದ್ಯುಕ್ತ ಸೂಚನೆ ಎನ್ನುತ್ತಾರೆ. ಕಾರ್ಯಕಲಾಪಗಳ ವಿಧಿಯಡಿಯಲ್ಲಿ ಸೇರಿರುವ ಕೆಲವು ವಿಷಯಗಳನ್ನು ಹೊರತುಪಡಿಸಿ, ವಿಧಾನಸಭೆಯ ಚರ್ಚೆಗಳು ಯಾವಾಗಲೂ ನಿರ್ದಿಷ್ಟ ಪಡಿಸಿದ ಸೂಚನೆಗಳಂತೆಯೇ ನಡೆಯುತ್ತವೆ. ಸಾಮಾನ್ಯ ವಿಧಿಗಳಿಗೆ ಹೊರತಾದ ವಿಷಯಗಳೆಂದರೆ, ಗಮನ ಸೆಳೆಯುವ ಸೂಚನಾ ಪತ್ರಗಳು (ಪ್ರಕಟಣೆಗಳು), ಅಲ್ಪಾವಧಿಯ ಚರ್ಚೆಗಳು, ಆಯವ್ಯಯದ ಬಗ್ಗೆ ಸಾಮಾನ್ಯ ಚರ್ಚೆಗಳು.

'ವಿದ್ಯುಕ್ತ ಸೂಚನೆ'ಯನ್ನು ಸೂಚಿಸಲು ಸದಸ್ಯರು ಕಾರ್ಯದರ್ಶಿಗಳಿಗೆ ನೀಡುವ ಸೂಚನಾಪತ್ರ ಕೆಳಗಿನ ಶರತ್ತುಗಳನ್ನು ಪೂರೈಸಬೇಕು.

* ಯಾವುದಾದರೂ ಒಂದು ವಿಷಯ ಕುರಿತು ಸಮರ್ಪಕವಾಗಿ ಕೇಂದ್ರೀಕರಿಸಿರಬೇಕು.
* ವಾದ, ನಿರ್ಣಯ, ದೋಷಾರೋಪಣೆ ಮತ್ತು ವ್ಯಂಗ್ಯ/ಅಣಕ ಅಥವಾ ಅಪಖ್ಯಾತಿಯ ಅಭಿವ್ಯಕ್ತಿಯನ್ನು ತಡೆಯಬೇಕು.
* ಚರ್ಚಿಸಲು ತೆಗೆದುಕೊಂಡ ವಿಷಯು ಇತ್ತೀಚಿನದ್ದಾಗಿರಬೇಕು ಅಥವಾ ಪ್ರಸ್ತುತವಾಗಿರಬೇಕು.
* ವಿಶೇಷ ಸೌಲಭ್ಯಗಳ ವಿಷಯವನ್ನು ಎತ್ತಬಾರದು.
* ಅದೇ ಅಧಿವೇಶನದಲ್ಲಿ ಹಿಂದೆ ಚರ್ಚಿಸಿದ್ದ ಅಥವಾ ಮುಂದೆ ಚರ್ಚಿಸಲಾಗುವ ವಿಷಯವನ್ನು ಪುನಃ ತೆಗೆಯಬಾರದು.

**ವಿದ್ಯುಕ್ತ ಸೂಚನೆಗಳಿಗೆ ಸಮಯ ನೀಡುವುದು ಮತ್ತು ಚರ್ಚೆ :**

ವಿಧಾನಸಭೆಯ ಕಾರ್ಯಕಲಾಪಗಳ ಸ್ಥಿತಿಯನ್ನು ಪರಿಗಣಿಸಿ, ಮತ್ತು ವಿಧಾನಸಭೆಯ ನಾಯಕರೊಂದಿಗೆ ಸಮಾಲೋಚನೆ ನಡೆಸಿ (ಅಥವಾ ಕಾರ್ಯಕಲಾಪಗಳ ಸಮಿತಿಯ ಶಿಫಾರಸ್ಸುಗಳ ಮೇರೆಗೆ), ಸಭಾಧ್ಯಕ್ಷರು ಈ ರೀತಿಯ ವಿದ್ಯುಕ್ತ ಸೂಚನೆಗಳಿಗೆ ಒಂದು ದಿನ ಅಥವಾ ಕೆಲವು ದಿನಗಳು ಅಥವಾ ದಿನದ ಒಂದು ಭಾಗವನ್ನು ನೀಡಿರುತ್ತಾರೆ.

**ನಿಲುವಳಿ ಸೂಚನಾ ಪತ್ರವನ್ನು ಅಧಿವೇಶನದ ಪ್ರಾರಂಭವಾಗುವ ಒಂದು ಗಂಟೆ ಮೊದಲು ನೀಡಬೇಕು. ಚರ್ಚೆಯ ಅವಧಿ ಎರಡು ಗಂಟೆಗಳಿಗಿಂತ ಕಡಿಮೆ ಇರಬಾರದು. ಪ್ರಶ್ನೆಗಳನ್ನು ಹೀಗೆ ಕೇಳಬೇಕು: 'ವಿಧಾನ ಸಭೆಯ ನಿಲುವಳಿ ಸೂಚನೆಯನ್ನು ನೀಡಲಾಗಿದೆ'. ಸಭಾಧ್ಯಕ್ಷರು ಹೆಚ್ಚಿನ ಕಾಲಾವಧಿಯನ್ನು ಕೊಡದಿದ್ದ ಪಕ್ಷದಲ್ಲಿ ಪ್ರತಿ ಸದಸ್ಯರ ಭಾಷಣವನ್ನು 15 ನಿಮಿಷಗಳಿಗೆ ಸೀಮಿತಗೊಳಿಸಬೇಕು.**

**1. ನಿಲುವಳಿ ಸೂಚನೆಗಳು**

ಕೆಲವೊಮ್ಮೆ, ಸಾರ್ವಜನಿಕ ಪ್ರಾಮುಖ್ಯತೆಯ ತುರ್ತಿನ ಘಟನೆ ಸಂಭವಿಸಬಹುದು ಮತ್ತು ವಿಧಾನಸಭೆಯ ಸದಸ್ಯರು ಸಹಜವಾಗಿಯೇ ಈ ವಿಷಯವನ್ನು ವಿಧಾನಸಭೆಯ ಮುಂದೆ ತರಲು ತವಕದಿಂದಿರಬಹುದು. ವಿಧಾನಸಭೆಯ ದಿನನಿತ್ಯದ ಕಾರ್ಯಕಲಾಪಗಳನ್ನು ನಿಲ್ಲಿಸಿ, 'ನಿಲುವಳಿ ಸೂಚನೆ' ಮೂಲಕ ಈ ರೀತಿಯ ಸಾರ್ವಜನಿಕ ಪ್ರಾಮುಖ್ಯತೆಯ ತುರ್ತು ವಿಷಯಗಳನ್ನು ಕೈಗೆತ್ತಿಕೊಳ್ಳಬಹುದು.

ಸಾರ್ವಜನಿಕ ಪ್ರಾಮುಖ್ಯತೆಯ ತುರ್ತು ವಿಷಯವನ್ನು ಚರ್ಚಿಸುವ ಉದ್ದೇಶಕ್ಕಾಗಿ, ವಿಧಾನಸಭೆಯ ಅಧ್ಯಕ್ಷರ ಅನುಮತಿ ಇಲ್ಲದೆಯೇ ನಿಲುವಳಿ ಸೂಚನೆಯನ್ನು ಮುಂದಿಡಬಹುದು. ನಿಲುವಳಿ ಸೂಚನೆಗೆ ಸಭಾಧ್ಯಕ್ಷರ ಅನುಮತಿ ದೊರೆಯುವ ಮುನ್ನ ಈ ಕೆಳಗಿನ ಷರತ್ತುಗಳು ಪೂರೈಕೆಯಾಗಬೇಕು:

* ಸೂಚನೆ ನಿರ್ದಿಷ್ಟವಾಗಿರಬೇಕು. ಅಂದರೆ, ರಾಜ್ಯದ ಆಹಾರದ ಸ್ಥಿತಿಗತಿ ಅಥವಾ ಕಾನೂನು ಹಾಗೂ ಸುವ್ಯವಸ್ಥೆ ಸ್ಥಿತಿಗತಿಯಂಥ ಬೃಹತ್ತಾದ ಅಥವಾ ಸಾಮಾನ್ಯ ವಿಷಯಗಳ ಬಗ್ಗೆ ಇರಬಾರದು.
* ತುರ್ತು ಸ್ವಭಾವದ ವಿಷಯವಾಗಿರಬೇಕು, ಅದರ ಕುರಿತು ಯಾವುದೇ ವಿಳಂಬ ಮಾಡದೇ ಶೀಘ್ರವೇ ಕ್ರಮ ಕೈಗೊಳ್ಳಬೇಕಾದ ವಿಷಯವಾಗಿರಬೇಕು.
* ಅತ್ಯಂತ ಪ್ರಮುಖ ಸಾರ್ವಜನಿಕ ವಿಷಯವಾಗಿರಬೇಕು.
* ಸರ್ಕಾರದೊಂದಿಗೆ ಆಡಳಿತದೊಂದಿಗೆ ನೇರ ಅಥವಾ ಪರೋಕ್ಷ ಸಂಬಂಧ ಹೊಂದಿರಬೇಕು.
* ಸರ್ಕಾರ ಮಾಡಿರುವ ಯಾವುದೇ ಕೆಲಸದ ಬಗ್ಗೆ ಅಥವಾ ಮಾಡಬೇಕಾದ ಕೆಲಸವನ್ನು ಮಾಡದೇ ಇದ್ದುದಕ್ಕಾಗಿ ಸರ್ಕಾರದ ವಿರುದ್ಧ ಟೀಕೆಯಾಗಿರಬೇಕು.

> ಯಾವುದಾದರೂ ಪ್ರದೇಶದಲ್ಲಿ ಅನಿರೀಕ್ಷಿತ ಸಾಂಕ್ರಾಮಿಕ ರೋಗ, ಯಾವುದಾದರೂ ಪಿಡುಗಿನ ಅನಿರೀಕ್ಷಿತ ದಾಳಿ, ಪ್ರವಾಹ ಮತ್ತು ಅದರಿಂದ ಉಂಟಾದ ಹಾನಿ, ಹರತಾಳ, ಬೀಗಮುದ್ರೆ ಇವೇ ಮೊದಲಾದ ವಿಷಯಗಳನ್ನು ಗಮನ ಸೆಳೆಯುವ ಸೂಚನಾ ಪತ್ರಗಳ ಮೂಲಕ ಸದಸ್ಯರು ವಿಧಾನ ಸಭೆಯಲ್ಲಿ ಚರ್ಚೆಗಾಗಿ ವಿಷಯವನ್ನು ಎತ್ತಬಹುದು ಹಾಗೂ ಸಂಬಂಧ ಪಟ್ಟ ಮಂತ್ರಿಗಳು ಇದಕ್ಕೆ ಹೇಳಿಕೆಗಳನ್ನು ನೀಡುತ್ತಾರೆ.

**2. ಸಾರ್ವಜನಿಕ ಪ್ರಾಮುಖ್ಯತೆಯ ತುರ್ತು ವಿಷಯಗಳ ಕುರಿತು ಅಲ್ಪಾವಧಿಯ ಚರ್ಚೆ :**

ಔಪಚಾರಿಕ ಮತವಿಲ್ಲದೆ ಅಥವ ವಿಧಾನಸಭೆಯ ನಿರ್ಣಯವಿಲ್ಲದೆ ಚರ್ಚೆ ಮಾಡುವುದು ಸದನದ ಒಂದು ಸಾಧನ. ಸಾರ್ವಜನಿಕ ಮಹತ್ವದ ತುರ್ತು ವಿಷಯದ ಚರ್ಚೆಗೆ ಸದಸ್ಯರೊಬ್ಬ ಸೂಚನಾ ಪತ್ರ ನೀಡಬಹುದು. ವಿಧಾನಸಭೆಯ ವಿಷಯದಲ್ಲಿ ಈ ರೀತಿಯ ಚರ್ಚೆ ಮಾಡಲು ಕಾರಣಗಳನ್ನು ನೀಡುವ ವಿವರಣೆ ಟಿಪ್ಪಣಿಯೊಂದಿಗೆ ಸೂಚನಾಪತ್ರವನ್ನು ನೀಡಬೇಕು ಮತ್ತು ಇದಕ್ಕೆ ಬೆಂಬಲವಾಗಿ ಕನಿಷ್ಟ ಇನ್ನಿಬ್ಬರು ಸದಸ್ಯರ ಸಹಿಯನ್ನು ಹೊಂದಿರಬೇಕು. ಸೂಚನಾ ಪತ್ರವನ್ನು ನೀಡಿರುವ ಸದಸ್ಯರು ಸಂಕ್ಷಿಪ್ತ ಹೇಳಿಕೆಯನ್ನು ನೀಡಬಹುದು ಮತ್ತು ಮಂತ್ರಿಗಳೂ ಸಂಕ್ಷಿಪ್ತ ಉತ್ತರ ನೀಡಬಹುದು. ಚರ್ಚೆ ಒಂದು ಗಂಟೆಯ ಅವಧಿಯನ್ನು ಮೀರಬಾರದು. ಈ ರೀತಿಯ ಚರ್ಚೆಗೆ ಸಂಬಂಧಿಸಿದಂತೆ, ವಿಧಾನಸಭೆಯ ಮುಂದೆ ವಿದ್ಯುಕ್ತ ಸೂಚನೆ ಅಥವಾ ಮತದಾನ ಇರಲಾರದು.

**3. ಸಾರ್ವಜನಿಕ ಮಹತ್ವದ ತುರ್ತು ವಿಷಯಗಳೆಡೆಗೆ ಗಮನ ಸೆಳೆಯಲು** ಹಲವು ಸಂಸದೀಯ ಸಾಧನಗಳನ್ನು ನಿರ್ಮಿಸಲಾಗಿದೆ. ಸಾರ್ವಜನಿಕ ಮಹತ್ವದ ತುರ್ತು ವಿಷಯಗಳನ್ನು ಸದನದ ಮುಂದೆ ತರಲು ಸದಸ್ಯರಿಗೆ ನೆರವಾಗುವುದು ಇದರ ಉದ್ದೇಶ. ಈ ರೀತಿಯ ಒಂದು ಸಾಧನ, ಗಮನ ಸೆಳೆಯುವ ಸೂಚನಾ ಪತ್ರ. "ಒಬ್ಬ ಸದಸ್ಯರು, ಸಭಾಧ್ಯಕ್ಷರ ಅನುಮತಿಯೊಂದಿಗೆ ಮಂತ್ರಿಯೊಬ್ಬರ ಗಮನವನ್ನು ಸಾರ್ವಜನಿಕ ಮಹತ್ವವಿರುವ ತುರ್ತು ವಿಷಯದೆಡೆಗೆ ಸೆಳೆಯಬಹುದು ಹಾಗೂ ಮಂತ್ರಿಗಳು ಸಂಕ್ಷಿಪ್ತ ಹೇಳಿಕೆಯನ್ನು ನೀಡಬಹುದು. ಈ ರೀತಿಯ ಹೇಳಿಕೆಗಳ ಬಗ್ಗೆ ಚರ್ಚೆ ಇರುವುದಿಲ್ಲ. ಒಂದು ಅಧಿವೇಶನದಲ್ಲಿ ಈ ರೀತಿಯ ಎರಡಕ್ಕಿಂತ ಹೆಚ್ಚು ಪ್ರಶ್ನೆಗಳನ್ನು ಚರ್ಚಿಸಲಾಗದು".

4. **ಮಂತ್ರಿಗಳ ವಿರುದ್ಧ ಅವಿಶ್ವಾಸ ನಿರ್ಣಯ:** ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮಂತ್ರಿಮಂಡಲದ ಸದಸ್ಯರು ಸಾಮುದಾಯಿಕವಾಗಿ ವಿಧಾನಸಭೆಗೆ ಜವಾಬ್ದಾರರಾಗಿದ್ದಾರೆ. ಆದ್ದರಿಂದ ವಿಧಾನಸಭೆಯ ಸದಸ್ಯರು ಯಾವಾಗಬೇಕಾದರೂ ಮಂತ್ರಿಮಂಡಲದ ವಿರುದ್ಧ ಅವಿಶ್ವಾಸ ನಿರ್ಣಯವನ್ನು ಮಂಡಿಸುವ ಹಕ್ಕನ್ನು ಹೊಂದಿದ್ದಾರೆ. ಯಾರೇ ಒಬ್ಬ ಮಂತ್ರಿಯ ವಿರುದ್ಧ ಅವಿಶ್ವಾಸ ಸೂಚನೆಯನ್ನು ನೀಡುವಂತಿಲ್ಲ, ಖಂಡನಾ ನಿರ್ಣಯವನ್ನು ಮಾತ್ರ ಮಾಡಬಹುದು.

**5.** ಯಾವ ಅಧಿವೇಶನದಲ್ಲಿ ಸದಸ್ಯರು ಅವಿಶ್ವಾಸ ನಿರ್ಣಯವನ್ನು ಮಂಡಿಸಲು ಬಯಸುತ್ತಾರೋ ಆ ಕುರಿತು ಮುಂಚಿತವಾಗಿ ಅವಿಶ್ವಾಸದ ಸೂಚನೆಯನ್ನು ಕಾರ್ಯದರ್ಶಿಗಳಿಗೆ ಕೊಡಬೇಕು. ಅವಿಶ್ವಾಸದ ಸೂಚನೆಯನ್ನು ಮಂಡಿಸುವ ಸದಸ್ಯರು ಪ್ರಶ್ನೋತ್ತರ ವೇಳೆ ಮುಗಿದ ನಂತರದಲ್ಲಿ ಹಾಗೂ ದಿನದ ಕಲಾಪಗಳ ಪಟ್ಟಿಯಲ್ಲಿ ನಿಗದಿಯಾಗಿರುವ ಯಾವುದೇ ಕಲಾಪ ಆರಂಭಗೊಳ್ಳುವುದರ ಮೊದಲು ಸದನದ ಸದಸ್ಯರ ವಿಶ್ವಾಸವನ್ನು ಪಡೆದುಕೊಳ್ಳಬೇಕು. 23 ಅಥವಾ ಅದಕ್ಕಿಂತ ಹೆಚ್ಚಿನ ಸದಸ್ಯರು ನಿರ್ಣಯವನ್ನು ಬೆಂಬಲಿಸಿದಲ್ಲಿ ಸಭಾಧ್ಯಕ್ಷರು ಸದನದ ಮುಂದಿರುವ ದಿನದ ಕಲಾಪಗಳು ಮುಗಿದ ನಂತರ ನಿರ್ಣಯ ಮಂಡಿಸಲು ಸಮಯವನ್ನು ನಿಗದಿಪಡಿಸುತ್ತಾರೆ. ಈ ಬಗ್ಗೆ ಸದನದಲ್ಲಿ ಸದಸ್ಯರ ಭಾಷಣಕ್ಕೆ ಸಮಯದ ಮಿತಿಯನ್ನು ಸೂಚಿಸುತ್ತಾರೆ. ಚರ್ಚೆಯ ಕೊನೆಯಲ್ಲಿ ಮುಖ್ಯಮಂತ್ರಿಗಳು ಸದಸ್ಯರ ಆರೋಪಗಳಿಗೆ ಉತ್ತರಿಸುತ್ತಾರೆ. ನಿರ್ಣಯವನ್ನು ಮಂಡಿಸಿದ ಸದಸ್ಯರಿಗೆ ಉತ್ತರಿಸುವ ಹಕ್ಕಿದೆ. ಚರ್ಚೆ ಮುಗಿದ ನಂತರದಲ್ಲಿ ಸಭಾಧ್ಯಕ್ಷರು ನಿರ್ಣಯವನ್ನು ಮತಕ್ಕೆ ಹಾಕುತ್ತಾರೆ.

### ಸಿ. ಶೂನ್ಯ ವೇಳೆ

ಶಾಸನ ಸಭೆಯ ಕಾರ್ಯ ಕಲಾಪಗಳಲ್ಲಿ ಒಂದಾದ ಶೂನ್ಯ ವೇಳೆಯ ಆರಂಭವಾದುದು ಅರವತ್ತರ ದಶಕದಲ್ಲಿ. ಸದನದ ಸದಸ್ಯರು ಪ್ರಶ್ನೋತ್ತರ ವೇಳೆ ಮುಗಿದ ನಂತರದಲ್ಲಿ ಸಾರ್ವಜನಿಕ ಮಹತ್ವದ ಹಾಗೂ ತುರ್ತು ವಿಷಯಗಳೆಡೆಗೆ ಗಮನ ಸೆಳೆಯಲು ಆರಂಭಿಸಿದರು. ಕೆಲವೊಮ್ಮೆ ಮುಂಚಿತವಾಗಿ ಸಭಾಧ್ಯಕ್ಷರ ಅನುಮತಿ ಪಡೆದು ಮತ್ತು ಕೆಲವೊಮ್ಮೆ ಅನುಮತಿ ಪಡೆಯದೆಯೂ ಕೂಡ ವಿಷಯಗಳನ್ನು ಎತ್ತಲು ಆರಂಭಿಸಿದರು.

ಶಾಸನ ಸಭೆಯ ಕಾರ್ಯಕಲಾಪಗಳಿಗೆ ಸಂಬಂಧಿಸಿದಂತೆ ಕಾನೂನುಗಳು ಮಾತ್ರವಲ್ಲದೆ, ಕೆಲವೊಂದು ಸಂಪ್ರದಾಯಗಳೂ ಕೂಡ ಇವೆ **"ಶೂನ್ಯ ವೇಳೆ"**ಯೂ ಅಂತಹ ಸಂಪ್ರದಾಯಗಳಲ್ಲಿ ಒಂದು. ಸಂಸದೀಯ ವ್ಯವಹಾರಗಳ ಕಾನೂನುಗಳಡಿಯಲ್ಲಿನ ಕಲಾಪಗಳ ಹೊರತಾಗಿ ಕೂಡ, ಸದನದಲ್ಲಿ ವಿಷಯಗಳನ್ನು ಎತ್ತಲು ಸದಸ್ಯರಿಗೆ ಅನುಮತಿಯಿದೆ.

### ಡಿ. ಪ್ರಶ್ನೋತ್ತರ ವೇಳೆ

ಸರ್ಕಾರವನ್ನು ಟೀಕಿಸಿ, ನಿಯಂತ್ರಿಸುವುದು ಶಾಸಕಾಂಗದ ಕೆಲಸಗಳಲ್ಲಿ ಒಂದು. ಸರ್ಕಾರದ ಆಡಳಿತ ಯಂತ್ರದ ಕಾರ್ಯವೈಖರಿಯನ್ನು ಪ್ರಶ್ನಿಸಿ, ಸಂಬಂಧಿಸಿದ ಸಚಿವರಿಂದ ಉತ್ತರಗಳನ್ನು ಪಡೆದುಕೊಳ್ಳುವುದು ಕೂಡ ಶಾಸಕಾಂಗದ ಕೆಲಸಗಳ ಒಂದು ಭಾಗವಾಗಿದೆ.

ಪ್ರಶ್ನೋತ್ತರ ವೇಳೆಯು ಮಹತ್ವದಾಗಿದ್ದು, ಇದೊಂದು ಕಾರ್ಯಾಂಗದ ಚಟುವಟಿಕೆಗಳನ್ನು ಪರೀಕ್ಷಿಸುವ ಮತ್ತು ಪರಿಣಾಮಕಾರಿ ಸಂಸದೀಯ ನಿಯಂತ್ರಣ ಸಾಧನಗಳಲ್ಲಿ ಒಂದು. ಹಾಗಾಗಿಯೇ ಶಾಸನ ಸಭೆಯ ಉಭಯ ಸದನಗಳ ಪ್ರತಿ ಸಭೆಯ ಮೊದಲ ಒಂದು ಗಂಟೆಯ ಅವಧಿಯನ್ನು ಪ್ರಶ್ನೋತ್ತರ ವೇಳೆಗೆ ಮೀಸಲಾಗಿರಿಸಿದ್ದು, ಈ ಅವಧಿಯಲ್ಲಿ ಸರ್ಕಾರದ ಆಡಳಿತದ ಬಗ್ಗೆ ಸದಸ್ಯರು ಪ್ರಶ್ನಿಸಿ ಸಂಬಂಧಪಟ್ಟ ಸಚಿವರಿಂದ ಉತ್ತರಗಳನ್ನು ಪಡೆದುಕೊಳ್ಳುತ್ತಾರೆ.

**ಶಾಸನ ಸಭೆಯ ಉಭಯ ಸದನಗಳಲ್ಲಿ ಮೂರು ರೀತಿಯ ಪ್ರಶ್ನೋತ್ತರ ವಿಧಾನಗಳಿವೆ.**

**ಚುಕ್ಕೆ ಗುರುತಿನ ಪ್ರಶ್ನೆ:** ಚುಕ್ಕೆ ಗುರುತಿನ ಪ್ರಶ್ನೆಗೆ ಮೌಖಿಕವಾಗಿ ಉತ್ತರ ನೀಡಲಾಗುತ್ತದೆ. ಈ ಪ್ರಶ್ನೆಗಳಿಗೆ ಚುಕ್ಕೆ ಗುರುತನ್ನು ನೀಡಲಾಗಿರುತ್ತದೆ. ಸದನದಲ್ಲಿ ಬೆಳಿಗ್ಗೆ 11 ರಿಂದ ಸುಮಾರು ಒಂದು ಗಂಟೆ ಕಾಲ ಇದಕ್ಕೆ ಅವಕಾಶ. ಆಯ್ದ ಪ್ರಶ್ನೆಗಳನ್ನು ಅವುಗಳ ಆದ್ಯತೆ ಮೇರೆಗೆ ನಿರ್ಧರಿಸಲಾಗುತ್ತದೆ. ಚುಕ್ಕೆ ಗುರುತಿನ ಪ್ರಶ್ನೆಗಳನ್ನು ಕೇಳಲು ಪ್ರತ್ಯೇಕ ಅರ್ಜಿ ನಮೂನೆಯಿದೆ. ಶಾಸಕರು ನಿರ್ದಿಷ್ಟ ದಿನಗಳ ಮೊದಲೇ ಅರ್ಜಿ ತುಂಬಿ ಕಳುಹಿಸಬೇಕು. ಸದಸ್ಯರಿಗೆ ಒಂದು ದಿನದಲ್ಲಿ ಒಂದೇ ಚುಕ್ಕೆ ಗುರುತಿನ ಪ್ರಶ್ನೆ ಕೇಳಲು ಅವಕಾಶ ಮತ್ತು ದಿನದಲ್ಲಿ 15 ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಅವಕಾಶವಿದೆ.

**ಚುಕ್ಕೆ ಗುರುತಿಲ್ಲದ ಪ್ರಶ್ನೆ:** ಚುಕ್ಕೆ ಗುರುತಿಲ್ಲದ ಪ್ರಶ್ನೆಗೆ ಲಿಖಿತವಾಗಿ ಉತ್ತರ ನೀಡಿ, ಸದನ ಮುಂದಿಡಲಾಗುವುದು. ಈ ಪ್ರಶ್ನೆಯನ್ನು ಕೇಳಲು ಶಾಸಕರು ಮೊದಲೇ ಅರ್ಜಿ ನಮೂನೆಯನ್ನು ತುಂಬಿ ಕಳುಹಿಸಿರಬೇಕು. ಉತ್ತರಗಳನ್ನು ಪ್ರಶ್ನೋತ್ತರ ವೇಳೆಯ ಕೊನೆಯ ಭಾಗದಲ್ಲಿ ಮಂಡಿಸಲಾಗುವುದು ಮತ್ತು ಚರ್ಚೆಗಳ ಪಟ್ಟಿಯಲ್ಲಿ ಮುದ್ರಿಸಲಾಗಿರುವುದು.

**ಪ್ರಶ್ನೋತ್ತರ ವೇಳೆಗೆ ಯಾಕಿಷ್ಟು ಮಹತ್ವ**

* ವಿಧಾನಸಭೆಯ ಉಭಯ ಸದನದಗಳಲ್ಲಿ ನಡೆಯುವ ಪ್ರಶ್ನೋತ್ತರ ಅವಧಿ ಸರ್ಕಾರದ ನೀತಿ ನಿಯಮಾವಳಿ ರೂಪಿಸುವಲ್ಲಿ ಮಹತ್ತರ ಪಾತ್ರ ವಹಿಸುತ್ತದೆ. ಆದ್ದರಿಂದ ರಾಜ್ಯದ ನೀತಿ, ನಿಯಮಾವಳಿಗಳಲ್ಲಿ ಬದಲಾವಣೆ ಬಯಸುವವರು ಈ ಅವಧಿಯಲ್ಲಿ ತಮ್ಮ ವಿಷಯ ಪ್ರಸ್ತಾಪವಾಗುವಂತೆ ಪ್ರಯತ್ನಿಸುತ್ತಾರೆ.
* ಈ ಸಂದರ್ಭದಲ್ಲಿ ಕೇಳಿದ ಪ್ರಶ್ನೆಗೆ ಸಂಬಂಧಿಸಿದ ಇತ್ತೀಚಿನ ಮಾಹಿತಿ ಹಾಗೂ ವಿವರವನ್ನು ಸರ್ಕಾರ ನೀಡುತ್ತದೆ.
* ಸರ್ಕಾರದ ಕೆಲವು ಮಾಹಿತಿಗಳು ಜನ ಸಾಮಾನ್ಯರಿಗೆ ಸಿಗುವುದಿಲ್ಲ. ಆದರೆ ಶಾಸಕರು ಆ ಮಾಹಿತಿ ಪಡೆಯಬಹುದು. ಈ ಉತ್ತರಗಳು ನಿಖರವಾಗಿರಬೇಕು. ತಪ್ಪು ಹಾಗೂ ಸುಳ್ಳು ಮಾಹಿತಿಯನ್ನೊಳಗೊಂಡಿದ್ದರೆ, ಸರ್ಕಾರ ಅಥವಾ ಸಂಬಂಧಿಸಿದ ಸಚಿವಾಲಯದ ಹಕ್ಕು ಚ್ಯುತಿಯಾಗುತ್ತದೆ.
* ಸಾಂಸ್ಥಿಕ ಸಂಸ್ಥೆಗಳು, ಸರ್ಕಾರೇತರ ಸಂಸ್ಥೆಗಳು ಸೇರಿದಂತೆ ಅನೇಕ ಸಂಸ್ಥೆಗಳು ಮಾಹಿತಿಗಾಗಿ ಶಾಸನ ಸಭೆಯ ಪ್ರಶ್ನೆಗಳ ಮೇಲೆ ಅವಲಂಬಿತವಾಗಿವೆ.
* ಕೆಲವು ಬಾರಿ ಪ್ರಶ್ನೋತ್ತರ ಅವಧಿಯಲ್ಲಿ ಕೇಳಲಾಗುವ ಪ್ರಶ್ನೆಗಳಿಂದ ವಿವಿಧ ಸಮಿತಿಗಳು ನೇಮಕ ಆಗಬಹುದು. ಅವುಗಳಿಂದ ಕೆಲವು ಸಂಘ ಸಂಸ್ಥೆಗಳು, ಕಂಪೆನಿಗಳು ಅಥವಾ ವ್ಯಕ್ತಿಗಳಿಂದ ಲಾಭವಾಗುತ್ತದೆ ಹಾಗೂ ಇನ್ನು ಕೆಲವರಿಗೆ ಹಾನಿಯಾಗುತ್ತದೆ. ಇಂತಹ ವ್ಯಕ್ತಿಗಳು ಪ್ರಶ್ನೋತ್ತರ ಸಮಯವನ್ನು ತಮ್ಮ ಉಪಯೋಗಕ್ಕೆ ಬಳಸಿಕೊಳ್ಳುತ್ತಿರುವುದು ಕೂಡ ನಡೆದುಬಂದಿದೆ.

ಚರ್ಚೆಗೆಂದು ಆಯ್ಕೆಯಾಗಿದ್ದು, ಸದನದಲ್ಲಿ ಚರ್ಚಿಸಲು ಪಟ್ಟಿಗೆ ಸೇರ್ಪಡೆಯಾಗದ ಚುಕ್ಕೆ ಗುರುತಿನ ಪ್ರಶ್ನೆಗಳನ್ನು ಸಭಾಧ್ಯಕ್ಷರ ಆದೇಶದ ಮೇರೆಗೆ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಪಟ್ಟಿಗೆ ಸೇರಿಸಲಾಗುವುದು.

ಶಾಸಕರು ಎಷ್ಟು ಪ್ರಶ್ನೆಗಳನ್ನಾದರೂ ಕೇಳಬಹುದು. ಆದರೆ ಯಾವ ದಿನಾಂಕದಂದು ಪ್ರಶ್ನೆಗೆ ಉತ್ತರ ನೀಡಬೇಕೆಂದು ನಮೂದಿಸಿರಬೇಕು. ಉತ್ತರ ನೀಡಲು ಸಭಾಧ್ಯಕ್ಷರ ನಿರ್ದೇಶನದ ಹೊರತಾಗಿ ಕನಿಷ್ಠ 15 ದಿನಗಳು ಹಾಗೂ ಗರಿಷ್ಠ 30 ದಿನಗಳ ಅವಕಾಶವಿರುತ್ತದೆ

**ಪ್ರಶ್ನೆಗಳಿಗೆ ಉತ್ತರಿಸಲು ದಿನಗಳ ನಿಗದಿ:** ಸರ್ಕಾರದ ಸಚಿವಾಲಯಗಳು ಹಾಗೂ ಇಲಾಖೆಗಳನ್ನು ಐದು ಗುಂಪುಗಳನ್ನಾಗಿ ವಿಭಾಗಿಸಲಾಗಿದೆ (ಎ.ಬಿ.ಸಿ.ಡಿ ಮತ್ತು ಇ) ಮತ್ತು ವಾರದ ಐದು ದಿನಗಳಲ್ಲಿ ಒಂದೊಂದು ದಿನವನ್ನು ಪ್ರತಿ ಒಂದು ಗುಂಪಿಗೆ ನಿಗದಿಪಡಿಸಲಾಗಿದ್ದು ಸಂಬಂಧಿಸಿದ ಸಚಿವರಿಗೆ ಉತ್ತರಿಸಲು ಅನುವು ಮಾಡಿಕೊಡಲಾಗಿದೆ.

**ಶಾರ್ಟ್ ನೋಟಿಸ್ ಪ್ರಶ್ನೆಗಳು:** ಇದು ಸಾರ್ವಜನಿಕ ಮಹತ್ವದ ಹಾಗೂ ತುರ್ತು ವಿಷಯಕ್ಕೆ ಸಂಬಂಧಿಸಿದ ಪ್ರಶ್ನೆ ಯಾಗಿರುತ್ತದೆ. ನೋಟಿಸನ್ನು 10 ದಿವಸಗಳ ಮೊದಲೇ ನೀಡಿರಬೇಕು. ನೋಟಿಸಿನಲ್ಲಿ ಪ್ರಶ್ನೆ ಕೇಳಲು ಕಾರಣವನ್ನು ಕೊಟ್ಟಿರಬೇಕು. ಕಾರಣವನ್ನು ಕೊಟ್ಟಿರದಿದ್ದರೆ, ನೋಟಿಸನ್ನು ಸದಸ್ಯರಿಗೆ ಹಿಂದಿರುಗಿಸಲಾಗುವುದು.

**ಸದನದ ಮುಂದಿಡುವ ಪ್ರಶ್ನೆಗಳಿಗೆ ಕೆಲವು ನಿಬಂಧನೆಗಳು**

* ಪ್ರಶ್ನೆ ಸ್ಪಷ್ಟವಾಗಿ ಒಂದೇ ವಿಷಯಕ್ಕೆ ಸಂಬಂಧಿಸಿದುದ್ದಾಗಿರಬೇಕು ಮತ್ತು ಮಾಹಿತಿಯನ್ನು ಕೋರಿರುವುದಾಗಿರಬೇಕು. ಸಾಮಾನ್ಯವಾಗಿ ನೂರೈವತ್ತು ಪದಗಳನ್ನು ಮೀರಿರಬಾರದು.
* ಪ್ರಶ್ನೆಗಳು ಕಾರ್ಯದರ್ಶಿಗಳು ಕರ್ನಾಟಕ ವಿಧಾನಸಭೆ/ವಿಧಾನಪರಿಷತ್ತಿನ ಕಾರ್ಯಾಲಯ ಇವರನ್ನು ಉದ್ದೇಶಿಸಿರಬೇಕೇ ಹೊರತು ಸಭಾಧ್ಯಕ್ಷರನ್ನಲ್ಲ.
* ಪ್ರಶ್ನೆಯು ಯಾವುದೇ ಒಂದು ಕ್ರಿಯೆಗೆ ಸಲಹೆ ನೀಡುವುದಾಗಿರಬಾರದು.
* ಪ್ರಶ್ನೆಯಲ್ಲಿ ಯಾರದೇ ಹೆಸರನ್ನು ಅಥವಾ ಹೇಳಿಕೆಯನ್ನಾಗಲಿ ತರಬಾರದು. ಹೇಳಿಕೆಗಳು ಬಂದಲ್ಲಿ ಅದರ ನಿಖರತೆಗೆ ಪ್ರಶ್ನಿಸಿದ ಸದಸ್ಯರೆ ಜವಾಬ್ದಾರರಾಗಿರುತ್ತಾರೆ.
* ಯಾವುದೇ ವಾದ, ವ್ಯಂಗ್ಯ, ನಿರ್ಣಯಕ್ಕೆ ಬರುವುದು, ದೋಷಾರೋಪ, ವಿಶೇಷಣವಾಗಲಿ ಅಥವಾ ಮಾನಹಾನಿ ಮಾಡುವಂತಹದ್ದಾಗಲಿ ಆಗಿರಬಾರದು.
* ಪ್ರಶ್ನೆಯು ಅಭಿಪ್ರಾಯವನ್ನು ಕೇಳುವುದಾಗಿರಬಾರದು ಅಥವಾ ಕಾನೂನಿನ ಪ್ರಶ್ನೆಗೆ ಪರಿಹಾರವನ್ನು ಕೇಳಿರುವ ಪ್ರಶ್ನೆಯಾಗಿರಬಾರದು ಅಥವಾ ತಾರ್ಕಿಕವಾದ ಕಲ್ಪಿತ ಸಿದ್ಧಾಂತವಾಗಿರಬಾರದು.
* ಪ್ರಶ್ನೆಯು ಸದನದ ಮುಂದಿಡದ ಯಾವುದೇ ಸಮಿತಿಯ ವರದಿಯ ಕಾರ್ಯಕಲಾಪಗಳಿಗೆ ಸಂಬಂಧಿಸಿದುದ್ದಾಗಿರಬಾರದು.
* ಪ್ರಶ್ನೆಯು ವ್ಯಕ್ತಿಯ ವೈಯಕ್ತಿಕ ನಡವಳಿಕೆಯನ್ನು ಉದ್ದೇಶಿಸಿರಬಾರದು.
* ಸಚಿವ ಸಂಪುಟದ ಚರ್ಚೆಗಳು, ರಾಜ್ಯಪಾಲರಿಗೆ ನೀಡಿರುವ ಬಹಿರಂಗಪಡಿಸಲಾಗದ ಯಾವುದೇ ಸಲಹೆಗಳಿಗೆ ಸಂಬಂಧಿಸಿದ ಪ್ರಶ್ನೆಯಾಗಿರಬಾರದು.

## ಸದನ ಸಮಿತಿಗಳು

ಸದನಗಳಲ್ಲಿ ಕೇಳಲಾಗುವ ಎಲ್ಲ ಪ್ರಶ್ನೆಗಳು ಅವುಗಳಿಗೆ ಬರುವ ಉತ್ತರಗಳನ್ನು ಎದುರಿಟ್ಟುಕೊಂಡು ಆಳವಾದ ವಿಶ್ಲೇಷಣೆಗಳನ್ನು ಮಾಡಿ, ವಿವರಗಳನ್ನು ದಾಖಲಿಸುವ ಕೆಲಸವನ್ನು ಮಾಡಲು ಸದನದಲ್ಲಿರುವ ಎಲ್ಲ ಸದಸ್ಯರಿಗೆ ಸಾಧ್ಯವಾಗುವುದಿಲ್ಲ ಮತ್ತು ಅದಕ್ಕೆ ಅಷ್ಟು ಸಮಯವೂ ಇರುವುದಿಲ್ಲ. ಈ ಬಿಕ್ಕಟ್ಟನ್ನು ಸರಿಪಡಿಸಿಕೊಳ್ಳಲೆಂದೇ ಪ್ರಕ್ರಿಯೆಗಳ ನಿಯಮಗಳಲ್ಲಿ ಕೆಲವೊಂದು ತಿದ್ದುಪಡಿಗಳನ್ನು ಮಾಡಿ, ಸದನದ ಕೆಲವು ಆಯ್ದ ಸದಸ್ಯರನ್ನೊಳಗೊಂಡ ಪ್ರತ್ಯೇಕವಾದ ಸಮಿತಿಯನ್ನು ರಚಿಸಿ ಅವರು ಪ್ರಶ್ನೆಗಳನ್ನು ವಿವರವಾಗಿ ಅಭ್ಯಯಿಸಲು ಅವಕಾಶ ಮಾಡಿಕೊಡಲಾಗಿದೆ.

1. ಭರವಸೆಗಳು, ಉಪಕಾಯಿದೆಗಳು ಮತ್ತು ಕೆಲವು ನಿರ್ದಿಷ್ಟ ವಿಷಯಗಳಿಗೆ ಸಂಬಂಧಿಸಿದಂತೆ ಸಲಹೆ, ನಿರ್ದೇಶನ, ನಿಯಂತ್ರಣಗಳೇ ಮೊದಲಾದುವುಗಳಿಗೆ ಸಂಬಂಧಿಸಿದ ಮಂಡನೆಗಳು
2. ವಿಚಾರಣೆ ಮತ್ತು ಭಾದ್ಯತೆಗಳ ಸಮಿತಿಯನ್ನು ವಿಚಾರಣೆಗಳ ಸಮಿತಿಯೆಂದೇ ಕರೆಯಬಹುದು
3. ಭರವಸೆಗಳಿಗೆ ಸಂಬಂಧಿಸಿದ ಸಮಿತಿಯನ್ನು ಪರಿಶೀಲನಾ ಸಮಿತಿಯೆಂದು ಗುರುತಿಸಬಹುದು.
4. ಸಾರ್ವಜನಿಕ ಲೆಕ್ಕಪತ್ರ, ಅಂದಾಜುಗಳು, ಸಾರ್ವಜನಿಕ ಕಾಮಗಾರಿಗಳು, ಪರಿಶಿಷ್ಟ ಜಾತಿ ಮತ್ತು ವರ್ಗಗಳ ಕಲ್ಯಾಣ ಸಮಿತಿ ಮತ್ತು ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿಗಳು, ಮಹಿಳೆಯರು ಮತ್ತು ಮಕ್ಕಳ ಅಭಿವೃದ್ಧಿ ಸಮಿತಿಗಳನ್ನು ನಿಯಂತ್ರಣ ಸಮಿತಿಗಳೆಂದು ಗುರುತಿಸಬಹುದು.

5. ಕಾರ್ಯಕ್ರಮಗಳ ಸಲಹಾ ಸಮಿತಿ, ಸದನ ಸಮಿತಿ ಮತ್ತು ಗ್ರಂಥಾಲಯ ಸಮಿತಿಗಳನ್ನು ಸಲಹಾ ಸಮಿತಿಗಳೆಂದು ಹೇಳಬಹುದು
6. ಆಯ್ಕೆ ಮತ್ತು ಜಂಟಿ ಆಯ್ಕೆ ಸಮಿತಿ ಅಥವಾ ನಿಯಮ ಸಮಿತಿಗಳನ್ನು ತಾತ್ಕಾಲಿಕ ಸಮಿತಿಗಳೆಂದು ಕರೆಯಬಹುದು (ಈ ಸಮಿತಿಯು ಕೆಲವೊಂದು ನಿರ್ದಿಷ್ಟ ವಿಚಾರಗಳನ್ನು ಅವರ ಗಮನಕ್ಕೆ ತಂದಾಗ ಮಾತ್ರ ಕಾರ್ಯ ನಿರ್ವಹಿಸುತ್ತವೆ).

**ಎ. ಸರ್ಕಾರದ ಭರವಸೆಗಳ ಸಮಿತಿ :**

ಸದನಗಳಲ್ಲಿ ಪ್ರಶ್ನೋತ್ತರಗಳು ನಡೆಯುವಾಗ ಮತ್ತು ಹಣಕಾಸು, ಆಯವ್ಯಯ, ನಿಯಮ ನಿರ್ಧಾರ, ಮತ್ತಿತರ ಅತ್ಯಂತ ಪ್ರಮುಖವಾದ ಚರ್ಚೆಗಳು ನಡೆಯುವಾಗ ಸರ್ಕಾರವನ್ನು ಒತ್ತಾಯಿಸಲು ಅಥವಾ ನಿರ್ದಿಷ್ಟ ರೀತಿಯಲ್ಲಿ ಕ್ರಮ ಕೈಗೊಳ್ಳಲು ಸದಸ್ಯರು ಸಲಹೆಗಳನ್ನು, ನಿರ್ದೇಶನಗಳನ್ನು ನೀಡಬಹುದು. ಪ್ರಶ್ನೆಗಳಿಗೆ ಉತ್ತರಿಸುವಾಗ ಮಂತ್ರಿ ಮಹೋದಯರುಗಳು ಕೆಲವೊಂದು ಭರವಸೆಗಳನ್ನು ನೀಡಿರಬಹುದು, ಅಂತಹ ಸಲಹೆಗಳನ್ನು ಈ ಸಮಿತಿಯು ಪರಿಶೀಲಿಸಿ ಎಂತಹ ಕ್ರಮ ಕೈಗೊಳ್ಳಬೇಕೆಂದು ನಿರ್ದೇಶನಗಳನ್ನು ನೀಡುತ್ತದೆ. ಎಷ್ಟೋ ಬಾರಿ ಮಂತ್ರಿಗಳು ನೀಡುವ ಭರವಸೆಗಳು ಜನ ಮಾನಸದಿಂದ ಮರೆಯಾಗಬಹುದು ಅಥವಾ ಯಾರೂ ಅದನ್ನು ಅನುಸರಣೆ ಮಾಡದಿದ್ದರೆ ಭರವಸೆಗಳಿಗೆ ಮತ್ತೆ ಜೀವ ಬರುವುದೇ ಇಲ್ಲ. ಹೀಗಾಗಿ, ಸದನ ಪ್ರಕ್ರಿಯೆಗಳ ನಿಯಮದಡಿ ಸರ್ಕಾರದ ಆಶ್ವಾಸನೆಗಳ ಸಮಿತಿಯನ್ನು ರಚಿಸಲಾಗಿದೆ.

ಈ ಸಮಿತಿಯ ಕಾರ್ಯಕಲಾಪಗಳು:

1. ಸದನದ ಸಭೆಯಲ್ಲಿ ಮಂತ್ರಿ ಮಹೋದಯರು ನೀಡಿದ ಭರವಸೆಗಳು ಮತ್ತು ನಿರ್ದಿಷ್ಟ ಗುರಿಗಳನ್ನು ಸಂಪೂರ್ಣವಾಗಿ, ಸ್ಪಷ್ಟವಾಗಿ ಅರ್ಥ ಮಾಡಿಕೊಳ್ಳುವುದು
2. ಸದನದಲ್ಲಿ ಮಂತ್ರಿಗಳು ನೀಡಿದ ಭರವಸೆಗಳನ್ನು ಈಡೇರಿಸಲಾಯಿತೆ ಮತ್ತು ಆ ಕಾರ್ಯವನ್ನು ನಿರ್ದಿಷ್ಟ ಕೆಲಸಗಳ ಅವಧಿಯಲ್ಲಿ ಮಾಡಲಾಯಿತೋ ಇಲ್ಲವೋ ಎಂದು ಮತ್ತೆ ಸದನಕ್ಕೆ ಹೇಳುವುದು (ಪ್ರತಿಯೊಂದು ಭರವಸೆಯನ್ನು ಎರಡು ತಿಂಗಳೊಳಗೆ ಮಾಡಿ ಮುಗಿಸಲಾಗುವುದೆಂದು ಸಮಯ ನಿಗಧಿಪಡಿಸಲಾಗಿದೆ)

ಸರ್ಕಾರ ಇಂತಹ ನಿಯಮಿತವಾದ ಕಾಲಾವಧಿಗೆ ಬದ್ಧರಾಗುವುದು ಬಹಳ ಅಪರೂಪ. ಹೀಗಾಗಿ ಭರವಸೆಗಳನ್ನು ನೀಡುವ ಪ್ರಕ್ರಿಯೆಯ ಗೌರವಕ್ಕೇ ಧಕ್ಕೆ ಬಂದಿದೆ. ಮಂತ್ರಿಗಳು ಏನಾದರೂ ಭರವಸೆ ನೀಡುತ್ತಾರೆ ಎಂದರೆ ಅದು ಸಾರ್ವಜನಿಕ ಹಿತಾಸಕ್ತಿಯಿಂದ ಕೂಡಿರಬೇಕಾಗುತ್ತದೆ. ಹೀಗಾಗಿ, ಸರ್ಕಾರವೂ ಕೂಡಾ ನಿರ್ದಿಷ್ಟ ಕಾಲಾವಧಿಯೊಳಗೆ ತನ್ನ ಮಂತ್ರಿಗಳು ನೀಡಿದ್ದ ಭರವಸೆಯನ್ನು ಪೂರೈಸಲು ಜವಾಬ್ದಾರಿ ಹೊಂದಿರುತ್ತದೆ. ಹೀಗಾಗದಿದ್ದಲ್ಲಿ, ಮಂತ್ರಿಗಳು ತಮ್ಮ ಮುಖ ಉಳಿಸಿಕೊಳ್ಳಲು ಏನೋ ಒಂದು ಭರವಸೆ ನೀಡಿ ಆಮೇಲೆ ಮುಖ್ಯ ವಿಚಾರಗಳನ್ನು ಮರತೇ ಹೋದರು ಎಂದು ಸಾರ್ವಜನಿಕರು ಭಾವಿಸುವ ಸಾಧ್ಯತೆಗಳಿವೆ.

ಯಾವುದೇ ಸಂದರ್ಭದಲ್ಲಿ ಸದನವನ್ನು ವಿಸರ್ಜಿಸಿದಾಗ ಆ ನಿರ್ದಿಷ್ಟ ಸರ್ಕಾರ, ಆ ನಿರ್ದಿಷ್ಟ ಸದನಕ್ಕೆ ಸಂಬಂಧಿಸಿದ ಎಲ್ಲ ವ್ಯವಹಾರಗಳನ್ನು ಸ್ಥಗಿತಗೊಳಿಸಲಾಗುತ್ತದೆ ಅಥವಾ ಮುಗಿದಂತೆ ಭಾವಿಸಲಾಗುತ್ತದೆ. ಆದರೆ, ಮಂತ್ರಿಗಳು ಸದನದಲ್ಲಿ ನೀಡಿದ್ದ ಭರವಸೆಗಳನ್ನು ಅನುಸರಿಸುವ ಜವಾಬ್ದಾರಿ ಹೊಂದಿರುವ ಈ ಸಮಿತಿಯೆದುರಿನ ವಿಚಾರಗಳನ್ನು ಎಂದಿಗೂ ವಿಸರ್ಜಿಸಲಾಗುವುದಿಲ್ಲ. ಹೊಸದಾಗಿ ಸರ್ಕಾರ ರಚನೆಯಾದಾಗ ಮತ್ತು ಹೊಸ ಸದನ ಸಮಿತಿಯನ್ನು ರಚಿಸಿದಾಗ ಎಂದಿನಂತೆ ಹಿಂದಿನದನ್ನೂ ಮುಂದುವರೆಸಿಕೊಂಡು ಹೋಗಲಾಗುತ್ತದೆ.

(**ಮೂಲ ಮಾಹಿತಿ**: Hand Book for Members, Karnataka Legislative Assembly Secretariat, Bangalore, 2004)

# 2011ರ ವಿಧಾನಸಭಾ ಅಧಿವೇಶನಗಳ ಪಕ್ಷಿನೋಟ

**ಅವಧಿ : 2011ರ ಅಧಿವೇಶನದ ಕಾರ್ಯಕಲಾಪಗಳು**

## 2011ರ ಒಟ್ಟು ವಿಧಾನಮಂಡಲ ಅಧಿವೇಶನಗಳು

**ವಿಧಾನಸಭೆ** **ವಿಧಾನ ಪರಿಷತ್ತು**

| | ವರ್ಷ | ಅಧಿವೇಶನ ನಡೆದ ದಿನಾಂಕಗಳು | ಒಟ್ಟು ಅಧಿವೇಶನದ ದಿನಗಳು |
|---|---|---|---|
| 1 | 2011 | 6–1–2011 ರಿಂದ 13–1–2011 | 08 |
| 2 | 2011 | 24–2–2011 ರಿಂದ 28–1–2011 | 05 |
| 3 | 2011 | 1–3–2011 ರಿಂದ 16–3–2011 | 17 |
| 4 | 2011 | 5–12–2011 ರಿಂದ 16–12–2011 | 12 |



| | ವರ್ಷ | ಅಧಿವೇಶನ ನಡೆದ ದಿನಾಂಕಗಳು | ಒಟ್ಟು ಅಧಿವೇಶನದ ದಿನಗಳು |
|---|---|---|---|
| 1 | 2011 | 6–1–2011 ರಿಂದ 13–1–2011 | 08 |
| 2 | 2011 | 24–2–2011 ರಿಂದ 28–1–2011 | 05 |
| 3 | 2011 | 1–3–2011 ರಿಂದ 16–3–2011 | 17 |
| 4 | 2011 | 5–12–2011 ರಿಂದ 16–12–2011 | 12 |


### ವಿಶ್ಲೇಷಣೆಯ ಸಂದರ್ಭದಲ್ಲಿ ಕೈಗೊಂಡ ಕಾರ್ಯಚಟುವಟಿಕೆಗಳು

1. ವಿಧಾನಮಂಡಲದ ಪ್ರಶ್ನೋತ್ತರ ವಿಭಾಗದ ಅಧಿಕಾರಿಗಳನ್ನು ಸಂಪರ್ಕಿಸಿ, ಈ ಅಧ್ಯಯನದ ವಿವರಗಳನ್ನು ನೀಡಿ, ವಿವಿಧ ಅಂಕಿ ಅಂಶಗಳು ಹಾಗೂ ಪ್ರಶ್ನೆ ಉತ್ತರಗಳ ಸಂಗ್ರಹಣೆ.
2. ದತ್ತಾಂಶಗಳ ವಿಶ್ಲೇಷಣೆ: ಗುಣಾತ್ಮಕ ಮತ್ತು ಪ್ರಮಾಣಾತ್ಮಕ ವಿಶ್ಲೇಷಣೆ
   * ಅಧಿವೇಶನಗಳಲ್ಲಿ ಕೇಳಿದ ಎಲ್ಲಾ ಪ್ರಶ್ನೆಗಳನ್ನು ಪರಿಗಣಿಸುವುದು ಮತ್ತು ವಿಂಗಡಣೆ
   * ವಿವಿಧ ಇಲಾಖಾವಾರು, ಪಕ್ಷಾವಾರು ಒಟ್ಟು ಪ್ರಶ್ನೆಗಳ ವಿಂಗಡಣೆ
     - ಅಂತಹ ಶಾಸಕರು ಪ್ರತಿನಿಧಿಸುತ್ತಿರುವ ಮತ ಕ್ಷೇತ್ರ;
     - ಈ ಶಾಸಕರು ಕಂಡುಕೊಂಡಿರುವ ರಾಜಕೀಯ ಪಕ್ಷ;
     - ಈ ಶಾಸಕರು ಪ್ರತಿನಿಧಿಸುತ್ತಿರುವ ಜಿಲ್ಲೆ;
     - ಅವರು ಕೇಳಿರುವ ಪ್ರಶ್ನೆಗಳು ಯಾವ ಇಲಾಖೆಗೆ ಸಂಬಂಧಿಸಿದ್ದು;
3. ಸದಸ್ಯಾವಾರು ಪ್ರಶ್ನೆಗಳು, ಅತಿ ಹೆಚ್ಚು ಪ್ರಶ್ನೆಗಳನ್ನು ಕೇಳಿದ ಸದಸ್ಯರುಗಳು,
4. ಜಿಲ್ಲಾವಾರು ವಿಂಗಡನೆ: ಪ್ರತಿಯೊಂದು ಜಿಲ್ಲೆಗೆ ಸಂಬಂಧಿಸಿದಂತೆ ಕೇಳಿರುವ ಒಟ್ಟು ಪ್ರಶ್ನೆಗಳು
5. ಜಿಲ್ಲಾವಾರು ಕೇಳಿರುವ ಪ್ರಶ್ನೆಗಳ ಆಧಾರದ ಮೇಲೆ ಜಿಲ್ಲೆಗಳ ವರ್ಗೀಕರಣ.
6. ಕ್ಷೇತ್ರವಾರು ಕೇಳಿರುವ ಪ್ರಶ್ನೆಗಳು
7. ಮಹಿಳಾ ಶಾಸಕರ ಭಾಗವಹಿಸುವಿಕೆ
8. ಅಲ್ಪಸಂಖ್ಯಾತ ಶಾಸಕರ ಭಾಗವಹಿಸುವಿಕೆ
9. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಶಾಸಕರ ಭಾಗವಹಿಸುವಿಕೆ
10. ಇಡೀ ಪ್ರಕ್ರಿಯೆಯ ದಾಖಲಾತಿ, ವರದಿ ತಯಾರಿ, ಅಂತಿಮ ಪ್ರಕಟಣೆ ಮತ್ತು ವಿತರಣೆ.

# ಪಕ್ಷಾವಾರು ಸದಸ್ಯರ ಸಂಖ್ಯೆ

## ಪಕ್ಷಾವಾರು ಸದಸ್ಯರ ಸಂಖ್ಯೆ – ವಿಧಾನ ಸಭೆ




## ಪಕ್ಷಾವಾರು ಸದಸ್ಯರ ಸಂಖ್ಯೆ – ವಿಧಾನ ಪರಿಷತ್

## ಶಾಸಕರ ಹಾಜರಾತಿ

| ಕ್ರ ಸಂ. | ಹೆಸರು | ಕ್ಷೇತ್ರ | ಪಕ್ಷ | ಜಿಲ್ಲೆ | 8 ನೇ ಅಧಿವೇಶನ 6–1–11 ರಿಂದ 13–1–11 | 9 ನೇ ಅಧಿವೇಶನ 24–2–11 ರಿಂದ 16–3–11 | 10 ನೇ ಅಧಿವೇಶನ 2–6–11 ರಿಂದ 7–6–11 | 11 ನೇ ಅಧಿವೇಶನ 5–12–11 | ಒಟ್ಟು ದಿನ ಗಳು |
|---|---|---|---|---|---|---|---|---|---|
| 1 | ಶ್ರೀ. ಯು.ಟಿ. ಖಾದರ್ | ಮಂಗಳೂರು | ಕಾಂಗ್ರೆಸ್ | ದಕ್ಷಿಣಕನ್ನಡ | 5 | 10 | 1 | 8 | **24** |
| 2 | ಶ್ರೀ. ಕೆ. ವಸಂತ ಬಂಗೇರ | ಬೆಳ್ತಂಗಡಿ | ಕಾಂಗ್ರೆಸ್ | ದಕ್ಷಿಣಕನ್ನಡ | 6 | 12 | 1 | 9 | **28** |
| 3 | ಶ್ರೀ. ಎನ್.ಎ. ಹ್ಯಾರೀಸ್ | ಶಾಂತಿನಗರ | ಕಾಂಗ್ರೆಸ್ | ಬೆಂಗಳೂರು ನ | 6 | 12 | 1 | 9 | 28 |
| 4 | ಶ್ರೀ. ಈಶ್ವರ ಭೀಮಣ್ಣ ಖಂಡ್ರೆ | ಭಾಲ್ಕಿ | ಕಾಂಗ್ರೆಸ್ | ಬೀದರ್ | 5 | 7 | 1 | 7 | 20 |
| 5 | ಶ್ರೀ. ಕೆ.ಜಿ. ಕುಮಾರಸ್ವಾಮಿ | ಶಿವಮೊಗ್ಗ ಗ್ರಾಮೀಣ | ಬಿ.ಜೆ.ಪಿ. | ಶಿವಮೊಗ್ಗ | 6 | 12 | 4 | 9 | 31 |
| 6 | ಶ್ರೀ. ಬಂಡೆಪ್ಪ ಕಾಶೆಂಪುರ | ಬೀದರ್ ದಕ್ಷಿಣ | ಜೆ.ಡಿ.ಎಸ್. | ಬೀದರ್ | 6 | 12 | 0 | 9 | 27 |
| 7 | ಶ್ರೀ. ರಾಮಲಿಂಗಾರೆಡ್ಡಿ | ಬಿ.ಟಿ.ಎಮ್. ಲೇಔಟ್ | ಕಾಂಗ್ರೆಸ್ | ಬೆಂಗಳೂರು ನ | 6 | 9 | 0 | 4 | 19 |
| 8 | ಶ್ರೀ. ಅಪ್ಪಾಜಿ ಚನ್ನಬಸವರಾಜ್ ಶಂಕರರಾವ್ ನಾಡಗೌಡ | ಮುದ್ದೇಬಿಹಾಳ | ಕಾಂಗ್ರೆಸ್ | ಬಿಜಾಪುರ | 6 | 11 | 1 | 7 | 25 |
| 9 | ಶ್ರೀ. ಎನ್. ಸಂಪಂಗಿ | ಬಾಗೇಪಲ್ಲಿ | ಕಾಂಗ್ರೆಸ್ | ಚಿಕ್ಕಬಳ್ಳಾಪುರ | 6 | 12 | 1 | 8 | 27 |
| 10 | ಶ್ರೀ. ಕಿಮ್ಮನೆ ರತ್ನಾಕರ | ತೀರ್ಥಹಳ್ಳಿ | ಕಾಂಗ್ರೆಸ್ | ಶಿವಮೊಗ್ಗ | 6 | 12 | 1 | 9 | 28 |
| 11 | ಶ್ರೀ. ಕೆ.ಪಿ. ಬಚ್ಚೇಗೌಡ | ಚಿಕ್ಕಬಳ್ಳಾಪುರ | ಜೆ.ಡಿ.ಎಸ್. | ಚಿಕ್ಕಬಳ್ಳಾಪುರ | 6 | 11 | 0 | 9 | 26 |
| 12 | ಶ್ರೀ. ಬಿ.ಕೆ. ಸಂಗಮೇಶ್ವರ | ಭದ್ರಾವತಿ | ಕಾಂಗ್ರೆಸ್ | ಶಿವಮೊಗ್ಗ | 2 | 10 | 1 | 7 | 20 |
| 13 | ಶ್ರೀ. ನೆ.ಲ. ನರೇಂದ್ರ ಬಾಬು | ಮಹಾಲಕ್ಷ್ಮೀ ಲೇಔಟ್ | ಕಾಂಗ್ರೆಸ್ | ಬೆಂಗಳೂರು ನ | 6 | 12 | 1 | 9 | 28 |
| 14 | ಶ್ರೀ. ಸಿದ್ದು ಸವದಿ | ತೇರದಾಳ | ಬಿ.ಜೆ.ಪಿ. | ಬಾಗಲಕೋಟೆ | 5 | 12 | 4 | 1 | 22 |
| 15 | ಶ್ರೀ. ನಾಡಗೌಡ ವೆಂಕಟರಾವ್ | ಸಿಂಧನೂರು | ಜೆ.ಡಿ.ಎಸ್. | ರಾಯಚೂರು | 6 | 12 | 0 | 8 | 26 |
| 16 | ಶ್ರೀ. ಎನ್.ಹೆಚ್. ಶಿವಶಂಕರ ರೆಡ್ಡಿ | ಗೌರಿಬಿದನೂರು | ಕಾಂಗ್ರೆಸ್ | ಚಿಕ್ಕಬಳ್ಳಾಪುರ | 5 | 9 | 1 | 8 | 23 |
| 17 | ಶ್ರೀ. ರಾಜು.ಕೆ | ರಾಮನಗರ | ಜೆ.ಡಿ.ಎಸ್. | ರಾಮನಗರ | 5 | 9 | 0 | 7 | 21 |
| 18 | ಶ್ರೀ. ಹೆಚ್.ಸಿ. ಬಾಲಕೃಷ್ಣ | ಮಾಗಡಿ | ಜೆ.ಡಿ.ಎಸ್. | ರಾಮನಗರ | 6 | 8 | 0 | 5 | 19 |
| 19 | ಶ್ರೀ. ಸಿ.ಬಿ. ಸುರೇಶ್ ಬಾಬು | ಚಿಕ್ಕನಾಯಕನಹಳ್ಳಿ | ಜೆ.ಡಿ.ಎಸ್. | ತುಮಕೂರು | 4 | 10 | 0 | 8 | 22 |
| 20 | ಡಾ. ಬಗಲಿ ಸಾರ್ವಭೌಮ ಸಠಗೌಡ | ಇಂಡಿ | ಬಿ.ಜೆ.ಪಿ. | ಬಿಜಾಪುರ | 0 | 0 | 4 | 9 | 13 |
| 21 | ಶ್ರೀ. ಕಲ್ಪನ ಸಿದ್ದರಾಜು | ಮದ್ದೂರು | ಜೆ.ಡಿ.ಎಸ್. | ಮಂಡ್ಯ | 6 | 9 | 0 | 8 | 23 |
| 22 | ಶ್ರೀ. ರಹೀಮ್ ಖಾನ್ | ಬೀದರ್ | ಕಾಂಗ್ರೆಸ್ | ಬೀದರ್ | 5 | 8 | 1 | 7 | 21 |
| 23 | ಶ್ರೀ. ರುದ್ರೇಶ್ ಗೌಡ | ಬೇಲೂರು | ಕಾಂಗ್ರೆಸ್ | ಹಾಸನ | 3 | 11 | 1 | 9 | 24 |
| 24 | ಶ್ರೀ. ಹೆಚ್.ಪಿ. ಮಂಜುನಾಥ | ಹುಣಸೂರು | ಕಾಂಗ್ರೆಸ್ | ಮೈಸೂರು | 5 | 12 | 1 | 9 | 27 |
| 25 | ಶ್ರೀ. ಪಾಟೀಲ್ ಎಂ.ಬಿ. | ಬಬಲೇಶ್ವರ | ಕಾಂಗ್ರೆಸ್ | ಬಿಜಾಪುರ | 5 | 7 | 0 | 9 | 21 |
| 26 | ಡಾ. ಶರಣಪ್ರಕಾಶ್ ರುದ್ರಪ್ಪ ಪಾಟೀಲ್ | ಸೇಡಂ | ಕಾಂಗ್ರೆಸ್ | ಗುಲ್ಬರ್ಗ | 5 | 11 | 1 | 7 | 24 |
| 27 | ಶ್ರೀ. ಅಪ್ಪಾಸಾಹೇಬ್ ಮಲ್ಲಪ್ಪ ಪಟ್ಟಣಶೆಟ್ಟಿ | ಬಿಜಾಪುರ ನಗರ | ಬಿ.ಜೆ.ಪಿ. | ಬಿಜಾಪುರ | 3 | 6 | 3 | 7 | 19 |
| 28 | ಶ್ರೀ. ಎಮ್.ಟಿ. ಕೃಷ್ಣಪ್ಪ | ತುರುವೇಕೆರೆ | ಜೆ.ಡಿ.ಎಸ್. | ತುಮಕೂರು | 6 | 10 | 0 | 8 | 24 |

| ಕ್ರ ಸಂ. | ಹೆಸರು | ಕ್ಷೇತ್ರ | ಪಕ್ಷ | ಜಿಲ್ಲೆ | 8 ನೇ ಅಧಿವೇಶನ 6–1–11 ರಿಂದ 13–1–11 | 9 ನೇ ಅಧಿವೇಶನ 24–2–11 ರಿಂದ 16–3–11 | 10 ನೇ ಅಧಿವೇಶನ 2–6–11 ರಿಂದ 7–6–11 | 11 ನೇ ಅಧಿವೇಶನ 5–12–11 | ಒಟ್ಟು ದಿನ ಗಳು |
|---|---|---|---|---|---|---|---|---|---|
| 29 | ಶ್ರೀ. ಆರ್. ನರೇಂದ್ರ | ಹನೂರು | ಕಾಂಗ್ರೆಸ್ | ಚಾಮರಾಜನಗರ | 6 | 11 | 1 | 9 | 27 |
| 30 | ಶ್ರೀ. ಬಸವರಾಜ್ ಪಾಟೀಲ್ ಅಟ್ಟೂರು | ಬಸವಕಲ್ಯಾಣ | ಬಿ.ಜೆ.ಪಿ. | ಬೀದರ್ | 5 | 11 | 4 | 0 | 20 |
| 31 | ಶ್ರೀ. ಗೂಳಿಹಟ್ಟಿ ಡಿ. ಶೇಖರ್ | ಹೊಸದುರ್ಗ | ಪಕ್ಷೇತರ | ಚಿತ್ರದುರ್ಗ | 0 | 0 | 3 | 9 | 12 |
| 32 | ಶ್ರೀ. ಲಾಲಾಜಿ ಆರ್.ಮೆಂಡನ್ | ಕಾಪು | ಬಿ.ಜೆ.ಪಿ. | ಉಡುಪಿ | 6 | 12 | 4 | 6 | 28 |
| 33 | ಶ್ರೀ. ಎಂ. ಶ್ರೀನಿವಾಸ | ಮಂಡ್ಯ | ಜೆ.ಡಿ.ಎಸ್. | ಮಂಡ್ಯ | 5 | 11 | 0 | 9 | 25 |
| 34 | ಶ್ರೀ. ಸುನೀಲ್ ವಿ.ಹೆಗ್ಡೆ | ಹಳಿಯಾಳ | ಜೆ.ಡಿ.ಎಸ್. | ಉತ್ತರ ಕನ್ನಡ | 3 | 8 | 1 | 8 | 20 |
| 35 | ಶ್ರೀ. ಸುರೇಶ್ ಗೌಡ | ನಾಗಮಂಗಲ | ಕಾಂಗ್ರೆಸ್ | ಮಂಡ್ಯ | 6 | 12 | 0 | 9 | 27 |
| 36 | ಶ್ರೀ. ಹೆಚ್.ಕೆ. ಕುಮಾರಸ್ವಾಮಿ | ಸಕಲೇಶಪುರ | ಜೆ.ಡಿ.ಎಸ್. | ಹಾಸನ | 6 | 12 | 0 | 8 | 26 |
| 37 | ಶ್ರೀ. ತನ್ವೀರ್ ಸೇಟ್ | ನರಸಿಂಹರಾಜ | ಕಾಂಗ್ರೆಸ್ | ಮೈಸೂರು | 6 | 12 | 2 | 8 | 28 |
| 38 | ಶ್ರೀ. ಅಭಯ ಪಾಟೀಲ್ | ಬೆಳಗಾಂ ದಕ್ಷಿಣ | ಕಾಂಗ್ರೆಸ್ | ಬೆಳಗಾಂ | 1 | 6 | 3 | 6 | 16 |
| 39 | ಶ್ರೀ. ಪಾಟೀಲ್ ಎ.ಎಸ್. | ದೇವರಹಿಪ್ಪರಗಿ | ಕಾಂಗ್ರೆಸ್ | ಬಿಜಾಪುರ | 6 | 12 | 0 | 9 | 27 |
| 40 | ಶ್ರೀ. ಎ.ಬಿ. ರಮೇಶ್ ಬಂಡಿಸಿದ್ದೇಗೌಡ | ಶ್ರೀರಂಗಪಟ್ಟಣ | ಜೆ.ಡಿ.ಎಸ್. | ಮಂಡ್ಯ | 5 | 10 | 0 | 8 | 23 |
| 41 | ಶ್ರೀ. ತುಕಾರಾಂ ಇ. | ಸೊಂಡೂರು | ಕಾಂಗ್ರೆಸ್ | ಬಳ್ಳಾರಿ | 2 | 11 | 1 | 9 | 23 |
| 42 | ಶ್ರೀ. ಎಸ್.ಆರ್. ವಿಶ್ವನಾಥ್ | ಯಲಹಂಕ | ಬಿ.ಜೆ.ಪಿ. | ಬೆಂಗಳೂರು ನ | 6 | 12 | 4 | 9 | 31 |
| 43 | ಶ್ರೀ. ಪ್ರಭು ಚವ್ಹಾಣ್ | ಔರಾದ್ | ಬಿ.ಜೆ.ಪಿ. | ಬೀದರ್ | 4 | 11 | 4 | 5 | 24 |
| 44 | ಶ್ರೀ. ಎಂ. ಸತ್ಯನಾರಾಯಣ | ಚಾಮುಂಡೇಶ್ವರಿ | ಕಾಂಗ್ರೆಸ್ | ಮೈಸೂರು | 6 | 10 | 1 | 9 | 26 |
| 45 | ಶ್ರೀ. ಮಾರಿಹಾಳ ಸುರೇಶ್ ಶಿವರುದ್ರಪ್ಪ | ಕಿತ್ತೂರು | ಬಿ.ಜೆ.ಪಿ. | ಬೆಳಗಾಂ | 6 | 7 | 4 | 9 | 26 |
| 46 | ಶ್ರೀ. ಗೋಪಾಲಕೃಷ್ಣ ಬೇಳೂರು | ಸಾಗರ | ಬಿ.ಜೆ.ಪಿ. | ಶಿವಮೊಗ್ಗ | 0 | 0 | 3 | 9 | 12 |
| 47 | ಶ್ರೀ. ವಿ. ಮುನಿಯಪ್ಪ | ಶಿಡ್ಲಘಟ್ಟ | ಕಾಂಗ್ರೆಸ್ | ಚಿಕ್ಕಬಳ್ಳಾಪುರ | 4 | 12 | 0 | 9 | 25 |
| 48 | ಶ್ರೀ. ಹೆಚ್.ಡಿ. ರೇವಣ್ಣ | ಹೊಳೆನರಸೀಪುರ | ಜೆ.ಡಿ.ಎಸ್. | ಹಾಸನ | 6 | 11 | 0 | 8 | 25 |
| 49 | ಶ್ರೀ. ಕುಲಕರ್ಣಿ ಶ್ರೀಕಾಂತ್ ಸುಬ್ಬರಾವ್ | ಜಮಖಂಡಿ | ಬಿ.ಜೆ.ಪಿ. | ಬಾಗಲಕೋಟೆ | 6 | 12 | 4 | 9 | 41 |
| 50 | ಶ್ರೀ. ಟಿ.ಬಿ. ಜಯಚಂದ್ರ | ಶಿರಾ | ಕಾಂಗ್ರೆಸ್ | ತುಮಕೂರು | 6 | 11 | 1 | 9 | 27 |
| 51 | ಶ್ರೀ. ಕೆ.ಜೆ. ಜಾರ್ಜ್ | ಸರ್ವಜ್ಞನಗರ | ಕಾಂಗ್ರೆಸ್ | ಬೆಂಗಳೂರು ನ | 6 | 12 | 0 | 9 | 27 |
| 52 | ಶ್ರೀ. ಕೆ.ಎಮ್. ಶಿವಲಿಂಗೇಗೌಡ | ಅರಸೀಕೆರೆ | ಜೆ.ಡಿ.ಎಸ್. | ಹಾಸನ | 6 | 11 | 0 | 9 | 26 |
| 53 | ಶ್ರೀ. ಹೆಚ್. ಎಸ್. ಮಹದೇವ ಪ್ರಸಾದ್ | ಗುಂಡ್ಲುಪೇಟೆ | ಕಾಂಗ್ರೆಸ್ | ಚಾಮರಾಜನಗರ | 6 | 10 | 1 | 9 | 26 |
| 54 | ಶ್ರೀ. ಪ್ರತಾಪ ಗೌಡ ಪಾಟೀಲ್ | ಮಸ್ಕಿ | ಬಿ.ಜೆ.ಪಿ. | ರಾಯಚೂರು | 5 | 12 | 4 | 7 | 28 |
| 55 | ಶ್ರೀ. ಚಿಕ್ಕನಗೌಡ್ರ ಸಿದ್ದನಗೌಡ ಈಶ್ವರಗೌಡ | ಕುಂದಗೋಳ | ಬಿ.ಜೆ.ಪಿ. | ಧಾರವಾಡ | 4 | 10 | 3 | 8 | 25 |
| 56 | ಶ್ರೀ. ಹೆಚ್. ಗೋಪಾಲ ಭಂಡಾರಿ | ಕಾರ್ಕಳ | ಕಾಂಗ್ರೆಸ್ | ಉಡುಪಿ | 6 | 10 | 1 | 8 | 25 |
| 57 | ಶ್ರೀ. ಗುತ್ತೇದಾರ್ ಸುಭಾಷ್ ರುಕ್ಮಯ್ಯ | ಅಳಂದ | ಜೆ.ಡಿ.ಎಸ್. | ಗುಲ್ಬರ್ಗ | 6 | 12 | 0 | 8 | 26 |
| 58 | ಶ್ರೀ. ಜೆ.ಡಿ. ನಾಯ್ಕ್ | ಭಟ್ಕಳ | ಕಾಂಗ್ರೆಸ್ | ಉತ್ತರ ಕನ್ನಡ | 6 | 9 | 0 | 8 | 23 |
| 59 | ಶ್ರೀ. ತಿಪ್ಪೇಸ್ವಾಮಿ | ಚಳ್ಳಕೆರೆ | ಬಿ.ಜೆ.ಪಿ. | ಚಿತ್ರದುರ್ಗ | 6 | 10 | 4 | 7 | 27 |
| 60 | ಶ್ರೀ. ಹೆಚ್. ಹಾಲಪ್ಪ | ಸೊರಬ | ಬಿ.ಜೆ.ಪಿ. | ಶಿವಮೊಗ್ಗ | 6 | 11 | 4 | 8 | 29 |
| 61 | ಶ್ರೀ. ಜೆ. ನರಸಿಂಹಸ್ವಾಮಿ | ದೊಡ್ಡಬಳ್ಳಾಪುರ | ಬಿ.ಜೆ.ಪಿ. | ಬೆಂಗಳೂರು ಗ್ರಾ | 4 | 9 | 4 | 7 | 24 |
| 62 | ಶ್ರೀ. ವೀರಭದ್ರಪ್ಪ ಹಾಲಹರವಿ | ಹು–ಧಾ ಪೂರ್ವ | ಬಿ.ಜೆ.ಪಿ. | ಧಾರವಾಡ | 6 | 11 | 4 | 8 | 29 |
| 63 | ಶ್ರೀ. ಡಾ. ಸುಧಾಕರ್ ಎಂ.ಸಿ. | ಚಿಂತಾಮಣಿ | ಕಾಂಗ್ರೆಸ್ | ಚಿಕ್ಕಬಳ್ಳಾಪುರ | 5 | 10 | 0 | 9 | 24 |

| ಕ್ರ ಸಂ. | ಹೆಸರು | ಕ್ಷೇತ್ರ | ಪಕ್ಷ | ಜಿಲ್ಲೆ | 8 ನೇ ಅಧಿವೇಶನ 6–1–11 ರಿಂದ 13–1–11 | 9 ನೇ ಅಧಿವೇಶನ 24–2–11 ರಿಂದ 16–3–11 | 10 ನೇ ಅಧಿವೇಶನ 2–6–11 ರಿಂದ 7–6–11 | 11 ನೇ ಅಧಿವೇಶನ 5–12–11 | ಒಟ್ಟು ದಿನ ಗಳು |
|---|---|---|---|---|---|---|---|---|---|
| 64 | ಶ್ರೀ. ಮಾಲಿಕಯ್ಯ ವೆಂಕಯ್ಯ ಗುತ್ತೇದಾರ್ | ಅಫ್ಜಲ್ ಪುರ | ಕಾಂಗ್ರೆಸ್ | ಗುಲ್ಬರ್ಗ | 6 | 11 | 1 | 9 | 27 |
| 65 | ಶ್ರೀ. ದಿನಕರ ಕೇಶವ ಶೆಟ್ಟಿ | ಕುಮಟ | ಜೆ.ಡಿ.ಎಸ್. | ಉತ್ತರ ಕನ್ನಡ | 4 | 7 | 0 | 6 | 17 |
| 66 | ಶ್ರೀ. ವಿ.ಎಸ್. ಪಾಟೀಲ್ | ಯಲ್ಲಾಪುರ | ಬಿ.ಜೆ.ಪಿ. | ಉತ್ತರ ಕನ್ನಡ | 5 | 10 | 4 | 7 | 26 |
| 67 | ಶ್ರೀ. ಆನಂದ್ ಸಿಂಗ್ | ವಿಜಯನಗರ | ಬಿ.ಜೆ.ಪಿ. | ಬಳ್ಳಾರಿ | 1 | 4 | 4 | 3 | 12 |
| 68 | ಶ್ರೀ. ವೈ. ಸಂಪಂಗಿ | ಕೆ.ಜಿ.ಎಫ್. | ಬಿ.ಜೆ.ಪಿ. | ಕೋಲಾರ | 0 | 0 | 4 | 9 | 13 |
| 69 | ಶ್ರೀ. ಚಿಕ್ಕಣ್ಣ | ಹೆಗ್ಗಡದೇವನಕೋಟೆ | ಕಾಂಗ್ರೆಸ್ | ಮೈಸೂರು | 6 | 11 | 0 | 6 | 23 |
| 205 | ಶ್ರೀ. ಗಾಲಿ ಸೋಮಶೇಖರ ರೆಡ್ಡಿ | ಬಳ್ಳಾರಿ ನಗರ | ಬಿ.ಜೆ.ಪಿ. | ಬಳ್ಳಾರಿ | 0 | 0 |
| 206 | ಶ್ರೀ. ಗೂಳಿಹಟ್ಟಿ ಡಿ. ಶೇಖರ್ | ಹೊಸದುರ್ಗ | ಪಕ್ಷೇತರ | ಚಿತ್ರದುರ್ಗ | 19 | 0 |
| 207 | ಶ್ರೀ. ಗುತ್ತೇದಾರ್ ಸುಭಾಷ್ ರುಕ್ಮಯ್ಯ | ಅಳಂದ | ಜೆ.ಡಿ.ಎಸ್. | ಗುಲ್ಬರ್ಗ | 9 | 9 |

| ಕ್ರ ಸಂ. | ಹೆಸರು | ಕ್ಷೇತ್ರ | ಪಕ್ಷ | ಜಿಲ್ಲೆ | 2011ರ ಒಟ್ಟು ಅಧಿವೇಶನದಲ್ಲಿ ಕೇಳಿ ಬಂದ ಪ್ರಶ್ನೆಗಳು | ಆಯವ್ಯಯ ಅಧಿವೇಶನದಲ್ಲಿ ಕೇಳಿ ಬಂದ ಒಟ್ಟು ಪ್ರಶ್ನೆಗಳು |
|---|---|---|---|---|---|---|
| 208 | ಶ್ರೀ. ಗೋಪಾಲಕೃಷ್ಣ ಬೇಳೂರು | ಸಾಗರ | ಬಿ.ಜೆ.ಪಿ. | ಶಿವಮೊಗ್ಗ | 12 | 0 |
| 209 | ಶ್ರೀ. ಗೋವಿಂದ ಎಂ. ಕಾರಜೋಳ * | ಮುಧೋಳ | ಬಿ.ಜೆ.ಪಿ. | ಬಾಗಲಕೋಟೆ | ಸಚಿವರು | ಸಚಿವರು |
| 210 | ಶ್ರೀ. ತನ್ವೀರ್ ಸೇಟ್ | ನರಸಿಂಹರಾಜ | ಕಾಂಗ್ರೆಸ್ | ಮೈಸೂರು | 18 | 13 |
| 211 | ಶ್ರೀ. ತುಕಾರಾಂ ಇ. | ಸೊಂಡೂರು | ಕಾಂಗ್ರೆಸ್ | ಬಳ್ಳಾರಿ | 16 | 7 |
| 212 | ಶ್ರೀ. ತಿಪ್ಪೇಸ್ವಾಮಿ | ಚಳ್ಳಕೆರೆ | ಬಿ.ಜೆ.ಪಿ. | ಚಿತ್ರದುರ್ಗ | 9 | 0 |
| 213 | ಶ್ರೀ. ಘಟಗೆ ಶಮಾ ಭೀಮಾ | ಕುಡಚಿ | ಕಾಂಗ್ರೆಸ್ | ಬೆಳಗಾಂ | 0 | 0 |
| 214 | ಶ್ರೀ. ಚಂದ್ರಶೇಖರ ಪಾಟೀಲ್ ರೇವೂರು | ಗುಲ್ಬರ್ಗ ದಕ್ಷಿಣ | ಬಿ.ಜೆ.ಪಿ. | ಗುಲ್ಬರ್ಗ | 0 | 0 |
| 215 | ಶ್ರೀ. ದೊಡ್ಡನಗೌಡ ಜಿ. ಪಾಟೀಲ್ | ಹುನಗುಂದ | ಬಿ.ಜೆ.ಪಿ. | ಬಾಗಲಕೋಟೆ | 2 | 0 |
| 216 | ಶ್ರೀ. ಚರಂತಿಮಠ ವೀರಣ್ಣ ಚಂದ್ರಶೇಖರಯ್ಯ | ಬಾಗಲಕೋಟೆ | ಬಿ.ಜೆ.ಪಿ. | ಬಾಗಲಕೋಟೆ | 0 | 0 |
| 217 | ಶ್ರೀ. ದೊಡ್ಡಪ್ಪಗೌಡ ಶಿವಲಿಂಗಪ್ಪಗೌಡ ಪಾಟೀಲ್ | ಜೇವರ್ಗಿ | ಬಿ.ಜೆ.ಪಿ. | ಗುಲ್ಬರ್ಗ | 3 | 3 |
| 218 | ಶ್ರೀಮತಿ ಸೀಮಾ ಮಸೂತಿ | ಧಾರವಾಡ | ಬಿ.ಜೆ.ಪಿ. | ಧಾರವಾಡ | 0 | 0 |
| 219 | ಶ್ರೀಮತಿ ಮಲ್ಲಿಕಾ ಪ್ರಸಾದ್ | ಪುತ್ತೂರು | ಬಿ.ಜೆ.ಪಿ. | ದಕ್ಷಿಣಕನ್ನಡ | 0 | 0 |
| 220 | ಶ್ರೀಮತಿ ಅನಿತಾ ಕುಮಾರಸ್ವಾಮಿ | ಮಧುಗಿರಿ | ಜೆ.ಡಿ.ಎಸ್. | ತುಮಕೂರು | 5 | 0 |
| 221 | ಕು. ಶೋಭಾ ಕರಂದ್ಲಾಜೆ * | ಯಶವಂತಪುರ | ಬಿ.ಜೆ.ಪಿ. | ಬೆಂಗಳೂರು ನ | ಸಚಿವರು | ಸಚಿವರು |
| 222 | ಕೆ. ನೇಮರಾಜ ನಾಯ್ಕ್ | ಹಗರಿಬೊಮ್ಮನಹಳ್ಳಿ | ಬಿ.ಜೆ.ಪಿ. | ಬಳ್ಳಾರಿ | 0 | 0 |
| 223 | ಡಾ. ಶರಣಪ್ರಕಾಶ್ ರುದ್ರಪ್ಪ ಪಾಟೀಲ್ | ಸೇಡಂ | ಕಾಂಗ್ರೆಸ್ | ಗುಲ್ಬರ್ಗ | 21 | 17 |
| 224 | ಡಾ. ಬಗಲಿ ಸಾರ್ವಭೌಮ ಸತಗೌಡ | ಇಂಡಿ | ಬಿ.ಜೆ.ಪಿ. | ಬಿಜಾಪುರ | 27 | 0 |
| 225 | ಡಾ. ಮಾಲಕರೆಡ್ಡಿ ಎ.ಬಿ. | ಯಾದಗಿರಿ | ಕಾಂಗ್ರೆಸ್ | ಗುಲ್ಬರ್ಗ | 0 | 0 |

**(ಪ್ರಸ್ತುತ ವರ್ಷದಲ್ಲಿ ರಾಜ್ಯದ ಮಂತ್ರಿಮಂಡಲದಲ್ಲಿ ಹಲವಾರು ಬದಲಾವಣೆಗಳಾದ್ದರಿಂದ, ಮಂತ್ರಿಗಳ ಸ್ಥಾನದಲ್ಲಿ ವ್ಯತ್ಯಾಸವಾಗಿದೆ.)**

## ಕ್ಷೇತ್ರಾವಾರು ಪ್ರಶ್ನೆಗಳು – ವಿಧಾನ ಪರಿಷತ್ತು

ವಿಧಾನಸಭಾ ಸದಸ್ಯರ ಹಾಗೇ ವಿಧಾನ ಪರಿಷತ್ತಿನ ಸದಸ್ಯರಿಗೆ ಪ್ರತ್ಯೇಕವಾದ ಕ್ಷೇತ್ರವಿಲ್ಲದಿರುವುದರಿಂದ, ಅವರು ಚುನಾಯಿತರಾದ ಕ್ಷೇತ್ರಾವಾರು ವಿಭಾಗಿಸಿ ಪ್ರಶ್ನೆಗಳನ್ನು ವಿಶ್ಲೇಷಿಸಲಾಗಿದೆ.

# ಕ್ಷೇತ್ರಾವಾರು ಪ್ರಶ್ನೆಗಳು – ವಿಧಾನಪರಿಷತ್ತು

| ಕ್ರಮ ಸಂಖ್ಯೆ | ಶಾಸಕರ ಹೆಸರು | ಪಕ್ಷ | ಪ್ರತಿನಿಧಿಸುವ ಕ್ಷೇತ್ರ | 2011ರ ಒಟ್ಟು ಅಧಿವೇಶನದಲ್ಲಿ ಕೇಳಿ ಬಂದ ಒಟ್ಟು ಪ್ರಶ್ನೆಗಳು | ಆಯವ್ಯಯ ಅಧಿವೇಶನದಲ್ಲಿ ಕೇಳಿ ಬಂದ ಒಟ್ಟು ಪ್ರಶ್ನೆಗಳು |
|---|---|---|---|---|---|
| 1 | ಸುದರ್ಶನ್ ವಿ.ಆರ್. | ಕಾಂಗ್ರೆಸ್ | ವಿಧಾನಸಭೆ | 1 | 0 |
| 2 | ಸಂದೇಶ್ ನಾಗರಾಜ್ | ಜೆ.ಡಿ.ಎಸ್ | ಸ್ಥಳೀಯ ಸಂಸ್ಥೆ | 50 | 26 |
| 3 | ಶಶಿಲ್ ಜಿ ನಮೋಶಿ | ಬಿ.ಜೆ.ಪಿ. | ಶಿಕ್ಷಕರ ಕ್ಷೇತ್ರ | 5 | 4 |
| 4 | ಶಂಕ್ರಪ್ಪ ಎನ್ | ಬಿ.ಜೆ.ಪಿ | ವಿಧಾನಸಭೆ | 2 | 1 |
| 5 | ವಿ.ಸೋಮಣ್ಣ | ಬಿ.ಜೆ.ಪಿ | ವಿಧಾನ ಸಭೆ | 0 | 0 |
| 6 | ವೀರಯ್ಯ ಡಿ.ಎಸ್. | ಬಿ.ಜೆ.ಪಿ | ವಿಧಾನ ಸಭೆ | 22 | 18 |
| 7 | ವೀರಕುಮಾರ್ ಅಪ್ಪಾಸೋ ಪಾಟೀಲ್ | ಕಾಂಗ್ರೆಸ್ | ಸ್ಥಳೀಯ ಸಂಸ್ಥೆ | 35 | 22 |
| 8 | ವೀರಣ್ಣ ಮತ್ತೀಕಟ್ಟಿ | ಕಾಂಗ್ರೆಸ್ | ವಿಧಾನ ಸಭೆ | 28 | 28 |
| 9 | ವಿಜಯಸಂಕೇಶ್ವರ | ಬಿ.ಜೆ.ಪಿ | ನಾಮನಿರ್ದೇಶಕ | 0 | 0 |
| 10 | ನಸೀರ್ ಅಹಮದ್ | ಕಾಂಗ್ರೇಸ್ | ಸ್ಥಳೀಯ ಸಂಸ್ಥೆ | 0 | 0 |
| 11 | ನಾರಾಯಣಸಾ. ಬಾಂಡಗೆ | ಬಿ.ಜೆ.ಪಿ | ವಿಧಾನ ಸಭೆ | 0 | 0 |
| 12 | ನಾರಾಯಣಸ್ವಾಮಿ | ಪಕ್ಷೇತರ | ಶಿಕ್ಷಕರ ಕ್ಷೇತ್ರ | 9 | 3 |
| 13 | ನಾರಾಯಣಸ್ವಾಮಿ ವೈ.ಎ. | ಪಕ್ಷೇತರ | ಶಿಕ್ಷಕರ ಕ್ಷೇತ್ರ | 25 | 21 |
| 14 | ನಾಣಯ್ಯ ಎಂ.ಸಿ. | ಜೆ.ಡಿ.ಎಸ್ | ವಿಧಾನ ಸಭೆ | 1 | 0 |
| 15 | ನೀರಾವರಿ ಹೆಚ್.ಸಿ. | ಜೆ.ಡಿ.ಎಸ್ | ವಿಧಾನ ಸಭೆ | 25 | 16 |
| 16 | ಪ್ರತಾಪಚಂದ್ರ ಶೆಟ್ಟಿ ಕೆ. | ಕಾಂಗ್ರೆಸ್ | ಸ್ಥಳೀಯ ಸಂಸ್ಥೆ | 104 | 43 |
| 17 | ಪುಟ್ಟಣ್ಣ | ಜೆ.ಡಿ.ಎಸ್ | ಶಿಕ್ಷಕರ ಕ್ಷೇತ್ರ | 15 | 14 |
| 18 | ಪಟೇಲ್ ಶಿವರಾಂ | ಜೆ.ಡಿ.ಎಸ್ | ಸ್ಥಳೀಯ ಸಂಸ್ಥೆ | 8 | 6 |
| 19 | ಪಾಟೀಲ್ ಎಸ್. ಆರ್. | ಕಾಂಗ್ರೆಸ್ | ಸ್ಥಳೀಯ ಸಂಸ್ಥೆ | 7 | 5 |
| 20 | ಪ್ರೊ ಪಿ.ವಿ. ಕೃಷ್ಣಭಟ್ಟ | ಬಿ.ಜೆ.ಪಿ | ನಾಮನಿರ್ದೇಶನ | 3 | 1 |
| 21 | ಪ್ರೊ ಎಂ ಆರ್ ದೊರೆಸ್ವಾಮಿ | ಬಿ.ಜೆ.ಪಿ | ನಾಮನಿರ್ದೇಶನ | 13 | 10 |
| 22 | ಪ್ರೋ.ಡಾ: ಮುಮ್ತಾಜ್ ಅಲಿಖಾನ್ | ಬಿ.ಜೆ.ಪಿ | ನಾಮನಿರ್ದೇಶನ | 0 | 0 |
| 23 | ಘೋಟ್ನೇಕರ್ ಶ್ರೀಕಾಂತ್ ಲಕ್ಷ್ಮಣ | ಕಾಂಗ್ರೆಸ್ | ಸ್ಥಳೀಯ ಸಂಸ್ಥೆ | 13 | 12 |
| 24 | ಬಸವರಾಜ ಹಾವಗಿಯಪ್ಪ ಪಾಟೀಲ್ | ಬಿ.ಜೆ.ಪಿ | ಸ್ಥಳೀಯ ಸಂಸ್ಥೆ | 0 | 0 |
| 25 | ಬಸವರಾಜ ಹೊರಟ್ಟಿ | ಜೆ.ಡಿ.ಎಸ್. | ಶಿಕ್ಷಕರ ಕ್ಷೇತ್ರ | 66 | 31 |
| 26 | ಲಹರ್ ಸಿಂಗ್ ಸಿರೋಯಾ | ಬಿ.ಜೆ.ಪಿ | ನಾಮ ನಿರ್ದೇಶನ | 0 | 0 |
| 27 | ಸಿ.ಹೆಚ್. ವಿಜಯಶಂಕರ | ಬಿ.ಜೆ.ಪಿ | ವಿಧಾನ ಸಭೆ | 0 | 0 |
| 28 | ಸಿದ್ಧರಾಮಣ್ಣ ಆರ್. ಕೆ. | ಬಿ.ಜೆ.ಪಿ. | ಸ್ಥಳೀಯ ಸಂಸ್ಥೆ | 4 | 1 |


| ಕ್ರಮ ಸಂಖ್ಯೆ | ಶಾಸಕರ ಹೆಸರು | ಪಕ್ಷ | ಪ್ರತಿನಿಧಿಸುವ ಕ್ಷೇತ್ರ | 2011ರ ಒಟ್ಟು ಅಧಿವೇಶನದಲ್ಲಿ ಕೇಳಿ ಬಂದ ಒಟ್ಟು ಪ್ರಶ್ನೆಗಳು | ಆಯವ್ಯಯ ಅಧಿವೇಶನದಲ್ಲಿ ಕೇಳಿ ಬಂದ ಒಟ್ಟು ಪ್ರಶ್ನೆಗಳು |
|---|---|---|---|---|---|
| 29 | ಸಿದ್ಧರಾಜು | ಬಿ.ಜೆ.ಪಿ. | ವಿಧಾನಸಭೆ | 10 | 2 |
| 30 | ಶಿವರಾಜ ಸಜ್ಜನರ್ | ಬಿ.ಜೆ.ಪಿ | ಸ್ಥಳೀಯ ಸಂಸ್ಥೆ | 0 | 0 |
| 31 | ಶ್ರೀನಿವಾಸ್ ಎಂ. | ಬಿ.ಜೆ.ಪಿ. | ವಿಧಾನಸಭೆ | 15 | 10 |
| 32 | ಶ್ರೀಮತಿ ಭಾರತಿ ಶೆಟ್ಟಿ | ಬಿ.ಜೆ.ಪಿ | ವಿಧಾನ ಸಭೆ | 19 | 16 |
| 33 | ಶ್ರೀಮತಿ ವಿಮಲಾ ಗೌಡ | ಬಿ.ಜೆಪಿ. | ವಿಧಾನ ಸಭೆ | ಉಪಸಭಾಪತಿಗಳು | |
| 34 | ಶ್ರೀಮತಿ ಮೋಟಮ್ಮ | ಕಾಂಗ್ರೇಸ್ | ವಿಧಾನ ಸಭೆ | ವಿರೋಧ ಪಕ್ಷದ ನಾಯಕರು | |
| 35 | ಮನೋಹರ ಮಸ್ಕಿ | ಬಿ.ಜೆ.ಪಿ | ಪದವೀಧರರ | 4 | 1 |
| 36 | ಮಲ್ಲಿಕಾರ್ಜುನಪ್ಪ ಕೆ.ಆರ್. | ಬಿ.ಜೆ.ಪಿ | ಸ್ಥಳೀಯ ಸಂಸ್ಥೆ | 27 | 14 |
| 37 | ಮೃತ್ಯುಂಜಯ ಜಿನಗಾ | ಬಿ.ಜೆ.ಪಿ | ಸ್ಥಳೀಯ ಸಂಸ್ಥೆ | 0 | 0 |
| 38 | ಮರಿತಿಬ್ಬೇಗೌಡ | ಪಕ್ಷೇತರ | ಶಿಕ್ಷಕರ ಕ್ಷೇತ್ರ | 71 | 28 |
| 39 | ಮಹಾಂತೇಶ್ ಎಸ್. ಕೌಜಲಗಿ | ಕಾಂಗ್ರೇಸ್ | ಶಿಕ್ಷಕರ ಕ್ಷೇತ್ರ | 54 | 19 |
| 40 | ಮಧುಸೂದನ್ ಗೋ. | ಬಿ.ಜೆ.ಪಿ | ಪದವೀಧರರ | 27 | 16 |
| 41 | ಮಾನೆ ಶ್ರೀನಿವಾಸ | ಕಾಂಗ್ರೇಸ್ | ಸ್ಥಳೀಯ ಸಂಸ್ಥೆ | 3 | 1 |
| 42 | ಮೋಹನ್ ಎ. ಲಿಂಬೇಕಾಯಿ | ಬಿ.ಜೆ.ಪಿ. | ಪದವೀಧರರ | 18 | 13 |
| 43 | ವೈ.ಎಸ್.ವಿ. ದತ್ತ | ಜೆ.ಡಿ.ಎಸ್ | ನಾಮ ನಿರ್ದೇಶನ | 0 | 0 |
| 44 | ಅಶ್ವಥ್ ನಾರಾಯಣ | ಬಿ.ಜೆ.ಪಿ. | ವಿಧಾನ ಸಭೆ | 22 | 13 |
| 45 | ಅಬ್ದುಲ್ ಅಜೀಂ | ಜೆ.ಡಿ.ಎಸ್ | ವಿಧಾನ ಸಭೆ | 36 | 23 |
| 46 | ಅಲ್ಲಮ ಪ್ರಭು ಪಾಟೀಲ್ | ಕಾಂಗ್ರೇಸ್ | ಸ್ಥಳೀಯ ಸಂಸ್ಥೆ | 21 | 17 |
| 47 | ಅರುಣ ಶಹಾಪುರ | ಬಿ.ಜೆ.ಪಿ | ಶಿಕ್ಷಕರ ಕ್ಷೇತ್ರ | 11 | 5 |
| 48 | ಆರ್. ವಿ. ವೆಂಕಟೇಶ್ | ಕಾಂಗ್ರೇಸ್ | ವಿಧಾನಸಭೆ | 83 | 33 |
| 49 | ಜಗ್ಗೇಶ್ | ಬಿ.ಜೆ.ಪಿ | ನಾಮನಿರ್ದೇಶನ | 3 | 1 |
| 50 | ಆಚಾರ್ ಹಾಲಪ್ಪ ಬಸಪ್ಪ | ಬಿ.ಜೆ.ಪಿ. | ಸ್ಥಳೀಯ | 4 | 1 |
| 51 | ಜಾನ್ ಟಿ. | ಕಾಂಗ್ರೇಸ್ | ಸ್ಥಳೀಯ ಸಂಸ್ಥೆ | 5 | 2 |
| 52 | ಜಿ.ಜನಾರ್ಧನ ರೆಡ್ಡಿ | ಬಿ.ಜೆ.ಪಿ | ವಿಧಾನ ಸಭೆ | 0 | 0 |
| 53 | ಜಿ.ಎಸ್. ನ್ಯಾಮಗೌಡ | ಬಿ.ಜೆ.ಪಿ | ಸ್ಥಳೀಯ ಸಂಸ್ಥೆ | 0 | 0 |
| 54 | ಜಿ.ಎಸ್. ತಿಪ್ಪಾರೆಡ್ಡಿ | ಬಿ.ಜೆ.ಪಿ | ಸ್ಥಳೀಯ ಸಂಸ್ಥೆ | 0 | 0 |
| 55 | ರಾಮಕೃಷ್ಣ ಬಿ. | ಜೆ.ಡಿ.ಎಸ್. | ಸ್ಥಳೀಯ ಸಂಸ್ಥೆ | 32 | 17 |
| 56 | ರಾಮಚಂದ್ರ ಗೌಡ | ಬಿ.ಜೆ.ಪಿ | ಪದವೀಧರರ | 0 | 0 |
| 57 | ರಾಜಶೇಖರನ್ ಎಂ.ವಿ. | ಕಾಂಗ್ರೇಸ್ | ವಿಧಾನಸಭೆ | 5 | 2 |
| 58 | ಎಸ್. ಚಿಕ್ಕಮಾದು | ಜೆ.ಡಿ.ಎಸ್ | ವಿಧಾನ ಸಭೆ | 0 | 0 |
| 59 | ಎನ್. ತಿಪ್ಪಣ್ಣ | ಬಿ.ಜೆ.ಪಿ | ನಾಮ ನಿರ್ದೇಶನ | 0 | 0 |
| 60 | ಹುಲಿನಾಯ್ಕರ್ ಎಂ.ಆರ್. | ಜೆ.ಡಿ.ಎಸ್ | ಸ್ಥಳೀಯ ಸಂಸ್ಥೆ | 4 | 1 |
| 61 | ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ | ಬಿ.ಜೆ.ಪಿ. | ಸ್ಥಳೀಯ ಸಂಸ್ಥೆ | 8 | 3 |
| 62 | ಕೃಷ್ಣಪ್ಪ ಇ. | ಜೆ.ಡಿ.ಎಸ್ | ಸ್ಥಳೀಯ ಸಂಸ್ಥೆ | 32 | 11 |
| 63 | ಕೊಂಡಯ್ಯ ಕೆ.ಸಿ. | ಕಾಂಗ್ರೇಸ್ | ವಿಧಾನ ಸಭೆ | 27 | 19 |
| 64 | ಕೆ.ವಿ. ನಾರಾಯಣ ಸ್ವಾಮಿ | ಜೆ.ಡಿ.ಎಸ್ | ವಿಧಾನ ಸಭೆ | 0 | 0 |
| 65 | ಕೋಟ ಶ್ರೀನಿವಾಸ ಪೂಜಾರಿ | ಬಿ.ಜೆ.ಪಿ. | ಸ್ಥಳೀಯ ಸಂಸ್ಥೆ | 22 | 14 |

| ಕ್ರಮ ಸಂಖ್ಯೆ | ಶಾಸಕರ ಹೆಸರು | ಪಕ್ಷ | ಪ್ರತಿನಿಧಿಸುವ ಕ್ಷೇತ್ರ | 2011ರ ಒಟ್ಟು ಅಧಿವೇಶನದಲ್ಲಿ ಕೇಳಿ ಬಂದ ಒಟ್ಟು ಪ್ರಶ್ನೆಗಳು | ಆಯವ್ಯಯ ಅಧಿವೇಶನದಲ್ಲಿ ಕೇಳಿ ಬಂದ ಒಟ್ಟು ಪ್ರಶ್ನೆಗಳು |
|---|---|---|---|---|---|
| 66 | ಡಾ ಎಸ್ ಆರ್ ಲೀಲಾ | ಬಿ.ಜೆ.ಪಿ | ನಾಮನಿರ್ದೇಶನ | 16 | 15 |
| 67 | ಡಾ. ಶ್ರೀನಾಥ್ | ಬಿ.ಜೆ.ಪಿ | ನಾಮನಿರ್ದೇಶನ | 20 | 16 |
| 68 | ಡಾ. ದೊಡ್ಡರಂಗೇಗೌಡ | ಬಿ.ಜೆ.ಪಿ | ನಾಮನಿರ್ದೇಶನ | 61 | 19 |
| 69 | ಡಾ: ಎ.ಹೆಚ್.ಶಿವಯೋಗಿ ಸ್ವಾಮಿ | ಬಿ.ಜೆ.ಪಿ | ಪದವೀಧರರ | 0 | 0 |
| 70 | ಡಿ.ವಿ.ಸದಾನಂದ ಗೌಡ | ಬಿ.ಜೆ.ಪಿ | ವಿಧಾನ ಸಭೆ | | |
| 71 | ಖಾಜಿ ಅರಶದ ಅಲಿ | ಕಾಂಗ್ರೇಸ್ | ವಿಧಾನ ಸಭೆ | 74 | 36 |
| 72 | ಗಾಯಿತ್ರಿ ಶಾಂತೇಗೌಡ | ಕಾಂಗ್ರೇಸ್ | ಸ್ಥಳೀಯ ಸಂಸ್ಥೆ | 7 | 6 |
| 73 | ಗಣೇಶ್ ಕಾರ್ನಿಕ್ | ಬಿ.ಜೆ.ಪಿ. | ಶಿಕ್ಷಕರ ಕ್ಷೇತ್ರ | 35 | 19 |
| 74 | ತೋಂಟದಾರ್ಯ | ಬಿ.ಜೆ.ಪಿ. | ವಿಧಾನಸಭೆ | 31 | 25 |
| 75 | ದಯಾನಂದ | ಕಾಂಗ್ರೇಸ್ | ಸ್ಥಳೀಯ ಸಂಸ್ಥೆ | 20 | 9 |

## ಮಹಿಳಾ ಶಾಸಕರ ಭಾಗವಹಿಸುವಿಕೆ


**ವಿಧಾನಸಭೆ:** ನಾಮನಿರ್ದೇಶನವೂ ಸೇರಿದಂತೆ 225 ಶಾಸಕರನ್ನು ಹೊಂದಿರುವ ರಾಜ್ಯ ವಿಧಾನಸಭೆಯಲ್ಲಿ ಮಹಿಳಾ ಶಾಸಕರ ಸಂಖ್ಯೆ ಕೇವಲ 5. ಅವರಲ್ಲಿ ಒಬ್ಬರು ಸಚಿವರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಉಳಿದ ನಾಲ್ವರು ಮಹಿಳಾ ಶಾಸಕರಲ್ಲಿ ಇಬ್ಬರು ಮಾತ್ರ ವಿಧಾನ ಮಂಡಲ ಅಧಿವೇಶನಗಳಲ್ಲಿ ವಿವಿಧ ಇಲಾಖೆಗಳಿಗೆ ಪ್ರಶ್ನೆಗಳನ್ನು ಕೇಳಿದ್ದರೆ ಇನ್ನುಳಿದ ಇಬ್ಬರು ಯಾವುದೇ ಪ್ರಶ್ನೆಗಳನ್ನು ಕೇಳಿಲ್ಲ.





| ಮಹಿಳಾ ಶಾಸಕರ ಹೆಸರು | ಪ್ರತಿನಿಧಿಸುವ ಪಕ್ಷ | ಪ್ರತಿನಿಧಿಸುವ ಕ್ಷೇತ್ರ | ಪ್ರತಿನಿಧಿಸುವ ಜಿಲ್ಲೆ | 2011ರ ಎಲ್ಲಾ ಅಧಿವೇಶನಗಳಲ್ಲಿ ಕೇಳಿದ ಪ್ರಶ್ನೆಗಳು | 2011ರ ಆಯವ್ಯಯ ಅಧಿವೇಶನದಲ್ಲಿ ಕೇಳಿದ ಪ್ರಶ್ನೆಗಳು |
|---|---|---|---|---|---|
| ಶ್ರೀಮತಿ ಸೀಮಾ ಮಸೂತಿ | ಬಿ.ಜೆ.ಪಿ. | ಧಾರವಾಡ | ಧಾರವಾಡ | 0 | 0 |
| ಶ್ರೀಮತಿ ಅನಿತಾ ಕುಮಾರಸ್ವಾಮಿ | ಜೆ.ಡಿ.ಎಸ್. | ಮಧುಗಿರಿ | ತುಮಕೂರು | 5 | 0 |
| ಕು. ಶೋಭಾ ಕರಂದ್ಲಾಜೆ * | ಬಿ.ಜೆ.ಪಿ. | ಯಶವಂತಪುರ | ಬೆಂಗಳೂರು ನ | 0 | 0 |
| ಶ್ರೀಮತಿ ಕಲ್ಪನಾ ಸಿದ್ದರಾಜು | ಜೆ.ಡಿ.ಎಸ್. | ಮದ್ದೂರು | ಮಂಡ್ಯ | 22 | 13 |
| ಶ್ರೀಮತಿ ಅರುಣಾ ಚಂದ್ರಶೇಖರ ಪಾಟೀಲ್ ರೇವೂರು | ಜೆ.ಡಿ.ಎಸ್. | ಗುಲ್ಬರ್ಗಾ | ಗುಲ್ಬರ್ಗಾ | 0 | 0 |
| * ಸಚಿವರು | | | | | |

**ವಿಧಾನ ಪರಿಷತ್ತು :** 75 ಸದಸ್ಯರನ್ನು ಹೊಂದಿರುವ ರಾಜ್ಯ ವಿಧಾನಪರಿಷತ್ತಿನಲ್ಲಿ ಮಹಿಳಾ ಪ್ರತಿನಿಧಿಗಳ ಸಂಖ್ಯೆ ಕೇವಲ 5 ಮಾತ್ರ. ಅವರಲ್ಲಿ ಒಬ್ಬರು ಉಪಸಭಾಪತಿಗಳಾಗಿ ಹಾಗು ಇನ್ನೊಬ್ಬರು ವಿರೋಧ ಪಕ್ಷದ ನಾಯಕಿಯಾಗಿ ಕಾರ್ಯನಿರ್ವಹಿಸುತ್ತಿದ್ದರೆ ಇನ್ನುಳಿದ ಮೂವರು ವಿಧಾನ ಪರಿಷತ್ತಿನ ಅಧಿವೇಶನಗಳಲ್ಲಿ ವಿವಿಧ ಇಲಾಖೆಗಳಿಗೆ ಪ್ರಶ್ನೆಗಳನ್ನು ಕೇಳಿದ್ದಾರೆ.





| ಮಹಿಳಾ ಶಾಸಕರ ಹೆಸರು | ಪ್ರತಿನಿಧಿಸುವ ಪಕ್ಷ | ಪ್ರತಿನಿಧಿಸುವ ಕ್ಷೇತ್ರ | 2011ರ ಎಲ್ಲಾ ಅಧಿವೇಶನಗಳಲ್ಲಿ ಕೇಳಿದ ಪ್ರಶ್ನೆಗಳು | 2011ರ ಆಯವ್ಯಯ ಅಧಿವೇಶನದಲ್ಲಿ ಕೇಳಿದ ಪ್ರಶ್ನೆಗಳು |
|---|---|---|---|---|
| ಶ್ರೀಮತಿ ವಿಮಲಾಗೌಡ * | ಬಿ.ಜೆ.ಪಿ. | ವಿಧಾನಸಭೆ | – | – |
| ಡಾ. ಎಸ್. ಆರ್. ಲೀಲಾ | ಬಿ.ಜೆ.ಪಿ. | ನಾಮನಿರ್ದೇಶನ | 13 | 10 |
| ಶ್ರೀಮತಿ ಭಾರತಿ ಶೆಟ್ಟಿ | ಬಿ.ಜೆ.ಪಿ. | ವಿಧಾನಸಭೆ | 14 | 9 |
| ಶ್ರೀಮತಿ ಮೋಟಮ್ಮ # | ಕಾಂಗ್ರೆಸ್ | ವಿಧಾನಸಭೆ | – | – |
| ಶ್ರೀಮತಿ ಗಾಯಿತ್ರಿ ಶಾಂತೇಗೌಡ | ಕಾಂಗ್ರೆಸ್ | ಸ್ಥಳೀಯ ಸಂಸ್ಥೆ | 6 | – |
| * ಉಪಸಭಾಪತಿಗಳು; # ವಿರೋಧ ಪಕ್ಷದ ನಾಯಕರು | | | | |

# ಅಲ್ಪಸಂಖ್ಯಾತ ಶಾಸಕರ ಭಾಗವಹಿಸುವಿಕೆ




**ವಿಧಾನಸಭೆ:** ನಾಮನಿರ್ದೇಶನವನ್ನು ಹೊರತುಪಡಿಸಿದರೆ, ರಾಜ್ಯದಲ್ಲಿರುವ ಒಟ್ಟು 224 ವಿಧಾನಸಭಾ ಕ್ಷೇತ್ರಗಳಲ್ಲಿ 10 ಕ್ಷೇತ್ರಗಳನ್ನು ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ಶಾಸಕರು ಪ್ರತಿನಿಧಿಸುತ್ತಿದ್ದಾರೆ. ಇವರಲ್ಲಿ ಆರು ಶಾಸಕರು ವಿಧಾನ ಮಂಡಲ ಅಧಿವೇಶನಗಳಲ್ಲಿ ವಿವಿಧ ಇಲಾಖೆಗಳಿಗೆ ಪ್ರಶ್ನೆಗಳನ್ನು ಕೇಳಿದ್ದರೆ ಇನ್ನುಳಿದ ನಾಲ್ವರು ಯಾವುದೇ ಪ್ರಶ್ನೆಗಳನ್ನು ಕೇಳಿಲ್ಲ.

| ಅಲ್ಪಸಂಖ್ಯಾತ ಶಾಸಕರ ಹೆಸರು | ಪ್ರತಿನಿಧಿಸುವ ಪಕ್ಷ | ಪ್ರತಿನಿಧಿಸುವ ಕೇತ್ರ | ಪ್ರತಿನಿಧಿಸುವ ಜಿಲ್ಲೆ | 2011ರ ಎಲ್ಲಾ ಅಧಿವೇಶನಗಳಲ್ಲಿ ಕೇಳಿದ ಪ್ರಶ್ನೆಗಳು | 2011ರ ಆಯವ್ಯಯ ಅಧಿವೇಶನದಲ್ಲಿ ಕೇಳಿದ ಪ್ರಶ್ನೆಗಳು |
|---|---|---|---|---|---|
| ಶ್ರೀ. ಫಿರೋಜ್ ನೂರುದ್ದೀನ್ ಶೇಠ್ | ಕಾಂಗ್ರೆಸ್ | ಬೆಳಗಾಂ ಉತ್ತರ | ಬೆಳಗಾಂ | – | – |
| ಶ್ರೀ. ಕಮರುಲ್ ಇಸ್ಲಾಂ | ಕಾಂಗ್ರೆಸ್ | ಗುಲ್ಬರ್ಗ ಉತ್ತರ | ಗುಲ್ಬರ್ಗ | 2 | 2 |
| ಶ್ರೀ. ರಹೀಂ ಖಾನ್ | ಕಾಂಗ್ರೆಸ್ | ಬೀದರ್ | ಬೀದರ್ | 24 | 19 |
| ಶ್ರೀ. ಸೈಯದ್ ಯಾಸೀನ್ | ಕಾಂಗ್ರೆಸ್ | ರಾಯಚೂರು | ರಾಯಚೂರು | – | – |
| ಶ್ರೀ. ಕೆ.ಜೆ. ಜಾರ್ಜ್ | ಕಾಂಗ್ರೆಸ್ | ಸರ್ವಜ್ಞ ನಗರ | ಬೆಂಗಳೂರು ನ | 9 | 6 |
| ಶ್ರೀ. ರೋಷನ್ ಬೇಗ್ | ಕಾಂಗ್ರೆಸ್ | ಶಿವಾಜಿ ನಗರ | ಬೆಂಗಳೂರು ನ | – | – |
| ಶ್ರೀ. ಹ್ಯಾರೀಸ್ ಎನ್.ಎ. | ಕಾಂಗ್ರೆಸ್ | ಶಾಂತಿನಗರ | ಬೆಂಗಳೂರು ನ | 86 | 42 |
| ಶ್ರೀ. ಖಾದರ್ ಯು.ಟಿ. | ಕಾಂಗ್ರೆಸ್ | ಮಂಗಳೂರು | ದಕ್ಷಿಣ ಕನ್ನಡ | 100 | 57 |
| ಶ್ರೀ. ತನ್ವೀರ್ ಸೇಠ್ | ಕಾಂಗ್ರೆಸ್ | ನರಸಿಂಹರಾಜ | ಮೈಸೂರು | 27 | 13 |
| | | ಚಾಮರಾಜನಗರ | ಬೆಂಗಳೂರು ನ | – | – |





ಶಾಸಕರು ... ಹೆಚ್ಚಿನ ... ರು (86 ... ಶ್ನೆಗಳನ್ನು ... ದ್ದಾರೆ.

| ಅಲ್ಪಸಂಖ್ಯಾತ ಶಾಸಕರ ಹೆಸರು | ಪ್ರತಿನಿಧಿಸುವ ಪಕ್ಷ | ಪ್ರತಿನಿಧಿಸುವ ಕೇತ್ರ | 2011ರ ಎಲ್ಲಾ ಅಧಿವೇಶನಗಳಲ್ಲಿ ಕೇಳಿದ ಪ್ರಶ್ನೆಗಳು | 2011ರ ಆಯವ್ಯಯ ಅಧಿವೇಶನದಲ್ಲಿ ಕೇಳಿದ ಪ್ರಶ್ನೆಗಳು |
|---|---|---|---|---|
| ಶ್ರೀ. ಅಬ್ದುಲ್ ಅಜೀಂ | ಜೆ.ಡಿ.ಎಸ್. | ವಿಧಾನಸಭೆ | 35 | 24 |
| ಶ್ರೀ. ಜಾನ್ ಟಿ. | ಕಾಂಗ್ರೆಸ್ | ಸ್ಥಳೀಯ ಸಂಸ್ಥೆ | 4 | 3 |
| ಶ್ರೀ. ಖಾಜಿ ಅರಶದ ಅಲಿ | ಕಾಂಗ್ರೆಸ್ | ವಿಧಾನಸಭೆ | 86 | 49 |
| ನಸೀರ್ ಅಹಮದ್ | ಕಾಂಗ್ರೆಸ್ | ಸ್ಥಳೀಯ ಸಂಸ್ಥೆ | 0 | 0 |
| ಪ್ರೊ.ಡಾ: ಮುಮ್ತಾಜ್ ಅಲಿಖಾನ್ | ಬಿ.ಜೆ.ಪಿ | ನಾಮನಿರ್ದೇಶನ | 0 | 0 |

# ಪರಿಶಿಷ್ಟ ಜಾತಿ ಮತ್ತು ಪಂಗಡದ ಶಾಸಕರ ಭಾಗವಹಿಸುವಿಕೆ

**ವಿಧಾನಸಭೆ:** ರಾಜ್ಯದಲ್ಲಿರುವ ಒಟ್ಟು 224 ವಿಧಾನಸಭಾ ಕ್ಷೇತ್ರಗಳಲ್ಲಿ, 48 ಕ್ಷೇತ್ರಗಳನ್ನು ಪರಿಶಿಷ್ಟ ಜಾತಿ ಮತ್ತು ಪಂಗಡದವರು ಪ್ರತಿನಿಧಿಸುತ್ತಿದ್ದಾರೆ (ಒಟ್ಟು ಸಂಖ್ಯೆಯ ಶೇಕಡಾ 21ರಷ್ಟು) ಮತ್ತು ಇವರಲ್ಲಿ ಐವರು ಸಚಿವರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಈ ಶಾಸಕರು ಕೇಳಿರುವ ಒಟ್ಟು ಪ್ರಶ್ನೆಗಳ ಸಂಖ್ಯೆ 168 (ವಿಧಾನ ಸಭೆಯಲ್ಲಿ ಕೇಳಿದ ಒಟ್ಟು ಪ್ರಶ್ನೆಯ ಶೇಕಡಾ 8ರಷ್ಟು). ಇವರಲ್ಲಿ ಅತಿ ಹೆಚ್ಚು ಪ್ರಶ್ನೆಗಳನ್ನು ಕೇಳಿರುವವರು ಶಿವಮೊಗ್ಗ ಗ್ರಾಮೀಣ ಕ್ಷೇತ್ರವನ್ನು ಪ್ರತಿನಿಧಿಸುತ್ತಿರುವ ಶ್ರೀ. ಕೆ.ಜಿ. ಕುಮಾರಸ್ವಾಮಿರವರು (52 ಪ್ರಶ್ನೆಗಳು).

**ಪರಿಶಿಷ್ಟ ಜಾತಿ ಮತ್ತು ಪಂಗಡದ ಸದಸ್ಯರು – ವಿಧಾನಸಭೆ**




| ಕ್ರಸಂ. | ಹೆಸರು | ಕ್ಷೇತ್ರ | ಪಕ್ಷ | ಜಿಲ್ಲೆ | 2011ರ ಎಲ್ಲಾ ಅಧಿವೇಶನಗಳಲ್ಲಿ ಕೇಳಿದ ಪ್ರಶ್ನೆಗಳು | 2011ರ ಆಯವ್ಯಯ ಅಧಿವೇಶನದಲ್ಲಿ ಕೇಳಿದ ಪ್ರಶ್ನೆಗಳು |
|---|---|---|---|---|---|---|
| 1 | ಶ್ರೀ. ಪಿ.ಎಮ್. ನರೇಂದ್ರ ಸ್ವಾಮಿ | ಮಳವಳ್ಳಿ | ಪಕ್ಷೇತರ | ಮಂಡ್ಯ | 1 | 0 |
| 2 | ಶ್ರೀ. ಸುನೀಲ್ ವಲ್ಲಾಪುರೆ | ಚಿಂಚೋಳಿ | ಬಿ.ಜೆ.ಪಿ. | ಗುಲ್ಬರ್ಗ | 0 | 0 |
| 3 | ಶ್ರೀ. ಸುರೇಶ್ ಬಾಬು ಟಿ. ಹೆಚ್. | ಕಂಪ್ಲಿ | ಬಿ.ಜೆ.ಪಿ. | ಬಳ್ಳಾರಿ | 0 | 0 |
| 4 | ಶ್ರೀ. ಸೋಮಲಿಂಗಪ್ಪ ಎಂ.ಎಸ್. | ಸಿರಗುಪ್ಪ | ಬಿ.ಜೆ.ಪಿ. | ಬಳ್ಳಾರಿ | 1 | 1 |
| 5 | ಶ್ರೀ. ವಿ. ಶ್ರೀನಿವಾಸ ಪ್ರಸಾದ್ | ನಂಜನಗೂಡು | ಕಾಂಗ್ರೆಸ್ | ಮೈಸೂರು | 0 | 0 |
| 6 | ಶ್ರೀ. ವೀರಭದ್ರಪ್ಪ ಹಾಲಹರವಿ | ಹು–ಧಾ ಪೂರ್ವ | ಬಿ.ಜೆ.ಪಿ. | ಧಾರವಾಡ | 8 | 0 |
| 7 | ಶ್ರೀ. ನಂಜುಂಡಸ್ವಾಮಿ | ಕೊಳ್ಳೇಗಾಲ | ಬಿ.ಜೆ.ಪಿ. | ಚಾಮರಾಜನಗರ | 7 | 0 |
| 8 | ಶ್ರೀ. ನರಸಿಂಹ ನಾಯಕ್ | ಸುರಪುರ | ಬಿ.ಜೆ.ಪಿ. | ಗುಲ್ಬರ್ಗ | 0 | 0 |
| 9 | ಶ್ರೀ. ನಾರಾಯಣಸ್ವಾಮಿ. ಎಂ. | ಬಂಗಾರುಪೇಟೆ | ಕಾಂಗ್ರೆಸ್ | ಕೋಲಾರ | 6 | 0 |
| 10 | ಶ್ರೀ. ನಾಗೇಂದ್ರ ಬಿ. | ಕೂಡ್ಲಿಗಿ | ಬಿ.ಜೆ.ಪಿ. | ಬಳ್ಳಾರಿ | 0 | 0 |
| 11 | ಶ್ರೀ. ಪ್ರಭು ಚವ್ಹಾಣ್ | ಔರಾದ್ | ಬಿ.ಜೆ.ಪಿ. | ಬೀದರ್ | 13 | 13 |
| 12 | ಶ್ರೀ. ಪ್ರತಾಪ ಗೌಡ ಪಾಟೀಲ್ | ಮಸ್ಕಿ | ಬಿ.ಜೆ.ಪಿ. | ರಾಯಚೂರು | 6 | 6 |
| 13 | ಶ್ರೀ. ಬಸವರಾಜ ನಾಯ್ಕ | ಮಾಯಕೊಂಡ | ಬಿ.ಜೆ.ಪಿ. | ದಾವಣಗೆರೆ | 0 | 0 |
| 14 | ಶ್ರೀ. ಬಿ. ಪ್ರಸನ್ನ ಕುಮಾರ್ | ಪುಲಕೇಶಿನಗರ | ಕಾಂಗ್ರೆಸ್ | ಬೆಂಗಳೂರು ನ | 0 | 0 |
| 15 | ಶ್ರೀ. ಬಿ. ಚಂದ್ರಾನಾಯ್ಕ್ | ಹಡಗಲಿ | ಬಿ.ಜೆ.ಪಿ. | ಬಳ್ಳಾರಿ | 0 | 0 |
| 16 | ಶ್ರೀ. ಶಿವನಗೌಡ ನಾಯಕ್ | ದೇವದುರ್ಗ | ಪಕ್ಷೇತರ | ರಾಯಚೂರು | 0 | 0 |
| 17 | ಶ್ರೀ. ಶಿವರಾಜ ತಂಗಡಗಿ | ಕನಕಗಿರಿ | ಪಕ್ಷೇತರ | ಕೊಪ್ಪಳ | 6 | 0 |
| 18 | ಶ್ರೀ. ಶ್ರೀರಾಮುಲು ಬಿ. * | ಬಳ್ಳಾರಿ ಗ್ರಾಮೀಣ | ಬಿ.ಜೆ.ಪಿ. | ಬಳ್ಳಾರಿ | ಸಚಿವರು | ಸಚಿವರು |
| 19 | ಶ್ರೀ. ವಾಲ್ಮೀಕಿ ನಾಯಕ್ | ಚಿತ್ತಾಪುರ | ಬಿ.ಜೆ.ಪಿ. | ಗುಲ್ಬರ್ಗ | 0 | 0 |
| 20 | ಶ್ರೀ. ಮಾನಪ್ಪ ವಜ್ಜಲ್ | ಲಿಂಗಸೂಗೂರು | ಬಿ.ಜೆ.ಪಿ. | ರಾಯಚೂರು | 0 | 0 |
| 21 | ಶ್ರೀ. ವೆಂಕಟಸ್ವಾಮಿ | ದೇವನಹಳ್ಳಿ | ಕಾಂಗ್ರೆಸ್ | ಬೆಂಗಳೂರು ಗ್ರಾ | 16 | 0 |

| ಕ್ರಸಂ. ಹೆಸರು | | ಕ್ಷೇತ್ರ | ಪಕ್ಷ | ಜಿಲ್ಲೆ | 2011ರ ಎಲ್ಲಾ ಅಧಿವೇಶನಗಳಲ್ಲಿ ಕೇಳಿದ ಪ್ರಶ್ನೆಗಳು | 2011ರ ಆಯವ್ಯಯ ಅಧಿವೇಶನದಲ್ಲಿ ಕೇಳಿದ ಪ್ರಶ್ನೆಗಳು |
|---|---|---|---|---|---|---|
| 22 | ಶ್ರೀ. ವೆಂಕಟರಮಣಪ್ಪ * | ಪಾವಗಡ | ಪಕ್ಷೇತರ | ತುಮಕೂರು | ಸಚಿವರು | ಸಚಿವರು |
| 23 | ಶ್ರೀ. ವೈ. ಸಂಪಂಗಿ | ಕೆ.ಜಿ.ಎಫ್. | ಬಿ.ಜೆ.ಪಿ. | ಕೋಲಾರ | 0 | 0 |
| 24 | ಶ್ರೀ. ಚಿಕ್ಕಣ್ಣ | ಹೆಗ್ಗಡದೇವನಕೋಟೆ | ಕಾಂಗ್ರೆಸ್ | ಮೈಸೂರು | 4 | 3 |
| 25 | ಶ್ರೀ. ಅಮರೇಶ್ | ಮುಳಬಾಗಿಲು | ಕಾಂಗ್ರೆಸ್ | ಕೋಲಾರ | 6 | 6 |
| 26 | ಶ್ರೀ. ಅಂಗಾರ. ಎಸ್. | ಸುಳ್ಯ | ಬಿ.ಜೆ.ಪಿ. | ದಕ್ಷಿಣಕನ್ನಡ | 0 | 0 |
| 27 | ಶ್ರೀ. ಅರವಿಂದ್ ಲಿಂಬಾವಳಿ * | ಮಹದೇವಪುರ | ಬಿ.ಜೆ.ಪಿ. | ಬೆಂಗಳೂರು ನ | ಸಚಿವರು | ಸಚಿವರು |
| 28 | ಶ್ರೀ. ಜಾರಕಿಹೊಳಿ ಸತೀಶ್ ಲಕ್ಷ್ಮಣರಾವ್ | ಯಮಕನಮರಡಿ | ಕಾಂಗ್ರೆಸ್ | ಬೆಳಗಾಂ | 0 | 0 |
| 29 | ಶ್ರೀ. ರಾಮಣ್ಣ ಎಸ್. ಲಮಾನಿ | ಶಿರಹಟ್ಟಿ | ಬಿ.ಜೆ.ಪಿ. | ಗದಗ | 1 | 0 |
| 30 | ಶ್ರೀ. ರಾಜಾ ರಾಯಪ್ಪ ನಾಯ್ಕ್ | ರಾಯಚೂರು ಗ್ರಾ | ಕಾಂಗ್ರೆಸ್ | ರಾಯಚೂರು | 0 | 0 |
| 31 | ಶ್ರೀ. ರೇವು ನಾಯಕ್ ಬೆಳಮಗಿ* | ಗುಲ್ಬರ್ಗ ಗ್ರಾಮೀಣ | ಬಿ.ಜೆ.ಪಿ. | ಗುಲ್ಬರ್ಗ | ಸಚಿವರು | ಸಚಿವರು |
| 32 | ಶ್ರೀ. ಎ. ನಾರಾಯಣಸ್ವಾಮಿ | ಆನೇಕಲ್ | ಬಿ.ಜೆ.ಪಿ. | ಬೆಂಗಳೂರು ಗ್ರಾ | 0 | 0 |
| 33 | ಶ್ರೀ. ಎಸ್.ವಿ. ರಾಮಚಂದ್ರ | ಜಗಳೂರು | ಕಾಂಗ್ರೆಸ್ | ದಾವಣಗೆರೆ | 2 | 0 |
| 34 | ಶ್ರೀ. ಎನ್. ವೈ. ಗೋಪಾಲಕೃಷ್ಣ | ಮೊಳಕಾಲ್ಮುರು | ಕಾಂಗ್ರೆಸ್ | ಚಿತ್ರದುರ್ಗ | 0 | 0 |
| 35 | ಶ್ರೀ. ಎಂ.ಪಿ. ಕುಮಾರಸ್ವಾಮಿ | ಮೂಡಿಗೆರೆ | ಬಿ.ಜೆ.ಪಿ. | ಚಿಕ್ಕಮಗಳೂರು | 1 | 0 |
| 36 | ಶ್ರೀ. ಎಂ.ವಿ. ನಾಗರಾಜ | ನೆಲಮಂಗಲ | ಬಿ.ಜೆ.ಪಿ. | ಬೆಂಗಳೂರು ಗ್ರಾ | 0 | 0 |
| 37 | ಶ್ರೀ. ಐಹೊಳೆ ದುರ್ಯೋದನ ಮಹಾಲಿಂಗಪ್ಪ | ರಾಯಬಾಗ್ | ಬಿ.ಜೆ.ಪಿ. | ಬೆಳಗಾಂ | 0 | 0 |
| 38 | ಶ್ರೀ. ಹಂಪಯ್ಯ ನಾಯಕ್ ಬೆಳಮಗಿ ಜಿ. | ಮಾನ್ವಿ | ಕಾಂಗ್ರೆಸ್ | ರಾಯಚೂರು | 0 | 0 |
| 39 | ಶ್ರೀ. ಹೆಚ್.ಕೆ. ಕುಮಾರಸ್ವಾಮಿ | ಸಕಲೇಶಪುರ | ಜೆ.ಡಿ.ಎಸ್. | ಹಾಸನ | 13 | 13 |
| 40 | ಶ್ರೀ. ಕಟಕದೊಂಡ್ ವಿಟ್ಟಲ್ ಧೋಂಡಿಬಾ | ನಾಗಥಾನ | ಬಿ.ಜೆ.ಪಿ. | ಬಿಜಾಪುರ | 0 | 0 |
| 41 | ಶ್ರೀ. ಕೆ.ಜಿ. ಕುಮಾರಸ್ವಾಮಿ | ಶಿವಮೊಗ್ಗ ಗ್ರಾಮೀಣ | ಬಿ.ಜೆ.ಪಿ. | ಶಿವಮೊಗ್ಗ | 52 | 48 |
| 42 | ಶ್ರೀ. ಡಾ. ಜಿ. ಪರಮೇಶ್ವರ | ಕೊರಟಗೆರೆ | ಕಾಂಗ್ರೆಸ್ | ತುಮಕೂರು | 0 | 0 |
| 43 | ಶ್ರೀ. ಡಾ. ಹೆಚ್.ಸಿ. ಮಹದೇವಪ್ಪ | ಟಿ. ನರಸೀಪುರ | ಕಾಂಗ್ರೆಸ್ | ಮೈಸೂರು | 8 | 0 |
| 44 | ಶ್ರೀ. ಗೋವಿಂದ ಎಂ. ಕಾರಜೋಳ * | ಮುಧೋಳ | ಬಿ.ಜೆ.ಪಿ. | ಬಾಗಲಕೋಟೆ | ಸಚಿವರು | ಸಚಿವರು |
| 45 | ಶ್ರೀ. ತುಕಾರಾಂ ಇ. | ಸೊಂಡೂರು | ಕಾಂಗ್ರೆಸ್ | ಬಳ್ಳಾರಿ | 7 | 7 |
| 46 | ಶ್ರೀ. ತಿಪ್ಪೇಸ್ವಾಮಿ | ಚಳ್ಳಕೆರೆ | ಬಿ.ಜೆ.ಪಿ. | ಚತ್ರದುರ್ಗ | 9 | 0 |
| 47 | ಶ್ರೀ. ಘಟಗೆ ಶಮಾ ಭೀಮಾ | ಕುಡಚಿ | ಕಾಂಗ್ರೆಸ್ | ಬೆಳಗಾಂ | 0 | 0 |
| 48 | ಕೆ. ನೇಮರಾಜ ನಾಯ್ಕ್ | ಹಗರಿಬೊಮ್ಮನಹಳ್ಳಿ | ಬಿ.ಜೆ.ಪಿ. | ಬಳ್ಳಾರಿ | 0 | 0 |

**ವಿಧಾನ ಪರಿಷತ್ತನ್ನು ಪ್ರತಿನಿಧಿಸುತ್ತಿರುವ ಪರಿಶಿಷ್ಟ ಜಾತಿ ಮತ್ತು ಪಂಗಡದ ಶಾಸಕರ ವಿವರ ಲಭ್ಯವಿಲ್ಲದಿರುವುದರಿಂದ, ಅವರ ವಿವರಗಳನ್ನು ಇಲ್ಲಿ ನೀಡಲಾಗಿಲ್ಲ.**

# ಇಲಾಖಾವಾರು ಪ್ರಶ್ನೋತ್ತರಗಳ ವಿಶ್ಲೇಷಣೆ

ವಿಧಾನ ಮಂಡಲದ ಆಯವ್ಯಯ ಅಧಿವೇಶನ 2011ರಲ್ಲಿ ಕೆಲವು ಮುಖ್ಯ ಇಲಾಖೆಗಳು ಎದುರಿಸಿದ ಪ್ರಶ್ನೆಗಳನ್ನು ಮತ್ತು ಸಂಬಂಧಿಸಿದ ಇಲಾಖೆಗಳು ನೀಡಿರುವ ಉತ್ತರಗಳನ್ನು ಎದುರಿಟ್ಟುಕೊಂಡು ವಿಶ್ಲೇಷಿಸುವ ಯತ್ನ ಮಾಡಲಾಗಿದೆ. ಈ ನಮ್ಮ ವಿಶ್ಲೇಷಣೆ ಮತ್ತು ಕೆಲವು ಟೀಕೆ ಹಾಗೂ ಸಲಹೆಗಳು ವಿಸ್ತೃತ ಚರ್ಚೆಗೆ ಬರಬೇಕಿದೆ. ಈ ಯತ್ನದ ಉದ್ದೇಶವೇ ಮುಂದಿನ ದಿನಗಳಲ್ಲಿ ವಿಧಾನ ಮಂಡಲದಲ್ಲಿ ಗುಣಾತ್ಮಕವಾದ ಮತ್ತು ರಾಜ್ಯದ ಎಲ್ಲ ಜಿಲ್ಲೆಗಳು, ತಾಲೂಕುಗಳ ಜನರ ಆಶೋತ್ತರಗಳನ್ನು ಪ್ರತಿನಿಧಿಸಿ ಜನರ ಬದುಕನ್ನು ಉತ್ತಮ ಮಾಡುವಂತೆ ಸರ್ಕಾರವನ್ನು ಒತ್ತಾಯಿಸುವ ಮತ್ತು ಸರ್ಕಾರಕ್ಕೆ ಉತ್ತಮ ಸಲಹೆಗಳನ್ನು ಕೊಡುವಂತೆ ಶಾಸಕರು ಹೆಚ್ಚು ಗಮನ ಹರಿಸುವಂತೆ ಮಾಡುವುದಾಗಿದೆ. ನಾವು ಆಯ್ದುಕೊಂಡಿರುವ ಇಲಾಖೆಗಳು ಎದುರಿಸಿದ ಪ್ರಶ್ನೆಗಳು ಮತ್ತು ಉತ್ತರಗಳನ್ನು ವಿಶ್ಲೇಷಿಸಿ ಕೆಲವು ಪ್ರಾತಿನಿಧಿಕ ಪ್ರಶ್ನೆ ಮತ್ತು ಉತ್ತರಗಳನ್ನು ದಾಖಲಿಸಿದ್ದೇವೆ.

## ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ

2011ರ ಆಯವ್ಯಯ ಅಧಿವೇಶನದಲ್ಲಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ ಎದುರಿಸಿದ ಪ್ರಶ್ನೆಗಳ ಸಂಖ್ಯೆ 122 (ವಿಧಾನಸಭೆ = 46 ಮತ್ತು ವಿಧಾನ ಪರಿಷತ್ತು = 76). ಆದರೆ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆಗೆ ಬಂದ ಪ್ರಶ್ನೆಗಳಲ್ಲಿ ಬಹುತೇಕ ಪ್ರಶ್ನೆಗಳು ಕಳೆದ ವರ್ಷಗಳ ಪ್ರಶ್ನೆಗಳ ಪುನರಾವರ್ತನೆಗಳಂತಿವೆ. ಬಹುತೇಕ ಪ್ರಶ್ನೆಗಳು ಶಾಲಾ ಕೊಠಡಿ ಕೊರತೆ, ಶಿಕ್ಷಕರ ಕೊರತೆ, ಹೊಸ ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜುಗಳ ಮಂಜೂರಾತಿ, ಶಾಲೆಗೆ ಸಂಬಂಧಿಸಿದ ಇತರೆ ಕೊರತೆಗಳನ್ನು ಕುರಿತದ್ದಾಗಿವೆಯೇ, ಹೊರತು ಶಿಕ್ಷಣ ಅದರಲ್ಲೂ ಗುಣಾತ್ಮಕ ಶಿಕ್ಷಣ ಮತ್ತು ಶಿಕ್ಷಣ ವ್ಯವಸ್ಥೆ ಕುರಿತಾದ ಪ್ರಶ್ನೆಗಳಾಗಿಲ್ಲ.

ಆದರೂ, ಶಾಲೆಯಿಂದ ಹೊರಗುಳಿದ ಮಕ್ಕಳ ಅಧ್ಯಯನ, ಹದಿಹರೆಯದವರಿಗೆ ಕೌಶಲ್ಯ ತರಬೇತಿ, ಸರ್ಕಾರಿ ಶಾಲೆಗಳ ದತ್ತು, ಗ್ರಾಮೀಣ ಪ್ರದೇಶದಲ್ಲಿ ಹೆಣ್ಣುಮಕ್ಕಳ ಶಿಕ್ಷಣವನ್ನು ಮೊಟಕುಗೊಳಿಸುತ್ತಿರುವುದು ಇವೇ ಮೊದಲಾದ ಪ್ರಶ್ನೆಗಳನ್ನು ಅದರಲ್ಲೂ ಮುಖ್ಯವಾಗಿ ಇತ್ತೀಚೆಗೆ ಜಾರಿಗೆ ಬಂದ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಕಾಯ್ದೆಯ ಜಾರಿ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳ ಕುರಿತು ಕೇಳಿರುವ ಶಾಸಕರು ಅಭಿನಂದನಾರ್ಹರು.

**2011ರ ಆಯವ್ಯಯ ಅಧಿವೇಶನದಲ್ಲಿ ವಿಧಾನಸಭೆಯಲ್ಲಿ ಶಿಕ್ಷಣ ಇಲಾಖೆಗೆ ಕೇಳಲ್ಪಟ್ಟ ಪಕ್ಷಾವಾರು ಒಟ್ಟು ಪ್ರಶ್ನೆಗಳು**

| ಪಕ್ಷ | ಒಟ್ಟು ಪ್ರಶ್ನೆಗಳು |
|---|---|
| ಬಿ.ಜೆ.ಪಿ | 8 |
| ಜೆ.ಡಿ.ಎಸ್ | 17 |
| ಕಾಂಗ್ರೆಸ್ | 21 |
| ಒಟ್ಟು | 46 |

**2011ರ ಆಯವ್ಯಯ ಅಧಿವೇಶನದಲ್ಲಿ ವಿಧಾನ ಪರಿಷತ್ತಿನಲ್ಲಿ ಶಿಕ್ಷಣ ಇಲಾಖೆಗೆ ಕೇಳಲ್ಪಟ್ಟ ಪಕ್ಷಾವಾರು ಒಟ್ಟು ಪ್ರಶ್ನೆಗಳು**

| ಪಕ್ಷ | ಒಟ್ಟು ಪ್ರಶ್ನೆಗಳು |
|---|---|
| ಪಕ್ಷೇತರ | 2 |
| ಬಿ.ಜೆ.ಪಿ | 22 |
| ಜೆ.ಡಿ.ಎಸ್ | 23 |
| ಕಾಂಗ್ರೆಸ್ | 29 |
| **ಒಟ್ಟು** | **76** |

ಸ್ಪಷ್ಟ ಉತ್ತರವಿಲ್ಲದ ಸರ್ಕಾರದ ಧೋರಣೆಯನ್ನು ಪ್ರಶ್ನಿಸಿರುವ ಮುಖ್ಯ ಪ್ರಶ್ನೆಗಳು ಮತ್ತು ಅವುಗಳಿಗೆ ಸಂಬಂಧಿಸಬಹುದಾದ ಉಪ ಪ್ರಶ್ನೆಗಳು ಏಕೋ ಏನೋ ಹಾಗೆ ಮುಚ್ಚಿ ಹೋಗಿವೆ. ಗಂಭೀರವಾದ ಸಮಸ್ಯೆಗಳನ್ನು ಎತ್ತಿ ಹಿಡಿಯುವ ಪ್ರಶ್ನೆಗಳಿಗೆ ಕೊಡುವ ಸ್ಪಷ್ಟತೆ ಇಲ್ಲದ ಉತ್ತರಗಳಲ್ಲಿ ಸಮಸ್ಯೆಯ ಅಗಾಧತೆ ಹಾಗೂ ಮಹತ್ವಗಳು ನೇಪಥ್ಯಕ್ಕೆ ಸರಿದು ಹೋಗುತ್ತವೆ. ಅಂತಹ ಅನೇಕ ಪ್ರಶ್ನೆಗಳು ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಾಗಿ ಚರ್ಚೆಗೆ ಆಸ್ಪದವೇ ಇಲ್ಲದಂತಾಗುತ್ತದೆ. ಹೀಗಾಗಿ, ವಿಧಾನಸಭೆಯಲ್ಲಿ ಶಾಸಕರು ಹಲವಾರು ಮೌಲಿಕ ಪ್ರಶ್ನೆಗಳನ್ನು ಕೇಳಿದ್ದರೂ,

ಅವುಗಳಿಗೆ ಸಂಬಂಧಪಟ್ಟ ಸಚಿವರುಗಳಿಂದ ಬಂದ ಉತ್ತರಗಳು ತೀವ್ರವಾಗಿ ನಿರಾಸೆಗೊಳಿಸುತ್ತವೆ. ಹಾಗಾಗಿಯೇ ಗಾಢವಾದ ಸಮಸ್ಯೆಯ ಕುರಿತಾದ ಪ್ರಶ್ನೆಗಳ ಮೌಲ್ಯವು ಮಸುಕಾಗಿದೆ ಎಂದೇ ಹೇಳಬೇಕು. ಈ ಉತ್ತರ ಸಾರ್ವಜನಿಕರ ಅರಿವಿಗೆ ಬಂದಲ್ಲಿ, ತೊಂದರೆಗೊಳಗಾದ ಜನ ಮತ್ತು ಮಕ್ಕಳು ಪ್ರತಿಕ್ರಿಯೆ ನೀಡಬಲ್ಲರು. ತಮ್ಮ ಹಕ್ಕಿಗಾಗಿ ಒತ್ತಾಯಿಸಬಲ್ಲರು.

ಉದಾಹರಣೆಗೆ ದಿನಾಂಕ 9–3–2011ರಂದು ಶ್ರೀ. ಅಮರೇಶ್‌ರವರ (ಪ್ರಶ್ನೆ ಸಂಖ್ಯೆ ಚುಕ್ಕೆ 219) ಪ್ರಶ್ನೆಗೆ 'ಸಮವಸ್ತ್ರಗಳು ಸರಿಯಾದ ಸಮಯಕ್ಕೆ ಎಲ್ಲಾ ಶಾಲೆಗಳಿಗೂ ಪೂರೈಕೆಯಾಗಿದೆ' ಎಂದು ಸರ್ಕಾರ ಹೇಳಿಕೆ ನೀಡಿದ್ದರೂ ಅನೇಕ ಪತ್ರಿಕಾ ವರದಿಗಳು ಶಾಲಾ ಸಮವಸ್ತ್ರ ಜೂನ್ ತಿಂಗಳು ಕಳೆದರೂ ಇನ್ನು ಲಭ್ಯವಿಲ್ಲದೆ ಇರುವುದನ್ನು ಪ್ರಕಟಿಸಿವೆ.

**ದಿನಾಂಕ: 09–03–2011 – ಚುಕ್ಕೆ 219: ಶಾಲಾ ಮಕ್ಕಳಿಗೆ ಉಚಿತ ಸಮವಸ್ತ್ರ, ಶ್ರೀ ಅಮರೇಶ್ (ಕಾಂಗ್ರೆಸ್ – ಮುಳಬಾಗಿಲು)**

**ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ವಿಷಯಗಳನ್ನು ತಿಳಿಸುವರೆ:**

ಅ) ಶಾಲಾ ಮಕ್ಕಳಿಗೆ ಯಾವ ತರಗತಿಯಿಂದ ಉಚಿತವಾಗಿ ಸಮವಸ್ತ್ರಗಳನ್ನು ವಿತರಿಸಲಾಗುತ್ತಿದೆ.

ಆ) ಇದಕ್ಕಾಗಿ ಪ್ರತಿ ವರ್ಷ ಬಿಡುಗಡೆಯಾಗುವ ಮೊತ್ತವೆಷ್ಟು; ಯಾವ ಏಜೆನ್ಸಿಯಿಂದ ಸಮವಸ್ತ್ರಗಳನ್ನು ಕಳುಹಿಸಲಾಗಿದೆ. (ಗುತ್ತಿಗೆದಾರರ ಸಂಪೂರ್ಣ ವಿವರ ನೀಡುವುದು)

ಇ) ಪ್ರಸಕ್ತ ಸಾಲಿನಲ್ಲಿ ವಿತರಿಸಲಾಗಿರುವ ಸಮವಸ್ತ್ರಗಳು ಕಳಪೆ ಗುಣಮಟ್ಟದ್ದಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು;

ಉ) ಈ ಸಾಲಿನಲ್ಲಿ ಪುಸ್ತಕಗಳು ಆಯಾಯ ಶಾಲೆಗಳಿಗೆ ಸಮರ್ಪಕವಾಗಿ ಪೂರೈಕೆಯಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

**ಉತ್ತರಿಸಿದವರು: ಶ್ರೀ. ವಿಶ್ವೇಶ್ವರ ಹೆಗಡೆ ಕಾಗೇರಿ, ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ**

ಅ) ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ 1 ರಿಂದ 10ನೇ ತರಗತಿಯ ಎಲ್ಲಾ ಮಕ್ಕಳಿಗೆ 1 ಸೆಟ್ ಸಮವಸ್ತ್ರವನ್ನು ವಿತರಿಸಲಾಗಿದೆ.

ಆ) ಸಮವಸ್ತ್ರ ಪೂರೈಕೆಗಾಗಿ 2008–09ನೇಸಾಲಿನಲ್ಲಿ ರೂ.65.85 ಕೋಟಿಗಳು, 2009–10ನೇ ಸಾಲಿಗೆ ರೂ.75.22 ಕೋಟಿಗಳು ಮತ್ತು 2010–11ನೇ ಸಾಲಿಗೆ ರೂ.67.12 ಕೋಟಿಗಳಷ್ಟು ಹಣ ಬಿಡುಗಡೆ ಮಾಡಲಾಗಿದೆ. ಈ ಹಣದಲ್ಲಿ 2009–10ನೇ ಸಾಲಿನವರೆಗೂ ಎಲ್ಲಾ ಹಣವನ್ನು ಸಂಪೂರ್ಣವಾಗಿ ಸರಬರಾಜು ಸಂಸ್ಥೆಗಳಿಗೆ ಪಾವತಿಸಲಾಗಿದೆ. 2010–11ನೇ ಸಾಲಿನಲ್ಲಿ ಮಾತ್ರ ಬಾಕಿ ರೂ.26.78 ಕೋಟಿಗಳಷ್ಟು ಹಣವನ್ನು ಸರ್ಕಾರದಿಂದ ಬಿಡುಗಡೆ ಮಾಡಬೇಕಿರುತ್ತದೆ. ಸಮವಸ್ತ್ರಗಳನ್ನು ಕರ್ನಾಟಕ ರಾಜ್ಯ ಸರ್ಕಾರಿ ಸ್ವಾಮ್ಯದ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ಮತ್ತು ಕರ್ನಾಟಕ ವಿದ್ಯುತ್ ಮಗ್ಗಗಳ ಅಭಿವೃದ್ಧಿ ನಿಗಮಗಳಿಂದ ಸಮವಸ್ತ್ರ ಖರೀದಿಸಿ ವಿತರಿಸಲಾಗುತ್ತಿದೆ.

ಇ) ಇಲ್ಲ

ಈ) ಉದ್ಭವಿಸುವುದಿಲ್ಲ

ಉ) ಹೌದು. 2010–11ನೇ ಸಾಲಿನ ಪ್ರಾರಂಭದಲ್ಲಿ ಪಠ್ಯಪುಸ್ತಕಗಳ ವಿತರಣೆಯಲ್ಲಿ ಸ್ವಲ್ಪ ವಿಳಂಬವಾಗಿತ್ತು ಆದರೂ ಎಲ್ಲಾ ಜಿಲ್ಲೆಗಳ ಎಲ್ಲಾ ಶಾಲೆಗಳಿಗೂ ಈಗಾಗಲೇ ಸಂಪೂರ್ಣವಾಗಿ ಪೂರೈಕೆ ಮಾಡಲಾಗಿದೆ.



ಬುಧವಾರ, 29 ಜೂನ್ 2011 | ಕನ್ನಡಪ್ರಭ, ಬೆಂಗಳೂರು

ವಿಳಂಬ ನೀತಿ ಎಂಟು ಜಿಲ್ಲೆಗಳಲ್ಲಿ ಇನ್ನೂ ಸಮಸ್ಯೆ

**ತಿಂಗಳೇ ಕಳೆದರೂ ಶಾಲಾ ಮಕ್ಕಳಿಗೆ ಸಿಕ್ಕಿಲ್ಲ ಸಮವಸ್ತ್ರ**

■ ಮಲ್ಲಿಕಾರ್ಜುನ ಸಿದ್ದಣ್ಣವರ

ಹುಬ್ಬಳ್ಳಿ: ಪ್ರಸಕ್ತ ಶೈಕ್ಷಣಿಕ ವರ್ಷ ಆರಂಭವಾಗಿ ತಿಂಗಳು ಕಳೆದರೂ ಬೆಳಗಾವಿ ವಿಭಾಗದ ಒಂಬತ್ತು ಶೈಕ್ಷಣಿಕ ಜಿಲ್ಲೆಗಳ 40 ಲಕ್ಷ ಬಡ ವಿದ್ಯಾರ್ಥಿಗಳಿಗೆ ರಾಜ್ಯ ಸರ್ಕಾರದ 'ವಿದ್ಯಾವಿಕಾಸ ಯೋಜನೆ'ಯಡಿ ಕೊಡಮಾಡುವ 'ಸಮವಸ್ತ್ರ' ಇನ್ನೂ ಪೂರೈಕೆಯಾಗಿಲ್ಲ. ಆಗಸ್ಟ್ ಒಳಗಾಗಿ ಪೂರೈಕೆಯಾಗುವ ಯಾವುದೇ ಸಾಧ್ಯತೆಯೂ ಇಲ್ಲ! 'ಈ ಬಾರಿ ಯಾವುದಕ್ಕೂ ಕೊರತೆ ಇಲ್ಲದಂತೆ ಸಕಲ ಸಿದ್ಧತೆಯೊಂದಿಗೆ ಪ್ರಾಥಮಿಕ ಶಾಲೆಗಳನ್ನು ಆರಂಭಿಸುತ್ತೇವೆ' ಎಂದು ಘೋಷಿಸಿದ್ದ ಶಿಕ್ಷಣ ಸಚಿವ ವಿಶ್ವೇಶ್ವರ ಹೆಗಡೆ ಕಾಗೇರಿ, 'ಮೂರು ದಿನ ಮುಂಚಿತವಾಗಿಯೇ (ಮೇ 27) ನಿಮ್ಮ ಶಾಲೆಗಳಿಗೆ ಹಾಜರಾಗಿರಿ' ಎಂದು ಶಿಕ್ಷಕ ಸಮುದಾಯಕ್ಕೆ ಕಟ್ಟಾಜ್ಞೆ ನೀಡಿದರೂ ಮುಂದುವರೆದಿರುವ ಈ ಅವ್ಯವಸ್ಥೆ ಇದು.

ಪ್ರತಿಬಾರಿಯಂತೆ ಮೇ 30ಕ್ಕೆ ರಾಜ್ಯದ ಎಲ್ಲ ಪ್ರಾಥಮಿಕ ಶಾಲೆಗಳು ಆರಂಭವಾಗಿವೆ. ಸಚಿವರ ವಿಶೇಷ ಆದೇಶದಂತೆ ಮೇ 27 ರಿಂದಲೇ ಶಾಲೆಗೆ ಬಂದಿರುವ ಶಿಕ್ಷಕರು ಶಾಲಾ ಕೊಠಡಿ– ಆವರಣದ ಸ್ವಚ್ಛತೆ ಮತ್ತು ರಿಪೇರಿ ಕಾರ್ಯ ಪೂರೈಸಿಕೊಂಡಿದ್ದಾರೆ. ಬಿಸಿಯೂಟ, ಕುಡಿಯುವ ನೀರಿನ ವ್ಯವಸ್ಥೆ, ಪಠ್ಯ– ಪುಸ್ತಕಗಳ ವಿತರಣೆ ಮಾಡಿಕೊಂಡಿದ್ದಾರೆ. ಆದರೆ, ಸರ್ಕಾರ ಮಾತ್ರ ಸಮವಸ್ತ್ರ ವಿತರಣೆಯಲ್ಲಿ ವಿಳಂಬ ನೀತಿ ಅನುಸರಿಸಿದೆ.

► 10

# ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

2011ರ ಆಯವ್ಯಯ ಅಧಿವೇಶನದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಎದುರಿಸಿದ ಪ್ರಶ್ನೆಗಳ ಸಂಖ್ಯೆ 32 (ವಿಧಾನಸಭೆ = 18 ಮತ್ತು ವಿಧಾನ ಪರಿಷತ್ತು = 14). ಕಳೆದ ಹಲವಾರು ವರ್ಷಗಳಿಗೆ ಹೋಲಿಸಿದರೆ ಈ ಬಾರಿ ಪ್ರಶ್ನೆಗಳ ಸಂಖ್ಯೆ ಕಡಿಮೆಯಿದ್ದರೂ ಮಕ್ಕಳಿಗೆ ಸಂಬಂಧಿಸಿದಂತೆ ನೇರವಾದ ಹಲವು ಗುಣಮಟ್ಟದ ಪ್ರಶ್ನೆಗಳು ಚರ್ಚೆಗೆ ಬಂದಿವೆ. ಭಾಗ್ಯಲಕ್ಷ್ಮೀ ಯೋಜನೆ, ಅಂಗವಿಕಲರ ಅಭಿವೃದ್ಧಿ, ರಾಜ್ಯದ ಗರ್ಭಿಣಿ ಮತ್ತು ಬಾಣಂತಿಯರಿಗೆ ಪೌಷ್ಟಿಕ ಆಹಾರದ ಪೂರೈಕೆ, ಅಂಗನವಾಡಿ ಮಕ್ಕಳಿಗೆ ಪೌಷ್ಟಿಕ ಆಹಾರದ ಕೊರತೆ ಇವೇ ಮೊದಲಾದ ಗುಣಾತ್ಮಕ ಪ್ರಶ್ನೆಗಳು ಕಂಡು ಬಂದಿವೆ.

ಆದರೂ, ಇಲಾಖೆಗೆ ಪ್ರಶ್ನೆ ಕೇಳುವಾಗ ಶಾಸಕರು ಬರೀ ರಾಜ್ಯದಲ್ಲಿ ಇರುವ ಅಂಗನವಾಡಿಗಳ ಒಟ್ಟು ಸಂಖ್ಯೆ ಮತ್ತು ಕಾರ್ಯಕರ್ತೆಯರ ಸಂಖ್ಯೆಯ ಬಗ್ಗೆಯೇ ಹೆಚ್ಚು ಗಮನ ಹರಿಸಿದ್ದಾರೆ. ಹೊಸ ಅಂಗನವಾಡಿಗಳ ಪ್ರಾರಂಭ, ಅಂಗನವಾಡಿಗಳಲ್ಲಿ ನೀಡುವ ಪೌಷ್ಟಿಕ ಆಹಾರದ ಬಗ್ಗೆಯೂ ಪ್ರಶ್ನೆಗಳಿವೆ. ಆದರೆ, ಅಂಗನವಾಡಿ ವಯಸ್ಸಿನ ಎಲ್ಲಾ ಮಕ್ಕಳು ಅಂಗನವಾಡಿಗಳಲ್ಲಿ ಅಥವಾ ಅಂಗನವಾಡಿಯಂತಹ ಸೇವೆ ನೀಡುತ್ತಿರುವಂತಹ ಇತರ ಕೇಂದ್ರಗಳಿಗೆ ದಾಖಲಾಗಿರುವ ಬಗ್ಗೆ ಮತ್ತು ಅಲ್ಲಿಂದ ಶಾಲೆಗಳಿಗೆ ದಾಖಲಾದ ಬಗ್ಗೆ ಯಾವ ಪ್ರಶ್ನೆಗಳೂ ಇಲ್ಲ. ಅಂಗನವಾಡಿ ಕಾರ್ಯಕರ್ತೆಯರ ತರಬೇತಿ ಮಟ್ಟ, ಅಂಗನವಾಡಿ ಸಲಹಾ ಸಮಿತಿಯ ಪಾತ್ರ ಹಾಗೂ ಸಹಕಾರ, ಇತ್ಯಾದಿಗಳ ಬಗ್ಗೆ ಪ್ರಶ್ನೆಗಳೇ ಕೇಳಿ ಬಂದಿಲ್ಲ.

**2011ರ ಆಯವ್ಯಯ ಅಧಿವೇಶನದಲ್ಲಿ ವಿಧಾನಸಭೆಯಲ್ಲಿ ಕೇಳಲ್ಪಟ್ಟ ಪಕ್ಷಾವಾರು ಒಟ್ಟು ಪ್ರಶ್ನೆಗಳು**

| ಪಕ್ಷ | ಒಟ್ಟು ಪ್ರಶ್ನೆಗಳು |
|---|---|
| ಬಿ.ಜೆ.ಪಿ | 5 |
| ಜೆ.ಡಿ.ಎಸ್ | 6 |
| ಕಾಂಗ್ರೆಸ್ | 7 |
| **ಒಟ್ಟು** | **18** |

**2011ರ ಆಯವ್ಯಯ ಅಧಿವೇಶನದಲ್ಲಿ ವಿಧಾನ ಪರಿಷತ್ತಿನಲ್ಲಿ ಕೇಳಲ್ಪಟ್ಟ ಪಕ್ಷಾವಾರು ಒಟ್ಟು ಪ್ರಶ್ನೆಗಳು**

| ಪಕ್ಷ | ಒಟ್ಟು ಪ್ರಶ್ನೆಗಳು |
|---|---|
| ಪಕ್ಷೇತರ | 1 |
| ಬಿ.ಜೆ.ಪಿ | 3 |
| ಜೆ.ಡಿ.ಎಸ್ | 5 |
| ಕಾಂಗ್ರೆಸ್ | 4 |
| **ಒಟ್ಟು** | **12** |

ದಿನಾಂಕ 03–03–2011ರ ಶ್ರೀ. ಈಶ್ವರ ಭೀಮಣ್ಣ ಖಂಡ್ರೆ (ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 268) ರವರ ಭಾಲ್ಕಿ ಮತ ಕ್ಷೇತ್ರದಲ್ಲಿರುವ ಅಂಗನವಾಡಿಗಳ ಸಂಖ್ಯೆ ಕುರಿತಾದ ಪ್ರಶ್ನೆಗೆ ಸರ್ಕಾರ ಭಾಲ್ಕಿ ಕ್ಷೇತ್ರದಲ್ಲಿರುವ ಪ್ರಾಥಮಿಕ ಶಾಲಾ ಪೂರ್ವ ವಯಸ್ಸಿನ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಇನ್ನೂ 21 ಅಂಗನವಾಡಿ ಕೇಂದ್ರಗಳನ್ನು ಸ್ಥಾಪಿಸುವ ಅವಶ್ಯಕತೆ ಇದೆ ಎಂದು ಒಪ್ಪಿಕೊಳ್ಳುತ್ತದೆ. ಆದರೆ ಈ 21 ಅಂಗನವಾಡಿ ಕೇಂದ್ರಗಳನ್ನು ಹೊಸತಾಗಿ ಸ್ಥಾಪಿಸುವ ಸಾಧ್ಯತೆಗಳಿಗೆ 'ಯಾವುದೂ ಇಲ್ಲ' ಎಂದು ನೇರವಾಗಿ ನಿರಾಕರಿಸುವುದರ ಮೂಲಕ ಆ ಕ್ಷೇತ್ರದ ಅನೇಕ ಬಡಮಕ್ಕಳನ್ನು ಪ್ರಾಥಮಿಕ ಪೂರ್ವ ಶಿಕ್ಷಣ, ಪೌಷ್ಟಿಕ ಆಹಾರ ಇವೇ ಮೊದಲಾದ ಹಕ್ಕಿನಿಂದ ವಂಚಿಸಲಾಗುತ್ತಿದೆ. ಈ ಉತ್ತರ ಪಡೆದು ಶ್ರೀ ಈಶ್ವರ ಭೀಮಣ್ಣ ಖಂಡ್ರೆಯವರು ಮುಂದೇನು ಮಾಡಿದರು ಎಂಬುದು ತಿಳಿಯುವುದಿಲ್ಲ. ಪ್ರಾಯಶಃ ಇಲ್ಲಿ ಆಗಬೇಕಿರುವುದು, ಆ ಕ್ಷೇತ್ರದ ಜನರಿಗೆ ಈ ಮಾಹಿತಿ ತಲುಪಬೇಕು. ಸಂಬಂಧಿತ ಅಧಿಕಾರಿಗಳು, ಈ ಮಾಹಿತಿಯನ್ನು ಆಧರಿಸಿ, ಅಲ್ಲಿ ಅಂಗನವಾಡಿ ಕೇಂದ್ರ ಬೇಕೆ ಬೇಡವೆ, ಏಕೆ ಬೇಕು, ಏಕೆ ಬೇಡ ಎಂಬ ಕುರಿತು ಸಾರ್ವಜನಿಕವಾಗಿ ಚರ್ಚಿಸುವಂತಾಗಬೇಕು. ಆಗ ಈ ಪ್ರಶ್ನೆ ಕೇಳಿದ್ದಕ್ಕೂ ಒಂದು ಅರ್ಥವಿರುತ್ತದೆ, ಪ್ರಕ್ರಿಯೆಯೊಂದಕ್ಕೆ ಚಾಲನೆ ಬರುತ್ತದೆ.

**ದಿನಾಂಕ 03–03–2011 – ಚುಕ್ಕೆ ಇಲ್ಲ 268: ಅಂಗನವಾಡಿ ಕೇಂದ್ರ– ಶ್ರೀ ಈಶ್ವರ ಭೀಮಣ್ಣ ಖಂಡ್ರೆ (ಕಾಂಗ್ರೆಸ್ – ಭಾಲ್ಕಿ)**

**ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ**

ಅ) ಭಾಲ್ಕಿ ಮತಕ್ಷೇತ್ರದಲ್ಲಿರುವ ಒಟ್ಟು ಅಂಗನವಾಡಿ ಕೇಂದ್ರಗಳ ಸಂಖ್ಯೆ ಎಷ್ಟು.

ಆ) ಈ ಕೇಂದ್ರಗಳಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು.

ಇ) ಮತಕ್ಷೇತ್ರದಲ್ಲಿ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಇನ್ನೂ ಎಷ್ಟು ಅಂಗನವಾಡಿ ಕೇಂದ್ರಗಳ ಅಗತ್ಯವಿದೆ.

ಈ) ಪ್ರಸಕ್ತ ಸಾಲಿನಲ್ಲಿ ಬೀದರ್ ಜಿಲ್ಲೆಯಲ್ಲಿ ಯಾವ ಯಾವ ಗ್ರಾಮಗಳಲ್ಲಿ ಹೊಸದಾಗಿ ಅಂಗನವಾಡಿ ಕೇಂದ್ರಗಳನ್ನು ತೆರೆಯಲಾಗುವುದು.

ಉ) ಈ ಪೈಕಿ ಎಷ್ಟು ಹೊಸ ಕೇಂದ್ರಗಳನ್ನು ಭಾಲ್ಕಿ ಮತಕ್ಷೇತ್ರದಲ್ಲಿ ತೆರೆಯಲಾಗುವುದು.

**ಉತ್ತರಿಸಿದವರು ಶ್ರೀ. ಸಿ.ಸಿ.ಪಾಟೀಲ್, ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು, ಕರ್ನಾಟಕ ಸರ್ಕಾರ**

ಅ) 338 ಅಂಗನವಾಡಿ ಕೇಂದ್ರಗಳಿವೆ

ಆ) ಈ ಕೇಂದ್ರಗಳಲ್ಲಿ ಶಾಲಾ ಪೂರ್ವ ಶಿಕ್ಷಣಕ್ಕೆ ಹಾಜರಾಗುವ 3 ವರ್ಷದಿಂದ 6 ವರ್ಷದ ಮಕ್ಕಳ ಸಂಖ್ಯೆ 13828.

ಇ) ಜನಸಂಖ್ಯೆಗೆ ಅನುಗುಣವಾಗಿ ಇನ್ನು 21 ಅಂಗನವಾಡಿ ಕೇಂದ್ರಗಳನ್ನು ಸ್ಥಾಪಿಸಬೇಕಾಗುತ್ತದೆ.

ಈ) ಯಾವುದು ಇಲ್ಲ.

ಉ) 4ರ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

# ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ

ವಿಶ್ಲೇಷಣಾ ಅವಧಿಯ ವಿಧಾನಮಂಡಲ ಅಧಿವೇಶನಗಳಲ್ಲಿ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆಗೆ ಕೇಳಿಬಂದ ಒಟ್ಟು ಪ್ರಶ್ನೆಗಳ ಸಂಖ್ಯೆ 19 (ವಿಧಾನಸಭೆ = 11 ಮತ್ತು ವಿಧಾನ ಪರಿಷತ್ತು = 8). ಇದರಲ್ಲಿ ಬಹುತೇಕ ಪ್ರಶ್ನೆಗಳು ಗಾಮೀಣ ಪ್ರದೇಶದ ಕುಡಿಯುವ ನೀರಿನ ಕುರಿತಾಗಿವೆ. ಕೆಲವು ಪ್ರಶ್ನೆಗಳು ಮಾತ್ರ ಶೌಚಾಲಯ, ಗ್ರಾಮ ನೈರ್ಮಲ್ಯ, ಡ್ಯಾಂಗಳ ನಿರ್ಮಾಣ ಮತ್ತು ಮಳೆ ನೀರು ಕೊಯ್ಲು ಯೋಜನೆಗಳ ಬಗ್ಗೆ ಸಂಬಂಧಿಸಿವೆ.

**2011ರ ಆಯವ್ಯಯ ಅಧಿವೇಶನದಲ್ಲಿ ವಿಧಾನಸಭೆಯಲ್ಲಿ ಕೇಳಲ್ಪಟ್ಟ ಪಕ್ಷಾವಾರು ಒಟ್ಟು ಪ್ರಶ್ನೆಗಳು**

| ಪಕ್ಷ | ಒಟ್ಟು ಪ್ರಶ್ನೆಗಳು |
|---|---|
| ಬಿ.ಜೆ.ಪಿ | 3 |
| ಜೆ.ಡಿ.ಎಸ್ | 3 |
| ಕಾಂಗ್ರೆಸ್ | 5 |
| **ಒಟ್ಟು** | **11** |

**2011ರ ಆಯವ್ಯಯ ಅಧಿವೇಶನದಲ್ಲಿ ವಿಧಾನ ಪರಿಷತ್ತಿನಲ್ಲಿ ಕೇಳಲ್ಪಟ್ಟ ಪಕ್ಷಾವಾರು ಒಟ್ಟು ಪ್ರಶ್ನೆಗಳು**

| ಪಕ್ಷ | ಒಟ್ಟು ಪ್ರಶ್ನೆಗಳು |
|---|---|
| ಪಕ್ಷೇತರ | 0 |
| ಬಿ.ಜೆ.ಪಿ | 4 |
| ಜೆ.ಡಿ.ಎಸ್ | 2 |
| ಕಾಂಗ್ರೆಸ್ | 2 |
| **ಒಟ್ಟು** | **8** |

ಕುಡಿಯುವ ನೀರಿನ ಪ್ರಶ್ನೆಗಳು ಕೇವಲ ಶಾಸಕರುಗಳು ಪ್ರತಿನಿಧಿಸುವ ಕ್ಷೇತ್ರಕ್ಕೆ ಅಥವಾ ಜಿಲ್ಲೆಗೆ ಮಾತ್ರವೇ ಸಂಬಂಧಪಟ್ಟದ್ದಾಗಿದೆ. ರಾಜ್ಯದ ಉಳಿದ ಭಾಗಗಳನ್ನು ಕಡೆಗಣಿಸಿರುವುದನ್ನು ಕಾಣಬಹುದಾಗಿದೆ. ಇನ್ನು ಕೆಲವು ಶಾಸಕರು ಸರ್ಕಾರಿ ಯೋಜನೆಗಳಾದ ಸುವರ್ಣ ಜಲ, ಮಳೆ ನೀರು ಕೊಯ್ಲು ಯೋಜನೆ ಮತ್ತು ರಾಜೀವ್ ಗಾಂಧಿ ಕುಡಿಯುನ ನೀರಿನ ಯೋಜನೆಗಳ ಬಗ್ಗೆ ಪ್ರಸ್ತಾವನೆ ಮಾಡಿದ್ದಾರೆ ಹಾಗೂ ಕೆಲವು ಪ್ರಶ್ನೆಗಳಿಗೆ ಸ್ಥಳೀಯ ಸರ್ಕಾರಗಳಲ್ಲಿಯೇ ಉತ್ತರ ಪಡೆಯಬಹುದಾಗಿದ್ದರೂ ಅನವಶ್ಯಕವಾಗಿ ಅಧಿವೇಶನದಲ್ಲಿ ಇಂತಹ ಪ್ರಶ್ನೆಗಳನ್ನು ತಂದು ಸದನದ ಸಮಯದ ಮೇಲೆ ಒತ್ತಡ ಹಾಕಿದಂತಿದೆ. ಈ ಕುರಿತು ಸಭಾಧ್ಯಕ್ಷರು ಮರು ಚಿಂತನೆ ಮಾಡಬೇಕಿದೆ. ಶಾಸಕರು ತಮ್ಮ ಗ್ರಾಮೀಣ ಪ್ರದೇಶಗಳಲ್ಲಿ ಮುಂದಿನ ದಿನಗಳಲ್ಲಿ ಉಂಟಾಗಬಹುದಾದ ಸಮಸ್ಯೆಗಳನ್ನು ಕಾಳಜಿಯಿಂದ ಆಲೋಚಿಸಿದ್ದರೆ, ಅಂದರೆ ಹಿಂದಿನ ವರ್ಷಗಳಲ್ಲಿನ ಅನುಭವಗಳನ್ನು ಆಧರಿಸಿ ಪ್ರಶ್ನೆಗಳನ್ನು ಕೇಳಿ ಬರಗಾಲವನ್ನು ಎದುರಿಸಲು ಒಟ್ಟು ಪ್ರಯತ್ನವನ್ನು ಮಾಡಬಹುದಿತ್ತು. ಗ್ರಾಮೀಣ ಮಟ್ಟದಲ್ಲಿ ಅಂತರ್ಜಲ ಹೆಚ್ಚಿಸುವ ಕುರಿತು ಗಮನ ಹರಿಸಬೇಕಾಗಿದ್ದ ಪ್ರಶ್ನೆಗಳು ಅಷ್ಟು ಮೊನಚಾಗಿಯೂ, ಸ್ಪಷ್ಟವಾಗಿಯೂ ಬಾರದಿರುವುದು ಕಂಡುಬರುತ್ತದೆ.

**ದಿನಾಂಕ 04–3–2011: ಚುಕ್ಕೆ ಇಲ್ಲ – 79: ರಸ್ತೆಗಳ ಅಭಿವೃದ್ಧಿ – ಶ್ರೀ ಬಂಡೆಪ್ಪ ಕಾಶೆಂಪೂರ್ (ಕಾಂಗ್ರೆಸ್ – ಬೀದರ್ ದಕ್ಷಿಣ)**

**ಮಾನ್ಯ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೇ;**

ಅ) ಬೀದರ್ ದಕ್ಷಿಣ ಮತಕ್ಷೇತ್ರದಲ್ಲಿ ಜಿಲ್ಲಾ ಪಂಚಾಯತ್ ವತಿಯಿಂದ ಅಭಿವೃದ್ಧಿ ಪಡಿಸಲಾಗಿರುವ ರಸ್ತೆಗಳು ಎಷ್ಟು (ಮಾಹಿತಿ ನೀಡುವುದು);

ಆ) ಈ ರಸ್ತೆಗಳ ಅಭಿವೃದ್ಧಿಗಾಗಿ ಸರ್ಕಾರ ನಿಗದಿಪಡಿಸಿದ್ದ ಅನುದಾನದ ಮೊತ್ತವೆಷ್ಟು; (ರಸ್ತೆವಾರು ಮಾಹಿತಿ ನೀಡುವುದು);

ಇ) ಹಾಗಿದ್ದಲ್ಲಿ, ಬಿಡುಗಡೆ ಮಾಡಲಾಗಿರುವ ಅನುದಾನ ಹಾಗೂ ಇದುವರೆವಿಗೂ ವೆಚ್ಚ ಮಾಡಿರುವ ಮೊತ್ತವೆಷ್ಟು; (ರಸ್ತೆವಾರು ವಿವರಗಳನ್ನು ನೀಡುವುದು)

**ಉತ್ತರಿಸಿದವರು ಶ್ರೀ ಜಗದೀಶ್ ಶೆಟ್ಟರ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು, ಕರ್ನಾಟಕ ಸರ್ಕಾರ**

ಅ) ಬೀದರ್ ದಕ್ಷಿಣ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಪ್ರಸ್ತುತ 2010–11ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 3054ರಡಿ 12 ರಸ್ತೆಗಳು ಹಾಗೂ ಲೆಕ್ಕ ಶೀರ್ಷಿಕೆ 5054ರಡಿ 1ನೇ ರಸ್ತೆ ಸೇರಿ ಒಟ್ಟಾರೆ 13 ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ರಸ್ತೆಗಳ ವಿವರ ಅನುಬಂಧದಲ್ಲಿ ನೀಡಲಾಗಿದೆ.

ಆ) 2010–11ನೇ ಸಾಲಿನಲ್ಲಿ ಈ ರಸ್ತೆಗಳ ಅಭಿವೃದ್ಧಿಗಾಗಿ ನಿಗಧಿಪಡಿಸಿದ ಮೊತ್ತ ಲೆಕ್ಕ ಶೀರ್ಷಿಕೆ 3054ರಡಿ ರೂ.35.00 ಲಕ್ಷ ಹಾಗೂ ಲೆಕ್ಕ ಶೀರ್ಷಿಕೆ 5054ರಡಿ ರೂ. 19.84 ಲಕ್ಷಗಳು. ರಸ್ತೆವಾರು ಮಾಹಿತಿ ಅನುಬಂಧದಲ್ಲಿ ನೀಡಲಾಗಿದೆ.

ಇ) ಪ್ರಸ್ತುತ 2010–11ನೇ ಸಾಲಿನಲ್ಲಿ ಈ ವರೆವಿಗೂ ಬಿಡುಗಡೆಯಾದ ಮೊತ್ತ ಲೆಕ್ಕ ಶೀರ್ಷಿಕೆ 3054ರಡಿ ರೂ.25.55 ಲಕ್ಷ ಹಾಗೂ ಲೆಕ್ಕ ಶೀರ್ಷಿಕೆ 5054ರಡಿ ರೂ. 9.92 ಲಕ್ಷಗಳಿದ್ದು, ಕಾಮಗಾರಿಗಳು ಪೂರ್ಣಗೊಂಡಿಲ್ಲವಾದ್ದರಿಂದ ಯಾವುದೇ ವೆಚ್ಚ ಭರಿಸಲಾಗಿಲ್ಲ. ವಿವರ ಅನುಬಂಧದಲ್ಲಿ ನೀಡಲಾಗಿದೆ.

# ಸಾರಿಗೆ ಇಲಾಖೆ

ವಿಶ್ಲೇಷಣಾ ಅವಧಿಯ ವಿಧಾನಮಂಡಲ ಅಧಿವೇಶನಗಳಲ್ಲಿ ಸಾರಿಗೆ ಇಲಾಖೆಗೆ ಕೇಳಿಬಂದ ಒಟ್ಟು ಪ್ರಶ್ನೆಗಳ ಸಂಖ್ಯೆ 40 (ವಿಧಾನಸಭೆ = 24 ಮತ್ತು ವಿಧಾನ ಪರಿಷತ್ತು = 16). ಇದರಲ್ಲಿ ಬಹುತೇಕ ಪ್ರಶ್ನೆಗಳು ಹೊಸ ಬಸ್ ನಿಲ್ದಾಣ, ಡಿಪೋಗಳನ್ನು ಸ್ಥಾಪಿಸುವ ಮತ್ತು ಹೈಟೆಕ್ ಬಸ್‌ಗಳ ಖರೀದಿಯ ಸಂಬಂಧಿತ ಪ್ರಶ್ನೆಗಳಾಗಿವೆ. ಜೊತೆಗೆ ಬಸ್ ನಿಲ್ದಾಣದಲ್ಲಿ ಶೌಚಾಲಯ, ರಾಜಹಂಸ ಬಸ್‌ಗಳಲ್ಲಿ ತಿಗಣೆ–ಜಿರಲೆಗಳ ಸಮಸ್ಯೆ, ಟಿಕೇಟ್ ರಹಿತ ಪ್ರಯಾಣ, ಹಿರಿಯ ನಾಗರೀಕರಿಗೆ ಪ್ರಯಾಣ ಸೌಲಭ್ಯ, ಸ್ವಾತಂತ್ರ್ಯ ಹೋರಾಟಗಾರರಿಗೆ ಐರಾವತ ಬಸ್ ಪ್ರಯಾಣ ಮತ್ತು ಖಾಸಗಿ ವಾಹನಗಳಿಗೆ ಅನುಮತಿ ನೀಡಿರುವ ಬಗ್ಗೆ ಪ್ರಶ್ನೆಗಳನ್ನು ಕೇಳಲಾಗಿದೆ.

**2011ರ ಆಯವ್ಯಯ ಅಧಿವೇಶನದಲ್ಲಿ ವಿಧಾನಸಭೆಯಲ್ಲಿ ಕೇಳಲ್ಪಟ್ಟ ಪಕ್ಷಾವಾರು ಒಟ್ಟು ಪ್ರಶ್ನೆಗಳು**

| ಪಕ್ಷ | ಒಟ್ಟು ಪ್ರಶ್ನೆಗಳು |
|---|---|
| ಬಿ.ಜೆ.ಪಿ | 2 |
| ಜೆ.ಡಿ.ಎಸ್ | 8 |
| ಕಾಂಗ್ರೆಸ್ | 14 |
| **ಒಟ್ಟು** | **24** |

**2011ರ ಆಯವ್ಯಯ ಅಧಿವೇಶನದಲ್ಲಿ ವಿಧಾನ ಪರಿಷತ್ತಿನಲ್ಲಿ ಕೇಳಲ್ಪಟ್ಟ ಪಕ್ಷಾವಾರು ಒಟ್ಟು ಪ್ರಶ್ನೆಗಳು**

| ಪಕ್ಷ | ಒಟ್ಟು ಪ್ರಶ್ನೆಗಳು |
|---|---|
| ಪಕ್ಷೇತರ | 1 |
| ಬಿ.ಜೆ.ಪಿ | 6 |
| ಜೆ.ಡಿ.ಎಸ್ | 6 |
| ಕಾಂಗ್ರೆಸ್ | 3 |
| **ಒಟ್ಟು** | **16** |

ಕೆಲವೊಂದು ಪ್ರಶ್ನೆಗಳನ್ನು ಹೊರತುಪಡಿಸಿ ಉಳಿದ ಪ್ರಶ್ನೆಗಳೆಲ್ಲವು ಪ್ರಶ್ನೆ ಕೇಳಿರುವ ಶಾಸಕರುಗಳ ಕ್ಷೇತ್ರಕ್ಕೆ ಅನ್ವಯಿಸುವಂತಿದ್ದು, ಸಾರಿಗೆ ಇಲಾಖೆ ನೀಡಿರುವ ಉತ್ತರಗಳೂ ಸಹ ಸಂಪೂರ್ಣವಾಗಿರುವುದಿಲ್ಲ ಅಥವಾ ಈ ಪ್ರಶ್ನೆ ಅನ್ವಯಿಸುವುದಿಲ್ಲ / ಉದ್ಭವಿಸುವುದಿಲ್ಲ ಎಂಬ ಹಾರಿಕೆಯ ಉತ್ತರಗಳನ್ನು ನೀಡಿರುತ್ತಾರೆ.

ಇವುಗಳ ಜೊತೆ ಹೊಸ ಬಸ್‌ಗಳ ಸಂಖ್ಯೆಗಳ ಪ್ರಶ್ನೆಯನ್ನು ಕೇಳುವ ಅವಶ್ಯಕತೆ ಇರಲಿಲ್ಲವಾದರೂ ಇದಕ್ಕೆ ನೀಡುವ ಉತ್ತರ/ಸಂಖ್ಯೆಯು ಸಹ ತಪ್ಪಾಗಿರುವುದನ್ನು ಕಾಣಬಹುದು. ಮಹಿಳಾ ಕಂಡಕ್ಟರ್‌ಗಳಿಗೆ ಪ್ರತ್ಯೇಕ ಆಸನ ವ್ಯವಸ್ಥೆ, ಬಿ.ಎಮ್.ಟಿ.ಸಿ. ಬಸ್ ಅಪಘಾತ ಮತ್ತು ಶಾಸಕರು ಸಹಾಯಕರಿಗೆ ಉಚಿತ ಬಸ್‌ಪಾಸ್ ವಿಚಾರಗಳನ್ನು ಕುರಿತು ಪ್ರಶ್ನೆಗಳನ್ನು ಮಾಡಿ ಸದನದ ಸಮಯವನ್ನು ಹಗುರಗೊಳಿಸಿದ್ದಾರೇನೋ ಎಂದೆನಿಸುತ್ತದೆ. ಸಾರ್ವಜನಿಕರ ಬದುಕಿಗೆ ಇನ್ನೂ ಹೆಚ್ಚಿನ ಮಟ್ಟದಲ್ಲಿ ತಟ್ಟಬೇಕಾದ ಮತ್ತು ಉಪಯುಕ್ತವಾಗುವಂತಹ ಪ್ರಶ್ನೆಗಳನ್ನು ಗುರುತಿಸಿ, ಅವುಗಳನ್ನು ಬರೆಯುವ ವಿಧಾನದ ಮೂಲಕ ಸರ್ಕಾರದ ಗಮನಕ್ಕೆ ತರುವಂತೆ ಹಾಗೂ ಸರ್ಕಾರದ ಉತ್ತರದಾಯಿತ್ವ ಜವಾಬ್ದಾರಿಯ ಮೇಲೆ ಒತ್ತಡ ಹಾಕುವಂತೆ ಮಾಡಲು ಶಾಸಕರಿಗೂ ತರಬೇತಿಯ ಆವಶ್ಯಕತೆ ಇದೆಯೇನೋ ಎಂದೆನಿಸುತ್ತದೆ.

**ದಿನಾಂಕ 7/3/2011 – ಚುಕ್ಕೆ 771 : ಉಚಿತ ಬಸ್ ಪ್ರಯಾಣ – ಶ್ರೀ ಆರ್. ಕೆ. ಸಿದ್ದರಾಮಣ್ಣ. (ಬಿ.ಜೆ.ಪಿ. – ಸ್ಥಳೀಯ ಸಂಸ್ಥೆ)**

**ಮಾನ್ಯ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ.**

ಅ) ಹಿರಿಯ ಸ್ವಾತಂತ್ರ ಹೋರಾಟಗಾರರಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಬಸ್ಸುಗಳಲ್ಲಿ ಪ್ರಯಾಣಿಸಲು ಉಚಿತ ಬಸ್ ಪಾಸ್‌ಗಳನ್ನು ನೀಡಲಾಗಿದೆಯೇ;

ಆ) ಉಚಿತ ಪಾಸ್ ವಿತರಿಸಲಾಗಿದ್ದರೆ, ನಿಗಮದ ಯಾವ ಯಾವ ಬಸ್‌ಗಳಲ್ಲಿ ಪ್ರಯಾಣಿಸಬಹುದಾಗಿದೆ.

ಇ) ನಿಗಮದ ಐರಾವತ ಬಸ್‌ಗಳಲ್ಲಿ ಉಚಿತ ಪಾಸ್ ಆಧಾರದಲ್ಲಿ ಹಿರಿಯ ಸ್ವಾತಂತ್ರ್ಯ ಹೋರಾಟಗಾರರು ಪ್ರಯಾಣಿಸಲು ಅವಕಾಶವಿದೆಯೇ;

ಈ) ಇಲ್ಲದಿದ್ದಲ್ಲಿ, ಐರಾವತ ಬಸ್‌ಗಳಲ್ಲಿ ಉಚಿತ ಪಾಸ್ ಗಳ ಆಧಾರದ ಮೇಲೆ ಪ್ರಯಾಣಿಸಲು ಅವಕಾಶ ಕಲ್ಪಿಸಿ ಕೊಡುವ ವಿಚಾರ ಸರ್ಕಾರಕ್ಕೆ ಇದೆಯೇ?

**ಉತ್ತರಿಸಿದವರು ಶ್ರೀ ಆರ್.ಅಶೋಕ್, ಗೃಹ ಮತ್ತು ಸಾರಿಗೆ ಸಚಿವರು, ಕರ್ನಾಟಕ ಸರ್ಕಾರ**

ಅ) ನೀಡಲಾಗಿದೆ

ಆ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗಳ ನಗರ ಸಾರಿಗೆ, ನಗರ ಹೊರವಲಯ ಸಾರಿಗೆ, ಸಾಮಾನ್ಯ ವೇಗದೂತ, ಸೆಮಿಡಿಲಕ್ಸ್ ಮತ್ತು ರಾಜಹಂಸ ಮಾದರಿಯ ಬಸ್ಸು ಗಳಲ್ಲಿ ಪ್ರಯಾಣಿಸಲು ಅವಕಾಶ ನೀಡಲಾಗಿದೆ.

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ ಹವಾ ನಿಯಂತ್ರಿತ ಬಸ್ ಹೊರತು ಪಡಿಸಿ ಉಳಿದ ಎಲ್ಲಾ ವಾಹನಗಳಲ್ಲೂ ಪ್ರಯಾಣಿಸಬಹುದು.

ಇ) ಇಲ್ಲ

ಈ) ಇಲ್ಲ

# ಹಣಕಾಸು ಇಲಾಖೆ

ವಿಶ್ಲೇಷಣಾ ಅವಧಿಯ ವಿಧಾನಮಂಡಲ ಅಧಿವೇಶನಗಳಲ್ಲಿ ಕಾರ್ಮಿಕ ಇಲಾಖೆಗೆ ಕೇಳಿಬಂದ ಒಟ್ಟು ಪ್ರಶ್ನೆಗಳ ಸಂಖ್ಯೆ 22 (ವಿಧಾನಸಭೆ = 13 ಮತ್ತು ವಿಧಾನ ಪರಿಷತ್ತು = 9). ಇದರಲ್ಲಿನ ಹಲವು ಪ್ರಶ್ನೆಗಳು ಜಾಹೀರಾತಿಗೆ ಮತ್ತು ಪ್ರಚಾರಕ್ಕೆ ಖರ್ಚಾದ ಹಣ, ಶಾಸಕರ ಅನುದಾನ ಮತ್ತು ಇಲಾಖಾವಾರು ಖರ್ಚಾಗಿರುವ ಹಾಗೂ ಬಿಡುಗಡೆಯಾಗಿರುವ ಹಣದ ವಿವರಗಳ ಪ್ರಶ್ನೆಗಳಾಗಿವೆ. ಕೆಲವೇ ಕೆಲವು ಪ್ರಶ್ನೆಗಳು ಮಾತ್ರ ಸಾಲದ ವಿವರ, ವಾಹನಗಳಿಂದ, ಮರಳು ಹರಾಜಿನಿಂದ ಸರ್ಕಾರಕ್ಕೆ ಸಂದಾಯವಾಗಿರುವ ಹಣ, ಕಳೆದ 3 ವರ್ಷಗಳಿಂದ ಆಯವ್ಯಯದಲ್ಲಿ ಬಾಕಿ ಇರುವ ಹಣ, 6ನೇ ವೇತನ ಹೆಚ್ಚಿಸುವ ಮತ್ತು ಬಿ.ಬಿ.ಎಂ.ಪಿ ಲೆಕ್ಕ ಪತ್ರದಲ್ಲಿನ ವ್ಯತ್ಯಾಸಗಳ ಪ್ರಶ್ನೆಗಳನ್ನು ಕಾಣಬಹುದಾಗಿದೆ.

ಪ್ರಶ್ನೆಗಳು ಹಾಗೂ ಉತ್ತರಗಳನ್ನು ಗಮನಿಸಿದಾಗ ಹಣಕಾಸಿನಂತಹ ಪ್ರಮುಖ ಇಲಾಖೆಗೆ ಒಟ್ಟೂ ಪ್ರಶ್ನೆಗಳಲ್ಲಿ ಬಂದಿರುವುದು ಇಷ್ಟು ಕಡಿಮೆ ಪ್ರಶ್ನೆಗಳೇ ಎಂದು ಆಶ್ಚರ್ಯಪಡುವಂತಾಗುತ್ತದೆ. ಈ ಇಲಾಖೆ ಇತರ ಎಲ್ಲ ಇಲಾಖೆಗಳಿಗೆ ಸಂಬಂಧಿಸಿರುವುದು ಹಾಗೂ ಒಂದು ರೀತಿಯಲ್ಲಿ ಸರ್ಕಾರದ ಆಗುಹೋಗುಗಳನ್ನು ನಿರ್ಧರಿಸುವುದು. ರಾಜ್ಯದ ಆಯವ್ಯಯದಲ್ಲಿ ನಿಗಧಿಮಾಡಿರುವ ಹಣದ ಮೊತ್ತ ಮತ್ತು ಸರ್ಕಾರಕ್ಕೆ ಬರುವ ಕರ ಇತ್ಯಾದಿ ಆದಾಯ ಅದರ ಖರ್ಚು ಇವೇ ಮೊದಲಾದವುಗಳನ್ನು ಕುರಿತು ಇನ್ನೂ ಹೆಚ್ಚಿನ ಅಭಿವೃದ್ಧಿ ಕೇಂದ್ರಿತ ಪ್ರಶ್ನೆಗಳು ಬರಬೇಕಿದೆ. ಈ ವಿಶ್ಲೇಷಣೆ ಮಾಡುವ ಸಂದರ್ಭದಲ್ಲಿ ನಮಗೆ ಕಂಡುಬಂದಿರುವುದು, ರಾಜ್ಯದ ಆಯವ್ಯಯ ಕುರಿತು ರಾಜ್ಯದಲ್ಲಿ ಗಂಭೀರವಾದ ಸಾರ್ವಜನಿಕ ಚರ್ಚೆಗಳು ಆಗುತ್ತಿಲ್ಲದಿರುವುದು ಹಾಗೂ ಆಯವ್ಯದ ಪ್ರಾಮುಖ್ಯತೆ ಕುರಿತು ತಾತ್ತ್ವಿಕ, ಶೈಕ್ಷಣಿಕ, ಸಂಶೋಧನಾತ್ಮಕ ಮತ್ತು ಜನರ ಬದುಕಿನ ಮೇಲೆ ಅದರಿಂದ ಆಗುವ ಪರಿಣಾಮಗಳನ್ನು ಕುರಿತು ಪ್ರಶ್ನೆಗಳು ಬಾರದಿರುವುದು. ಇಂತಹ ಚರ್ಚೆಗಳು ಸಾರ್ವಜನಿಕವಾಗಿ ಆದದ್ದೇ ಆದಲ್ಲಿ ಅದರಲ್ಲಿ ಶಾಸಕರು ಪಾಲ್ಗೊಂಡು, ಈ ಕ್ಷೇತ್ರದ ಪರಿಣಿತರೊಂದಿಗೆ ಚರ್ಚಿಸಿ ಆಯವ್ಯಯವನ್ನು ಕುರಿತು ನಡೆಯುವ ಚರ್ಚೆಗಳು ಹಾಗೂ ಹಣಕಾಸು ಇಲಾಖೆಯೊಡನೆ ಪ್ರಶ್ನೋತ್ತರದಲ್ಲಿ ಪರಿಣಾಮಕಾರಿಯಾಗಿ ಭಾಗವಹಿಸಬಹುದು.

**2011ರ ಆಯವ್ಯಯ ಅಧಿವೇಶನದಲ್ಲಿ ವಿಧಾನಸಭೆಯಲ್ಲಿ ಕೇಳಲ್ಪಟ್ಟ ಪಕ್ಷಾವಾರು ಒಟ್ಟು ಪ್ರಶ್ನೆಗಳು**

| ಪಕ್ಷ | ಒಟ್ಟು ಪ್ರಶ್ನೆಗಳು |
|---|---|
| ಬಿ.ಜೆ.ಪಿ | 0 |
| ಜೆ.ಡಿ.ಎಸ್ | 1 |
| ಕಾಂಗ್ರೆಸ್ | 12 |
| **ಒಟ್ಟು** | **13** |

**2011ರ ಆಯವ್ಯಯ ಅಧಿವೇಶನದಲ್ಲಿ ವಿಧಾನ ಪರಿಷತ್ತಿನಲ್ಲಿ ಕೇಳಲ್ಪಟ್ಟ ಪಕ್ಷಾವಾರು ಒಟ್ಟು ಪ್ರಶ್ನೆಗಳು**

| ಪಕ್ಷ | ಒಟ್ಟು ಪ್ರಶ್ನೆಗಳು |
|---|---|
| ಪಕ್ಷೇತರ | 0 |
| ಬಿ.ಜೆ.ಪಿ | 2 |
| ಜೆ.ಡಿ.ಎಸ್ | 3 |
| ಕಾಂಗ್ರೆಸ್ | 4 |
| **ಒಟ್ಟು** | **9** |

**ದಿನಾಂಕ 17–03–2011 – ಚುಕ್ಕೆ ಇಲ್ಲ 1048 : ಭಾರತೀಯ ಲೆಕ್ಕಪರಿಶೋಧನ ಸಂಸ್ಥೆ – ಇ. ಕೃಷ್ಣಪ್ಪ (ಬಿ.ಜೆ.ಪಿ–ಸ್ಥಳೀಯ ಸಂಸ್ಥೆ)**

**ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ.**

ಅ) ಭಾರತೀಯ ಲೆಕ್ಕ ಪರಿಶೋಧನಾ ಸಂಸ್ಥೆಯವರು 2008ರಿಂದ 2010ರ ವರೆಗಿನ ಅವಧಿಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಷಿಕ ಲೆಕ್ಕಪತ್ರಗಳ ತಪಾಸಣೆಯಲ್ಲಿ ಸುಮಾರು 159 ಕೋಟಿ ರೂಪಾಯಿ ವ್ಯತ್ಯಾಸವಾಗಿರುವುದನ್ನು ಪತ್ತೆ ಹಚ್ಚಿದ್ದಾರೆಯೇ; (ಆಡಿಟ್ ವರದಿಯ ಪ್ರತಿಯನ್ನು ಒದಗಿಸುವುದು) ಬಿ.ಬಿ.ಎಂ.ಪಿ ಯ ವಿವಿಧ ಬ್ಯಾಂಕ್ ಖಾತೆಗಳು ಅವುಗಳಲ್ಲಿರುವ ಮೊತ್ತದ ವಿವರಗಳನ್ನು ಒದಗಿಸುವುದು,

ಆ) ಆಡಿಟ್ ಅಧಿಕಾರಿಗಳಿಗೆ ಬಿ.ಬಿ.ಎಂ.ಪಿ. ಅಧಿಕಾರಿಗಳು ಸಹಕಾರ ನೀಡುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಆಡಿಟ್ ವರದಿಯ ಬಗ್ಗೆ ಕೈಗೊಂಡ ಕ್ರಮವೇನು;

ಇ) ಆಡಳಿತಾಧಿಕಾರಿಗಳ ಅವಧಿಯಲ್ಲಿ ಬಿ.ಬಿ.ಎಂ.ಪಿ. ಯಲ್ಲಿ ನಡೆದಿರುವ ಭ್ರಷ್ಟಾಚಾರದ ಬಗ್ಗೆ ತನಿಖೆ ನಡೆದಿದೆಯೇ, ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು?

**ಉತ್ತರಿಸಿದವರು ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ**

ಅ) ಭಾರತೀಯ ಲೆಕ್ಕ ಪರಿಶೋಧನಾ ಸಂಸ್ಥೆಯವರು 2008ರಿಂದ 2010ರ ವರೆಗಿನ ಅವಧಿಯಲ್ಲಿ ಬಿ.ಬಿ.ಎಂ.ಪಿಯ ವಾರ್ಷಿಕ ಲೆಕ್ಕಪತ್ರಗಳ ತಪಾಸಣೆಯಲ್ಲಿ ಸುಮಾರು ರೂ. 159.00ಕೋಟಿ ವ್ಯತ್ಯಾಸವಿದೆ ಎಂದು ಪ್ರಸ್ತಾಪಿಸಿರುತ್ತಾರೆ.

ಪ್ರಸ್ತಾಪಿಸಿರುವ ವ್ಯತ್ಯಾಸದ ಮೊತ್ತವು ಬ್ಯಾಂಕ್ ಖಾತೆ ಸಂಖ್ಯೆ: 8401201000022ಗೆ ಸಂಬಂಧಿಸಿದ್ದು, 2008–09ನೇ ಸಾಲಿನಲ್ಲಿ ಎಫ್.ಬಿ.ಎ.ಎಸ್. ಗೆ (ನಿಧಿ ಆಧಾರಿತ ಲೆಕ್ಕ ಪದ್ಧತಿ) ಲೆಕ್ಕ ಸಮನ್ವಯ/ಟ್ರಾನ್ಸ್‌ಫರ್ ಎಂಟ್ರಿ ಗಳನ್ನು ಮಾಡದ ಕಾರಣ ಬ್ಯಾಂಕ್‌ನ ಶಿಲ್ಕಿಗೂ ಮತ್ತು ಟ್ರಯಲ್ ಬ್ಯಾಲೆನ್ಸ್ ಶಿಲ್ಕಿಗೂ ವ್ಯತ್ಯಾಸ ಕಂಡು ಬಂದಿರುತ್ತದೆ. 2010–11ರ ಸಾಲಿನಲ್ಲಿ ಈ ವ್ಯತ್ಯಾಸ ಮೊತ್ತವನ್ನು ಲೆಕ್ಕ ಸಮನ್ವಯ ಮೂಲಕ ಸರಿಪಡಿಸಲು ಕ್ರಮ ಜರುಗಿಸಲಾಗುತ್ತಿದೆ.

ಕರಡು ಆಡಿಟ್ ವರದಿಯಲ್ಲಿನ ಕಂಡಿಕೆ 6.13ರ ಪ್ರತಿಯನ್ನು ಅನುಬಂಧ 1ರಲ್ಲಿ ಹಾಗೂ ಈ ಕಂಡಿಕೆಯಲ್ಲಿ ಕಾಣಿಸಿರುವ ಒಟ್ಟು 15 ವಿವಿಧ ಬ್ಯಾಂಕ್ ಖಾತೆಗಳು ಅವುಗಳಲ್ಲಿರುವ ಮೊತ್ತದ ವಿವರಗಳನ್ನು ಅನುಬಂಧ 2 ರಲ್ಲಿ ನೀಡಲಾಗಿದೆ.

ಆ) ಆಡಿಟ್ ಅಧಿಕಾರಿಗಳಿಗೆ ಬಿ.ಬಿ.ಎಂ.ಪಿ. ಅಧಿಕಾರಿಗಳು ಲೆಕ್ಕ ತಪಾಸಣೆ ಸಂದರ್ಭದಲ್ಲಿ ಕೋರಿರುವ ಕಡತಗಳನ್ನು ಒದಗಿಸಿ ಎಲ್ಲಾ ರೀತಿಯ ಸಹಕಾರವನ್ನು ನೀಡಿರುತ್ತಾರೆ. ದಿನಾಂಕ 6/8/2010ರಂದು ವಿಶೇಷ ಆಯುಕ್ತರು, ಮಹಾಲೇಖಪಾಲರ ಕಛೇರಿಯ ಉಪಮಹಾಲೇಖಪಾಲರೊಂದಿಗೆ ಚರ್ಚೆಯನ್ನು ಸಹ ನಡೆಸಿ, ಎಲ್ಲಾ ಸಹಕಾರ ಹಾಗೂ ಪೂರ್ಣ ವಿವರಗಳನ್ನು ಒದಗಿಸಲಾಗುವುದೆಂದು ತಿಳಿಸಿರುತ್ತಾರೆ. ಅಲ್ಲದೇ, ದಿನಾಂಕ 14/3/2011ರಂದು ಉಪಮಹಾಲೇಖಪಾಲರೊಂದಿಗೆ ನಡೆದ ನಿರ್ಗಮನ ಸಭೆಯಲ್ಲಿ ಕರಡು ವಿಮರ್ಶಾ ವರದಿಗಳನ್ನು, ಅವರು ನೀಡಿರುವ ಸಲಹೆಗಳನ್ನು ಪರಿಗಣಿಸಿ, ಕರಡು ಆಡಿಟ್ ವರದಿಯ ಕಂಡಿಕೆಗಳಿಗೆ ಸೂಕ್ತವಾದ ಮತ್ತು ಸಮರ್ಪಕವಾದ ಉತ್ತರಗಳನ್ನು ನೀಡಲು ಕ್ರಮ ಜರುಗಿಸಲಾಗುತ್ತಿದೆ.

ಇ) ಇಂತಹ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

## ಕಾರ್ಮಿಕ ಇಲಾಖೆ

ವಿಶ್ಲೇಷಣಾ ಅವಧಿಯ ವಿಧಾನಮಂಡಲ ಅಧಿವೇಶನಗಳಲ್ಲಿ ಕಾರ್ಮಿಕ ಇಲಾಖೆಗೆ ಕೇಳಿಬಂದ ಒಟ್ಟು ಪ್ರಶ್ನೆಗಳ ಸಂಖ್ಯೆ 25 (ವಿಧಾನಸಭೆ = 18 ಮತ್ತು ವಿಧಾನ ಪರಿಷತ್ತು = 7). ಇದರಲ್ಲಿ ಬಹುತೇಕ ಪ್ರಶ್ನೆಗಳು ಕೈಗಾರಿಕಾ ತರಬೇತಿ ಸಂಸ್ಥೆ (ಐ.ಟಿ.ಐ.)ಗಳ ಸ್ಥಾಪನೆ, ಸ್ಥಾಪನೆಗೆ ಅನುಮತಿ, ಅವುಗಳ ಕಟ್ಟಡ ಮತ್ತು ನಿರ್ವಹಣೆ ಇವೇ ಮೊದಲಾದವುಗಳಿಗೆ ಸೀಮಿತವಾಗಿವೆ. ಕೆಲವೇ ಕೆಲವು ಪ್ರಶ್ನೆಗಳು ಅಸಂಘಟಿತ ಕಾರ್ಮಿಕರು ಮತ್ತು ಇಲಾಖಾ ನೇಮಕಾತಿಗೆ ಸಂಬಂಧಪಟ್ಟ ಪ್ರಶ್ನೆಗಳಿವೆ.

**2011ರ ಆಯವ್ಯಯ ಅಧಿವೇಶನದಲ್ಲಿ ವಿಧಾನಸಭೆಯಲ್ಲಿ ಕೇಳಲ್ಪಟ್ಟ ಪಕ್ಷಾವಾರು ಒಟ್ಟು ಪ್ರಶ್ನೆಗಳು**

| ಪಕ್ಷ | ಒಟ್ಟು ಪ್ರಶ್ನೆಗಳು |
|---|---|
| ಬಿ.ಜೆ.ಪಿ | 0 |
| ಜೆ.ಡಿ.ಎಸ್ | 2 |
| ಕಾಂಗ್ರೆಸ್ | 16 |
| **ಒಟ್ಟು** | **18** |

**2011ರ ಆಯವ್ಯಯ ಅಧಿವೇಶನದಲ್ಲಿ ವಿಧಾನ ಪರಿಷತ್ತಿನಲ್ಲಿ ಕೇಳಲ್ಪಟ್ಟ ಪಕ್ಷಾವಾರು ಒಟ್ಟು ಪ್ರಶ್ನೆಗಳು**

| ಪಕ್ಷ | ಒಟ್ಟು ಪ್ರಶ್ನೆಗಳು |
|---|---|
| ಪಕ್ಷೇತರ | 2 |
| ಬಿ.ಜೆ.ಪಿ | 2 |
| ಜೆ.ಡಿ.ಎಸ್ | 0 |
| ಕಾಂಗ್ರೆಸ್ | 3 |
| **ಒಟ್ಟು** | **7** |

ಐ.ಟಿ.ಐ.ಗಳಿಗೆ ಸಂಬಂಧಪಟ್ಟ ಪ್ರಶ್ನೆಗಳು ಕೇವಲ ಪ್ರಶ್ನೆ ಕೇಳಿದ ಶಾಸಕರು, ಪ್ರಶ್ನೆಗಳನ್ನು ಕೇವಲ ಅವರು ಪ್ರತಿನಿಧಿಸುವ ಕ್ಷೇತ್ರ ಅಥವಾ ಜಿಲ್ಲೆಗಳಿಗೆ ಮಾತ್ರ ಸೀಮಿತಗೊಳಿಸಿದ್ದಾರೆಯೇ ಹೊರತು ಒಟ್ಟಾರೆಯಾಗಿ ಇಡೀ ರಾಜ್ಯದಲ್ಲಿರುವ ಐ.ಟಿ.ಐ.ಗಳಿಗೆ ಸಂಬಂಧಪಟ್ಟ ಪ್ರಶ್ನೆಗಳನ್ನು ಕೇಳಿಲ್ಲ.

ಆದರೆ ಇದನ್ನು ಕರ್ನಾಟಕ ರಾಜ್ಯಕ್ಕೆ ಅನ್ವಯಿಸುವಂತೆ ಪ್ರಶ್ನೆ ಕೇಳಿದ್ದರೆ ಇತರೆ ಶಾಸಕರು ಪುನಃ ಪುನಃ ಇದೇ ಪ್ರಶ್ನೆಗಳನ್ನು ತಮ್ಮ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಕೇಳುವ ಸಂದರ್ಭ ಉಂಟಾಗುವುದಿಲ್ಲ ಮತ್ತು ಅವರಿಗು ಅವರ ಕ್ಷೇತ್ರದ ಮಾಹಿತಿಯು ದೊರೆಯುತಿತ್ತು ಇದರಿಂದ ಸಮಯ, ತಗಲುವ ವೆಚ್ಚ, ಶ್ರಮ ಎಲ್ಲವು ಸರಕಾರಕ್ಕೆ ಉಳಿತಾಯವಾಗುತಿತ್ತು ಹಾಗು ಇದು ಸಂಬಂಧಪಟ್ಟ ಇಲಾಖೆಯ ವೆಬ್‌ಸೈಟ್‌ನಲ್ಲಿ ಲಭ್ಯವಾದರೆ ಸರಕಾರಕ್ಕೆ ಲಾಭವಾಗುವುದು ಹಾಗು ಮಾನ್ಯ ಶಾಸಕರು ಎಷ್ಟು ಉದ್ಯೋಗ ಸೃಷ್ಟಿಯಾಗಿದೆ ಮತ್ತು ಸ್ಥಳಿಯರಿಗೆ ಉದ್ಯೋಗ ಎಷ್ಟು ದೊರೆತಿವೆ ಎಂಬುದರ ಬಗ್ಗೆ ಪ್ರಶ್ನೆ ಕೇಳಿದ್ದರೆ ಉತ್ತಮವಾಗಿರುತಿತ್ತು.

**ಗೌರಿಬಿದನೂರು ಕ್ಷೇತ್ರವನ್ನು ಪ್ರತಿನಿಧಿಸುವ ಕಾಂಗ್ರೆಸ್ ಪಕ್ಷದ ಶ್ರೀ. ಎನ್. ಎಚ್. ಶಿವಶಂಕರರೆಡ್ಡಿ (ಪ್ರಶ್ನೆ ಸಂಖ್ಯೆ ಚುಕ್ಕೆ ರಹಿತ 517)ರವರ ಕಾರ್ಮಿಕ ಕಲ್ಯಾಣ ಭದ್ರತಾ ಯೋಜನೆ ಕುರಿತಾದ ಪ್ರಶ್ನೆಗೆ ಸರ್ಕಾರ ಉತ್ತರ ಹೀಗಿದೆ.**

ಅ. **ಕಾರ್ಮಿಕ ಕಲ್ಯಾಣ ಕುರಿತು ಭದ್ರತಾ ಯೋಜನೆ ಇನ್ನಿತರೆ ರಕ್ಷಣೆ ನೀಡುವ ಕಾಯ್ದೆ ಜಾರಿ ಮಾಡಲು ಸರ್ಕಾರ ತೆಗೆದುಕೊಂಡಿರುವ ನಿಲುವೇನು?**

ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಅಧಿನಿಯಮ 2008 ನ್ನು ಜಾರಿಗೆ ತರುವ ಸಲುವಾಗಿ ಕರ್ನಾಟಕ ಸರ್ಕಾರವು ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತೆ (ಕರ್ನಾಟಕ) ನಿಯಮಗಳು 2009 ನ್ನು ಜಾರಿಗೆ ತಂದಿದ್ದು, ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯನ್ನು ರಚಿಸಿ, ಈ ವಲಯದ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸಲು ಯೋಜನೆಗಳನ್ನು ರೂಪಿಸಿ ಜಾರಿಗೆ ತರಲು ನಿರ್ಧರಿಸಿರುತ್ತದೆ.

ಆ. **ಅಸಂಘಟಿತ ಕಾರ್ಮಿಕರ ಕಲ್ಯಾಣದ ಬಗ್ಗೆ ಸರ್ಕಾರ ಒಂದು ಹೊಸ ಕಾಯ್ದೆ ತರಲು ಉದ್ದೇಶಿಸಿರುವುದು ನಿಜವೇ?**

ಇಲ್ಲ. ಮೇಲೆ ಹೇಳಿದಂತೆ ಕೇಂದ್ರ ಕಾಯ್ದೆ ಅಡಿ ಅಧಿನಿಯಮವನ್ನು ರಚಿಸಲಾಗಿದೆ.

ಇ. **ಹಾಗಿದ್ದಲ್ಲಿ, ಈ ಕಾಯ್ದೆಯನ್ನು ಯಾವಾಗ ಜಾರಿಗೆ ತರಲಾಗುವುದು, ಹಾಗೂ ಯೋಜಿತ ಭದ್ರತೆಗಳು ಯಾವುವು?**

ಈ ಯೋಜನೆಯನ್ನು ಜಾರಿಗೆ ತರಲು ಕರ್ನಾಟಕ ರಾಜ್ಯದಲ್ಲಿ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯನ್ನು ರಚಿಸಲಾಗಿದೆ. ಪ್ರಾರಂಭಿಕವಾಗಿ ದರ್ಜಿ, ದೋಬಿ, ಹಮಾಲರು, ಖಾಸಗಿ ಹೋಟೆಲ್ ಕಾರ್ಮಿಕರು, ಆಟೋ ಮತ್ತು ಟ್ಯಾಕ್ಸಿ ಚಾಲಕರು, ಹಾಗೂ ಖಾಸಗಿ ಬಸ್, ಲಾರಿ ಚಾಲಕರು ಮತ್ತು ನಿರ್ವಹಕರು, ಆಟೋಮೊಬೈಲ್ಸ್ ವರ್ಕ್‌ಶಾಪ್‌ಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರನ್ನು ಯೋಜನೆ ವ್ಯಾಪ್ತಿಗೆ ಒಳ ಪಡಿಸಲಾಗಿರುತ್ತದೆ. ಪ್ರಸ್ತುತ ಈ ಆರು ವಲಯದ ಕಾರ್ಮಿಕರಿಗೆ ಕೇಂದ್ರ ಸರ್ಕಾರವು ಜಾರಿಗೊಳಿಸಿರುವ ಹೊಸ ಪಿಂಚಣಿ ಯೋಜನೆ ಸ್ವಾವಲಂಬನೆ ಯೋಜನೆಯನ್ನು ವಿಸ್ತರಿಸಲು ಉದ್ದೇಶಿಸಿ ಈ ನಿಟ್ಟಿನಲ್ಲಿ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಆದರೆ ಕಾರ್ಮಿಕ ಕಾಯ್ದೆಯ ಅನುಷ್ಠಾನದ ಬಗ್ಗೆ ಹೆಚ್ಚು ಚರ್ಚೆಯಾಗಿಲ್ಲ (ಚುಕ್ಕೆ ರಹಿತ ಪ್ರಶ್ನೆಯಾದ್ದರಿಂದ) ಹಾಗು ಇದರ ಬಗ್ಗೆ ಅಸಂಘಟಿತ ಎಂದು ಗುರುತಿಸಿರುವ ಆರು ವಲಯದ ಕಾರ್ಮಿಕರಿಗೆ ಆಗುವ ಪ್ರಯೋಜನಗಳ ಮತ್ತು ಇದನ್ನು ಪ್ರಚುರ ಪಡಿಸಲು ಸರಕಾರ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಪ್ರಶ್ನೆ ಮೂಡಿ ಬಂದಿದ್ದರೆ ಉತ್ತಮವಾಗಿರುತ್ತಿತ್ತು. ಜೊತೆಗೆ ಹೊಸ ಪಿಂಚಣಿ ಯೋಜನೆಯ ಬಗ್ಗೆ ವಿಸ್ತೃತವಾಗಿ ಚರ್ಚೆ ನಡೆಯಬೇಕಾಗಿತ್ತು.

## ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ

ವಿಶ್ಲೇಷಣಾ ಅವಧಿಯ ವಿಧಾನಮಂಡಲ ಅಧಿವೇಶನಗಳಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಗೆ ಕೇಳಿಬಂದ ಒಟ್ಟು ಪ್ರಶ್ನೆಗಳ ಸಂಖ್ಯೆ ಕೇವಲ ವಿಧಾನಸಭೆಯಿಂದ ಒಂದು ಪ್ರಶ್ನೆ ಮತ್ತು ವಿಧಾನ ಪರಿಷತ್ತಿನಲ್ಲಿ ಇಲಾಖೆಗೆ ಸಂಬಂಧಿಸಿದಂತೆ ಯಾವುದೇ ಪ್ರಶ್ನೆಯನ್ನು ಯಾವ ಶಾಸಕರುಗಳು ಕೇಳಿರುವುದಿಲ್ಲ.

ರಾಮಲಿಂಗಾ ರೆಡ್ಡಿಯವರು ಸಾಫ್ಟ್‌ವೇರ್ ಕಂಪನಿಗಳಿಂದ ಬರುವ ವರಮಾನಕ್ಕೆ ಸಂಬಂಧಿತ ಪ್ರಶ್ನೆಯನ್ನು ಮಾತ್ರವೇ ಕೇಳಲಾಗಿದೆ.

ಈ ಕ್ಷೇತ್ರದಿಂದ ಬರುವ ಆದಾಯದ ಬಗ್ಗೆ ಕೇಳಿರುವುದು ತಪ್ಪೇನಿಲ್ಲ, ಆದರೆ ಸ್ಥಳೀಯ ಸಂಪನ್ಮೂಲಗಳ ಬಳಕೆ ಮಾಡುವ ಮತ್ತು ಗ್ರಾಮೀಣ ವಿದ್ಯಾರ್ಥಿಗಳನ್ನು ಮತ್ತು ಯುವ ಪೀಳಿಗೆಯನ್ನು ವಿಜ್ಞಾನ–ತಂತ್ರಜ್ಞಾನ ಕ್ಷೇತ್ರಕ್ಕೆ ಆಕರ್ಷಿಸುವ ಕುರಿತು ಹೊಸ ಯೋಜನೆಗಳನ್ನು ರೂಪಿಸುವ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳಬೇಕಾಗಿದೆ. ಆ ಕುರಿತು ಚರ್ಚೆ ಮಾಡಬೇಕಾದ ಮತ್ತು ಸರ್ಕಾರದ ಗಮನ ಸೆಳೆಯಬೇಕಾದ ವಿಚಾರಗಳನ್ನು ಕುರಿತು ಪ್ರಶ್ನೆಗಳು ಬರಬೇಕಿತ್ತು. ಬಹಳ ದೊಡ್ಡದಾಗಿ ಕಾಣುವುದು, ರಾಜ್ಯದ ಜನರ ಪ್ರಜ್ಞೆಯನ್ನು ಪ್ರತಿನಿಧಿಸುವ ಶಾಸಕರುಗಳಿರುವ ವಿಧಾನ ಪರಿಷತ್ತಿನಲ್ಲಿ, ಈ ನಿರ್ದಿಷ್ಟ ಅಧಿವೇಶನದಲ್ಲಿ ಈ ಪ್ರಮುಖ ಇಲಾಖೆಗೆ ಒಂದೂ ಪ್ರಶ್ನೆ ಇಲ್ಲದಿರುವುದು!

**2011ರ ಆಯವ್ಯಯ ಅಧಿವೇಶನದಲ್ಲಿ ವಿಧಾನಸಭೆಯಲ್ಲಿ ಕೇಳಲ್ಪಟ್ಟ ಪಕ್ಷಾವಾರು ಒಟ್ಟು ಪ್ರಶ್ನೆಗಳು**

| **ಪಕ್ಷ** | **ಒಟ್ಟು ಪ್ರಶ್ನೆಗಳು** |
|---|---|
| ಬಿ.ಜೆ.ಪಿ | 0 |
| ಜೆ.ಡಿ.ಎಸ್ | 0 |
| ಕಾಂಗ್ರೆಸ್ | 1 |
| **ಒಟ್ಟು** | **1** |

**2011ರ ಆಯವ್ಯಯ ಅಧಿವೇಶನದಲ್ಲಿ ವಿಧಾನ ಪರಿಷತ್ತಿನಲ್ಲಿ ಕೇಳಲ್ಪಟ್ಟ ಪಕ್ಷಾವಾರು ಒಟ್ಟು ಪ್ರಶ್ನೆಗಳು**

| **ಪಕ್ಷ** | **ಒಟ್ಟು ಪ್ರಶ್ನೆಗಳು** |
|---|---|
| ಪಕ್ಷೇತರ | 0 |
| ಬಿ.ಜೆ.ಪಿ | 0 |
| ಜೆ.ಡಿ.ಎಸ್ | 0 |
| ಕಾಂಗ್ರೆಸ್ | 0 |
| **ಒಟ್ಟು** | **0** |

# ಬೃಹತ್ ಮತ್ತು ಮಧ್ಯಮ ಕೈಗಾರಿಕೆ

ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಇಲಾಖೆಗೆ ವಿಶ್ಲೇಷಣೆಗೆ ಆಯ್ದುಕೊಂಡ ವಿಧಾನಮಂಡಲ ಅಧಿವೇಶನದ ಅವಧಿಯಲ್ಲಿ ಕೇಳಿ ಬಂದ ಒಟ್ಟು ಪ್ರಶ್ನೆಗಳ ಸಂಖ್ಯೆ 26 (ವಿಧಾನಸಭೆ =17 ಮತ್ತು ವಿಧಾನ ಪರಿಷತ್ 9 ಪ್ರಶ್ನೆಗಳು). ಇವುಗಳಲ್ಲಿ ಬಹುತೇಕ ಪ್ರಶ್ನೆಗಳು ಬೃಹತ್ ಕೈಗಾರಿಕೆಗಳಿಗೆ ಸರ್ಕಾರ ಹೂಡಿದ ಬಂಡವಾಳ ಕುರಿತಾಗಿದ್ದರೆ, ಇನ್ನುಳಿದ ಪ್ರಶ್ನೆಗಳು ಜಾಗತಿಕ ಬಂಡವಾಳ ಹೂಡಿಕೆ, ವಿಶೇಷ ಆರ್ಥಿಕ ವಲಯ, ಹೊಸ ಕಾರ್ಖಾನೆಗಳನ್ನು ಸ್ಥಾಪಿಸುವ ಕುರಿತಾಗಿದೆ. ಇತ್ತೀಚೆಗೆ ಹೆಚ್ಚು ಚರ್ಚೆಗೆ ಗ್ರಾಸವಾಗಿರುವ ಹೊಸ ಕೈಗಾರಿಕೆಗಳಿಗೆ ರೈತರ ಜಮೀನಿನ ಸ್ವಾಧೀನ ಕುರಿತು ಕೇವಲ ಒಂದು ಪ್ರಶ್ನೆ ಮಾತ್ರ ಕೇಳಿಬಂದಿದೆ.

| **2011ರ ಆಯವ್ಯಯ ಅಧಿವೇಶನದಲ್ಲಿ ವಿಧಾನಸಭೆಯಲ್ಲಿ ಕೇಳಲ್ಪಟ್ಟ ಪಕ್ಷಾವಾರು ಒಟ್ಟು ಪ್ರಶ್ನೆಗಳು** | |
|---|---|
| **ಪಕ್ಷ** | **ಒಟ್ಟು ಪ್ರಶ್ನೆಗಳು** |
| ಬಿ.ಜೆ.ಪಿ | 3 |
| ಜೆ.ಡಿ.ಎಸ್ | 1 |
| ಕಾಂಗ್ರೆಸ್ | 13 |
| **ಒಟ್ಟು** | **17** |

| **2011ರ ಆಯವ್ಯಯ ಅಧಿವೇಶನದಲ್ಲಿ ವಿಧಾನ ಪರಿಷತ್ತಿನಲ್ಲಿ ಕೇಳಲ್ಪಟ್ಟ ಪಕ್ಷಾವಾರು ಒಟ್ಟು ಪ್ರಶ್ನೆಗಳು** | |
|---|---|
| **ಪಕ್ಷ** | **ಒಟ್ಟು ಪ್ರಶ್ನೆಗಳು** |
| ಪಕ್ಷೇತರ | 1 |
| ಬಿ.ಜೆ.ಪಿ | 1 |
| ಜೆ.ಡಿ.ಎಸ್ | 3 |
| ಕಾಂಗ್ರೆಸ್ | 4 |
| **ಒಟ್ಟು** | **9** |

ಜಾಗತಿಕ ಬಂಡವಾಳ ಹೂಡಿಕೆದಾರರ ಕುರಿತಾದ ಕೇಳಿದ ಅನೇಕ ಪ್ರಶ್ನೆಗಳು ಅಪೂರ್ಣವೆನಿಸುತ್ತವೆ ಮತ್ತು ಅವುಗಳಿಗೆ ಸರ್ಕಾರ ನೀಡಿದ ಉತ್ತರಗಳೂ ಸಹ ಅಪೂರ್ಣವಾಗಿವೆ. ಉದಾಹರಣೆಗೆ, ಜಾಗತಿಕ ಬಂಡವಾಳ ಹೂಡಿಕೆದಾರರ ಕುರಿತಾದ ಪ್ರಶ್ನೆಗಳಿಗೆ ಸರ್ಕಾರ ನೀಡಿದ ಉತ್ತರಗಳಿಂದ ಕಂಡುಬರುವುದೇನೆಂದರೆ:

*2010ರ ಜೂನ್ 3 ಮತ್ತು 4 ರಂದು ನಡೆಸಲಾದ ಜಾಗತಿಕ ಬಂಡವಾಳ ಹೂಡಿಕೆದಾರರ ಸಮ್ಮೇಳನದಲ್ಲಿ ಒಟ್ಟು 389 ಯೋಜನೆಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ ಮತ್ತು ಇದರಿಂದ ರೂ. 3.92 ಲಕ್ಷ ಕೋಟಿಗಳ ಬಂಡವಾಳ ಹೂಡಿಕೆಯಾಗಲಿದೆ. ಇಲ್ಲಿಯವರೆಗೆ 14 ಯೋಜನೆಗಳು ಕಾರ್ಯಗತಗೊಂಡಿವೆ ಮತ್ತು 201 ಯೋಜನೆಗಳು ವಿವಿಧ ಹಂತದಲ್ಲಿವೆ.* ಆದರೆ ಉಳಿದ 174 ಯೋಜನೆಗಳ ಕುರಿತು ಯಾರೂ ಸದನದಲ್ಲಿ ಚರ್ಚಿಸಿಲ್ಲ ಮತ್ತು ಸರ್ಕಾರ ಸಹ ಈ ಕುರಿತು ಯಾವುದೇ ಸ್ಪಷ್ಟನೆ ನೀಡಿಲ್ಲ.

ಸರ್ಕಾರ ರಾಜ್ಯದ 63 ಹಿಂದುಳಿದ ತಾಲ್ಲೂಕುಗಳಲ್ಲಿ ಕೈಗಾರಿಕೆಗಳನ್ನು ಅತಿ ಹೆಚ್ಚು ಸ್ಥಾಪಿಸಲು ಪ್ರೋತ್ಸಾಹ ನೀಡಲಾಗುವುದು ಎಂದು ಹೇಳಿದ್ದರೂ ಸಹ (ದಿನಾಂಕ 28–2–2011ರ ಶ್ರೀ. ಹ್ಯಾರೀಸ್ ರವರು ಪ್ರಶ್ನೆ ಸಂಖ್ಯೆ 368), ಕಾರ್ಯಗತಗೊಂಡಿರುವ 14 ಯೋಜನೆಗಳು ಈ ರೀತಿಯಾಗಿವೆ: ಬೆಂಗಳೂರು ಗ್ರಾಮೀಣ = 1; ಬೆಂಗಳೂರು ನಗರ = 4; ಬೆಳಗಾಂ = 1; ಬಳ್ಳಾರಿ = 4; ಮಂಡ್ಯ = 1; ಮೈಸೂರು = 2

**ದಿನಾಂಕ 16–3–2011 ಚುಕ್ಕೆ – 1050 : ಹೂಡಿಕೆದಾರರ ಬಂಡವಾಳ – ಶ್ರೀಯುತ ವೀರಕುಮಾರ್ ಅಪ್ಪಾಸೋ ಪಾಟೀಲ್ (ಕಾಂಗ್ರೆಸ್ ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಉತ್ತರಿಸುವರೇ;**

ಅ) ಕಳೆದ ಮೂರು ವರ್ಷಗಳಲ್ಲಿ ಎಸ್.ಎಲ್.ಎಸ್.ಡಬ್ಲ್ಯೂ.ಸಿ.ಸಿ. ಎಷ್ಟು ಯೋಜನೆಗಳನ್ನು ಅನುಮೋದಿಸಿದೆ (ವರ್ಷವಾರು ವಿವರ ನೀಡುವುದು) ;

ಆ) ಈ ಯೋಜನೆಗಳಲ್ಲಿ ಹೂಡಿಕೆಯಾಗಿರುವ ಬಂಡವಾಳವೆಷ್ಟು? ಒದಗಿಸಲಾಗುವ ಉದ್ಯೋಗಾವಕಾಶಗಳು ಎಷ್ಟು?

ಇ) ಈ ಪೈಕಿ ಕಾರ್ಯಾರಂಭ ಮಾಡಿರುವ ಯೋಜನೆಗಳೆಷ್ಟು? ಹೂಡಲಾಗಿರುವ ಬಂಡವಾಳ ಎಷ್ಟು? ಎಷ್ಟು ಜನರಿಗೆ ಉದ್ಯೋಗ ಒದಗಿಸಲಾಗಿದೆ?

**ಉತ್ತರಿಸಿದವರು ಶ್ರೀ ಮುರುಗೇಶ್ ಆರ್. ನಿರಾಣಿ, ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು, ಕರ್ನಾಟಕ ಸರ್ಕಾರ**

ಅ) ಕಳೆದ ಮೂರು ವರ್ಷಗಳಲ್ಲಿ ಎಸ್ ಎಲ್ ಎಸ್ ಡಬ್ಲ್ಯೂ ಸಿ ಸಿ ಯಿಂದ ಅನುಮೋದನೆಯಾದ ಯೋಜನೆಗಳ ವಿವರ

| **ವರ್ಷ** | **ಅನುಮೋದನೆಯಾದ ಯೋಜನೆಗಳ ಸಂಖ್ಯೆ** |
|---|---|
| 2008–09 | 310 |
| 2009–10 | 363 |
| 2010–11 | 413 |

ಆ) ಈ ಯೋಜನೆಗಳಲ್ಲಿ ಹೂಡಿಕೆ ಮಾಡಲು ಉದ್ದೇಶಿಸಿರುವ ಬಂಡವಾಳದ ಒಟ್ಟು ಮೊತ್ತ ಸುಮಾರು ರೂ. 19,600 ಕೋಟಿಗಳಾಗಿದ್ದು, ಸುಮಾರು 3.7 ಲಕ್ಷ ಜನರಿಗೆ ಉದ್ಯೋಗಾವಕಾಶ ಲಭ್ಯವಾಗಲಿದೆ.

ಇ) ಈ ಪೈಕಿ 8 ಕೈಗಾರಿಕೆಗಳು ಕಾರ್ಯಾರಂಭ ಮಾಡಿದ್ದು, ರೂ. 160.29 ಕೋಟಿ ಬಂಡವಾಳ ಹೂಡಿಕೆಯಾಗಿದೆ ಹಾಗೂ 984 ಜನರಿಗೆ ಉದ್ಯೋಗ ಲಭ್ಯವಾಗಿರುತ್ತದೆ.

# ಅರಣ್ಯ ಮತ್ತು ಪರಿಸರ ಇಲಾಖೆ

ವಿಶ್ಲೇಷಣಾ ಅವಧಿಯ ವಿಧಾನಮಂಡಲ ಅಧಿವೇಶನದಲ್ಲಿ ಅರಣ್ಯ ಮತ್ತು ಪರಿಸರ ಇಲಾಖೆಗೆ ಕೇಳಿಬಂದ ಒಟ್ಟು ಪ್ರಶ್ನೆಗಳ ಸಂಖ್ಯೆ 56 (ವಿಧಾನಸಭೆ = 29 ಮತ್ತು ವಿಧಾನ ಪರಿಷತ್ತು = 27). ಇವುಗಳಲ್ಲಿ ಹಲವಾರು ಪ್ರಶ್ನೆಗಳು ರಾಜ್ಯದಲ್ಲಿರುವ ಮೃಗಾಲಯಗಳ ಸಂಖ್ಯೆ, ವನ್ಯಧಾನಮಗಳ ಸಂಖ್ಯೆ, ಅರಣ್ಯ ತಂಗುದಾಣಗಳ ಸಂಖ್ಯೆ ಮತ್ತವುಗಳ ನಿರ್ವಹಣಾ ವೆಚ್ಚ, ಅರಣ್ಯ ಇಲಾಖೆಯಲ್ಲಿರುವ ಸಿಬ್ಬಂದಿ ಇವುಗಳ ಸುತ್ತಲೇ ಗಿರಕಿ ಹೊಡೆಯುತ್ತವೆ. ಕೆಲವೇ ಕೆಲವು ಪ್ರಶ್ನೆಗಳು ಮಾತ್ರ ಕಾಡುಪ್ರಾಣಿಗಳಿಂದಾಗುವ ಪ್ರಾಣಹಾನಿ ಮತ್ತು ಬೆಳೆಹಾನಿ ಮತ್ತು ಅವುಗಳಿಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳು, ಇನ್ನೂ ರಾಜ್ಯದ ಅನೇಕ ಅರಣ್ಯ ಪ್ರದೇಶದಲ್ಲಿ ನಡೆಯುತ್ತಿರುವ ಕಲ್ಲು ಗಣಿಗಾರಿಕೆ, ಅರಣ್ಯ ಸಂಪತ್ತಿನ ಕಳ್ಳ ಸಾಗಾಣಿಕೆ ಕುರಿತಾದ ಗುಣಾತ್ಮಕ ಪ್ರಶ್ನೆಗಳಿವೆ. ಆದರೆ, ಪ್ರಮುಖವಾಗಿ ಅರಣ್ಯ ಒತ್ತುವರಿ, ಗಣಿಗಾರಿಕೆ ಇತ್ಯಾದಿ ಕುರಿತು ಪ್ರಶ್ನೆಗಳು ಬಂದಿಲ್ಲ.

**2011ರ ಆಯವ್ಯಯ ಅಧಿವೇಶನದಲ್ಲಿ ವಿಧಾನಸಭೆಯಲ್ಲಿ ಕೇಳಲ್ಪಟ್ಟ ಪಕ್ಷಾವಾರು ಒಟ್ಟು ಪ್ರಶ್ನೆಗಳು**

| ಪಕ್ಷ | ಒಟ್ಟು ಪ್ರಶ್ನೆಗಳು |
|---|---|
| ಬಿ.ಜೆ.ಪಿ | 6 |
| ಜೆ.ಡಿ.ಎಸ್ | 2 |
| ಕಾಂಗ್ರೆಸ್ | 21 |
| **ಒಟ್ಟು** | **29** |

**2011ರ ಆಯವ್ಯಯ ಅಧಿವೇಶನದಲ್ಲಿ ವಿಧಾನ ಪರಿಷತ್ತಿನಲ್ಲಿ ಕೇಳಲ್ಪಟ್ಟ ಪಕ್ಷಾವಾರು ಒಟ್ಟು ಪ್ರಶ್ನೆಗಳು**

| ಪಕ್ಷ | ಒಟ್ಟು ಪ್ರಶ್ನೆಗಳು |
|---|---|
| ಪಕ್ಷೇತರ | 1 |
| ಬಿ.ಜೆ.ಪಿ | 15 |
| ಜೆ.ಡಿ.ಎಸ್ | 3 |
| ಕಾಂಗ್ರೆಸ್ | 8 |
| **ಒಟ್ಟು** | **27** |

ಶಾಸಕರು ಎತ್ತಿರುವ ಬಹುತೇಕ ಪ್ರಶ್ನೆಗಳು ಕೇವಲ ಅಂಕಿ ಸಂಖ್ಯೆಗೆ ಸಂಬಂಧಪಟ್ಟಿರುವುದರಿಂದ ಸರ್ಕಾರವೂ ಸಹ ನೇರವಾಗಿ ಅಂಕಿಅಂಶಗಳನ್ನು ನೀಡಿ ಕೈತೊಳೆದುಕೊಂಡಿದೆ. ಆದರೆ ಕೆಲವೊಂದು ಗುಣಾತ್ಮಕ ಪ್ರಶ್ನೆಗಳಿಗೆ ಸರ್ಕಾರ ಹಾರಿಕೆಯ ಉತ್ತರ ನೀಡಿದೆ.

ಉದಾಹರಣೆಗೆ ದಿನಾಂಕ 14–3–2011ರಂದು ಶ್ರೀ. ಸಂಗಮೇಶ್ವರ ಬಿ.ಕೆ. ಕೇಳಿದ (ಪ್ರಶ್ನೆಸಂಖ್ಯೆ 1063) ಅರಣ್ಯ ಸಂಪತ್ತಿನ ಕಳ್ಳಸಾಗಾಣಿಕೆ ಕುರಿತಾದ ಪ್ರಶ್ನೆಗೆ ಉತ್ತರ ನೀಡುತ್ತಾ ಸರ್ಕಾರ ಕಳ್ಳಸಾಗಾಣಿಕೆಯನ್ನು ಒಪ್ಪಿಕೊಳ್ಳುತ್ತದೆ ಮತ್ತು ಕಳ್ಳಸಾಗಾಣಿಕೆಯನ್ನು ತಡೆಯಲು ತೆಗೆದುಕೊಂಡಿರುವ ಅನೇಕ ಕ್ರಮಗಳನ್ನೂ ಸಹ ಉದಾಹರಿಸುತ್ತದೆ. ಆದರೆ ಈ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲು ಸೂಕ್ತ ಪ್ರಮಾಣದ ಸಿಬ್ಬಂದಿಯ ಕೊರತೆ ಇರುವುದನ್ನೂ ಸಹ ಸರ್ಕಾರ ಒಪ್ಪಿಕೊಳ್ಳುತ್ತದೆ!

**ದಿನಾಂಕ 14–03–2011 – ಚುಕ್ಕೆ 1063 : ಮರಗಳ ಕಳ್ಳ ಸಾಗಾಣಿಕೆ – ಸಂಗಮೇಶ್ವರ ಬಿ.ಕೆ (ಕಾಂಗ್ರೆಸ್ – ಭದ್ರಾವತಿ)**

**ಮಾನ್ಯ ಅರಣ್ಯ ಮತ್ತು ಸಣ್ಣ ಕೈಗಾರಿಕಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ.**

ಅ) ಭದ್ರಾವತಿ ತಾಲ್ಲೂಕಿನಲ್ಲಿರುವ ಬೇಟೆ, ನೀಲಗಿರಿ, ಸಾಗುವಾನಿ ಮುಂತಾದ ಮರಗಳನ್ನು ಕಳ್ಳ ಸಾಗಾಣಿಕೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದಲ್ಲಿ, ಇದುವರೆವಿಗೂ ಕ್ರಮ ಕೈಗೋಳ್ಳದಿರಲು ಕಾರಣಗಳೇನು;

ಇ) ಇಲಾಖೆಯಲ್ಲಿ ಅಧಿಕಾರಿಗಳ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

**ಉತ್ತರಿಸಿದವರು ಶ್ರೀ ಸಿ.ಹೆಚ್. ವಿಜಯಶಂಕರ್, ಮಾನ್ಯ ಅರಣ್ಯ ಮತ್ತು ಸಣ್ಣ ಕೈಗಾರಿಕಾ ಸಚಿವರು, ಕರ್ನಾಟಕ ಸರ್ಕಾರ**

ಅ) ಹೌದು

ಆ) ಕಳ್ಳಸಾಗಾಣಿಕೆಯನ್ನು ತಡೆಯಲು ಕ್ರಮ ಕೋಗೊಳ್ಳಲಾಗಿದ್ದು, ಭದ್ರಾವತಿ ತಾಲ್ಲೂಕಿನಲ್ಲಿ ಕಳ್ಳಸಾಗಾಣಿಕೆದಾರರ ಮೇಲೆ ಈಗಾಗಲೇ 2010–11 ನೇ ಸಾಲಿನಲ್ಲಿ ಇದುವರೆವಿಗೂ 65 ಪ್ರಕರಣಗಳಲ್ಲಿ ಅರಣ್ಯ ಮೊಕದ್ದಮೆಗಳನ್ನು ದಾಖಲು ಮಾಡಲಾಗಿದೆ. ಭದ್ರಾವತಿ ತಾಲ್ಲೂಕು ಅತಿ ಸೂಕ್ಷ್ಮ ಪ್ರದೇಶವಾಗಿದ್ದು, ತಲೆ ಹೊರೆ ಮತ್ತು ಎತ್ತುಗಳ ಮೂಲಕವೂ ಸಾಗಾಣಿಕೆ ನಡೆಯುತ್ತಿದ್ದು, ಅದನ್ನು ಸಹ ನಿಯಂತ್ರಣದಲ್ಲಿಡಲಾಗಿದೆ. ದಾಖಲಾಗಿರುವ ಅರಣ್ಯ ಮೊಕದ್ದಮೆಗಳ ವಿವರ ಈ ಕೆಳಕಂಡಂತಿದೆ.

| ಕ್ರ. ಸಂ | ವಿವರ | ಅರಣ್ಯ ಮೊಕದ್ದಮೆ ಸಂಖ್ಯೆ | ಉತ್ಪನ್ನಗಳ ವಿವರ |
|---|---|---|---|
| 1 | ಟೀಕ್ | 12 | 3.917 ಎಂ 3+ 52 ಪೋಲ್ಸ್ |
| 2 | ಬೀಟೆ | 20 | 9.577 ಎಂ 3 |
| 3 | ಇತರೆ | 27 | 6.681 ಎಂ 3 + 1500 ಕೆ.ಜಿ. ಸೌದೆ, 36 ಪೋಲ್ಸ್ + 528 ಬೊಂಬು |
| 4 | ವನ್ಯಜೀವಿ | 04 | 2 ಚಿರತೆ ಚರ್ಮ + 1 ಜಿಂಕೆ ಚರ್ಮ |
| 5 | ಶ್ರೀಗಂಧ | 02 | 14 ಕೆ.ಜಿ |
| | | | 14 ವಾಹನಗಳು |

ಅದೂ ಅಲ್ಲದೆ ಭದ್ರಾವತಿ ವಿಭಾಗದಲ್ಲಿ ಅರಣ್ಯ ಉತ್ಪನ್ನಗಳ ಕಳ್ಳತನ ನಿಯಂತ್ರಿಸಲು 9 ಕಳ್ಳಬೇಟೆ ನಿಯಂತ್ರಣಾ ತಂಡಗಳನ್ನು ರಚನೆ ಮಾಡಲಾಗಿದೆ ಮತ್ತು ರಕ್ಷಣಾ ಸಿಬ್ಬಂದಿಯವರು ರಾತ್ರಿ ಹಗಲು ಗಸ್ತು ಮಾಡಿ ಕಳ್ಳ ನಾಟಾ ಸಾಗಾಣಿಕೆ ನಿಯಂತ್ರಣ ಮಾಡಲಾಗುತ್ತಿದೆ.

ಇ) ಹೌದು, ಖಾಲಿ ಇರುವ ಹುದ್ದೆಗಳನ್ನು ಆರ್ಥಿಕ ಇಲಾಖೆಯ ಸಮಾಲೋಚನೆಯೊಂದಿಗೆ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

**ದಿನಾಂಕ 16–03–2011 – ಚುಕ್ಕೆ 870 : ರಾಜ್ಯದಲ್ಲಿನ ಮೃಗಾಲಯ ಬಗ್ಗೆ – ಶ್ರೀ ದಯಾನಂದ (ಕಾಂಗ್ರೆಸ್–ಸ್ಥಳೀಯ ಸಂಸ್ಥೆಗಳ ಕ್ಷೇತ್ರ )**

**ಮಾನ್ಯ ಅರಣ್ಯ ಮತ್ತು ಸಣ್ಣ ಕೈಗಾರಿಕಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ.**

ಅ) ರಾಜ್ಯದಲ್ಲಿರುವ ಮೃಗಾಲಯಗಳ ಸಂಖ್ಯೆ ಎಷ್ಟು; (ಇವುಗಳ ಜಿಲ್ಲಾವಾರು ವಿವರ ನೀಡುವುದು)

ಆ) ಪ್ರತಿ ಮೃಗಾಲಯದಲ್ಲಿ ಎಷ್ಟು ಪ್ರಾಣಿ, ಪಕ್ಷಿ, ಜೀವಜಂತುಗಳಿವೆ;

ಇ) ಪ್ರತಿ ಮೃಗಾಲಯ ನಿರ್ವಹಣೆಗೆ ಬೇಕಾಗುವ ಮೊತ್ತ ಎಷ್ಟು; ಅದನ್ನು ಯಾವ ರೀತಿ ನಿರ್ವಹಿಸಲಾಗುತ್ತದೆ.? (ಪ್ರತಿ ದಿನದ ವೆಚ್ಚವಾರು ವಿವರ ನೀಡುವುದು);

**ಉತ್ತರಿಸಿದವರು ಶ್ರೀ ಸಿ.ಹೆಚ್. ವಿಜಯಶಂಕರ್, ಮಾನ್ಯ ಅರಣ್ಯ ಮತ್ತು ಸಣ್ಣ ಕೈಗಾರಿಕಾ ಸಚಿವರು, ಕರ್ನಾಟಕ ಸರ್ಕಾರ**

**ಅ)** ಕರ್ನಾಟಕ ರಾಜ್ಯದಲ್ಲಿ ಒಟ್ಟು 11 ಮೃಗಾಲಯಗಳಿದ್ದು, ಇದರಲ್ಲಿ ಅರಣ್ಯ ಇಲಾಖಾ ವ್ಯಾಪ್ತಿಯಲ್ಲಿ 03 ಹಾಗೂ ಕರ್ನಾಟಕ ಮೃಗಾಲಯ ಪ್ರಾಧಿಕಾರ, ಮೈಸೂರು ಇವರ ವ್ಯಾಪ್ತಿಯಲ್ಲಿ 08 ಮೃಗಾಲಯಗಳಿರುತ್ತವೆ.

**ಅರಣ್ಯ ಇಲಾಖಾ ವ್ಯಾಪ್ತಿಯ ಮೃಗಾಲಯಗಳ ವಿವರ**

1. ಗೆಂಡೆಕಟ್ಟೆ ಮಿನಿ ಮೃಗಾಲಯ – ಹಾಸನ ಜಿಲ್ಲೆ
2. ನಾಮದ ಚಿಲುಮೆ ಜಿಂಕೆವನ – ತುಮಕೂರು ಜಿಲ್ಲೆ
3. ಆಡುಮಲ್ಲೇಶ್ವರ ಕಿರು ಮೃಗಾಲಯ – ಚಿತ್ರದುರ್ಗ ಜಿಲ್ಲೆ

**ಕರ್ನಾಟಕ ಮೃಗಾಲಯ ಪ್ರಾಧಿಕಾರ, ಮೈಸೂರು ವ್ಯಾಪ್ತಿಯಲ್ಲಿರುವ ಮೃಗಾಲಯಗಳ ವಿವರ :–**

4. ಶ್ರೀ ಚಾಮರಾಜೇಂದ್ರ ಮೃಗಾಲಯ, ಮೈಸೂರು – ಮೈಸೂರು ಜಿಲ್ಲೆ
5. ಬನ್ನೇರುಘಟ್ಟ ಬಯಾಲಾಜಿಕಲ್ ಪಾರ್ಕ್, ಬನ್ನೇರುಘಟ್ಟ – ಬೆಂಗಳೂರು ನಗರ ಜಿಲ್ಲೆ
6. ಹುಲಿ ಮತ್ತು ಸಿಂಹಧಾಮ, ತ್ಯಾವರೆಕೊಪ್ಪ – ಶಿವಮೊಗ್ಗ ಜಿಲ್ಲೆ
7. ಮಕ್ಕಳ ಉದ್ಯಾನವನ ಮತ್ತು ಕಿರು ಮೃಗಾಲಯ, ಬಳ್ಳಾರಿ – ಬಳ್ಳಾರಿ ಜಿಲ್ಲೆ
8. ಕಿತ್ತೂರು ರಾಣಿ ಚೆನ್ನಮ್ಮ ನಿಸರ್ಗಧಾಮದ ಕಿರು ಮೃಗಾಲಯ, ಭೂತರಾಮನಹಟ್ಟಿ – ಬೆಳಗಾವಿ ಜಿಲ್ಲೆ
9. ಮಕ್ಕಳ ಉದ್ಯಾನವನ ಮತ್ತು ಕಿರು ಮೃಗಾಲಯ, ಬಿಂಕದಕಟ್ಟೆ – ಗದಗ ಜಿಲ್ಲೆ
10. ಮಕ್ಕಳ ಉದ್ಯಾನವನ ಮತ್ತು ಕಿರು ಮೃಗಾಲಯ, ಗುಲ್ಬರ್ಗಾ – ಗುಲ್ಬರ್ಗಾ ಜಿಲ್ಲೆ
11. ಇಂದಿರ ಪ್ರಿಯದರ್ಶಿನಿ ಪ್ರಾಣಿ ಸಂಗ್ರಹಾಲಯ, ಆನೆಗೋಡು – ದಾವಣಗೆರೆ ಜಿಲ್ಲೆ.

ಆ)

| ಮೃಗಾಲಯಗಳು | ಸಸ್ತನಿ ಪ್ರಾಣಿಗಳು | ಪಕ್ಷಿಗಳು | ಉರಗಗಳು | ಒಟ್ಟು |
|---|---|---|---|---|
| ಮೈಸೂರು | 529 | 671 | 88 | 1288 |
| ಬ.ಬ.ಪಾ. ಬೆಂಗಳೂರು | 667 | 447 | 88 | 1202 |
| ಶಿವಮೊಗ್ಗ | 112 | 15 | 5 | 132 |
| ಬಳ್ಳಾರಿ | 163 | 195 | 18 | 376 |
| ಬೆಳಗಾವಿ | 36 | 0 | 8 | 44 |
| ಗದಗ | 107 | 93 | 19 | 219 |
| ಗುಲ್ಬರ್ಗಾ | 28 | 10 | 16 | 54 |
| ದಾವಣಗೆರೆ | 47 | 5 | 5 | 57 |
| ಚಿತ್ರದುರ್ಗ | 35 | 59 | 0 | 94 |
| ಹಾಸನ | 61 | 0 | 0 | 61 |
| ತುಮಕೂರು | 45 | 0 | 0 | 45 |

ಇ. ಪ್ರತಿ ಮೃಗಾಲಯ ನಿರ್ವಹಣೆಗೆ ಬೇಕಾಗುವ ಮೊತ್ತ ಎಷ್ಟು; ಅದನ್ನು ಯಾವ ರೀತಿ ನಿರ್ವಹಿಸಲಾಗುತ್ತಿದೆ.? (ಪ್ರತಿ ದಿನದ ವೆಚ್ಚವಾರು ವಿವರ ನೀಡುವುದು)

ನಿರ್ವಹಣಾ ವೆಚ್ಚ (ಸರಾಸರಿ) (ರೂ.ಗಳಲ್ಲಿ)

| | ಪ್ರತಿ ದಿನಕ್ಕೆ | ವರ್ಷಕ್ಕೆ |
|---|---|---|
| ಮೈಸೂರು | 2,41,000/– | 879,65,000/– |
| ಬ.ಬ.ಪಾ. ಬೆಂಗಳೂರು | 1,86,000/– | 678,90,000/– |
| ಶಿವಮೊಗ್ಗ | 26,000/– | 94,90,000/– |
| ಬಳ್ಳಾರಿ | 2,400/– | 8,76,000/– |
| ಬೆಳಗಾವಿ | 6,000/– | 21,90,000/– |
| ಗದಗ | 8,600/– | 31,39,000/– |
| ಗುಲ್ಬರ್ಗಾ | 4,000/– | 14,60,000/– |
| ದಾವಣಗೆರೆ | 2,600/– | 9,49,000/– |
| ಚಿತ್ರದುರ್ಗ | 1500/– | 5,47,500/– |
| ಹಾಸನ | 1150/– | 4,20,000/– |
| ತುಮಕೂರು | 1537/– | 5,61,200/– |

ಮೃಗಾಲಯ ನಿರ್ವಹಣೆಗೆ ಬೇಕಾಗುವ ವೆಚ್ಚವನ್ನು ಮೃಗಾಲಯಗಳ ಪ್ರವೇಶ ಶುಲ್ಕದ ಆದಾಯದಿಂದ ಹಾಗೂ ಸರ್ಕಾರದಿಂದ ಬಿಡುಗಡೆಯಾಗುವ ಅನುದಾನದಿಂದ ನಿರ್ವಹಿಸಲಾಗುತ್ತದೆ.

## ತೋಟಗಾರಿಕಾ ಇಲಾಖೆ

ವಿಶ್ಲೇಷಣಾ ಅವಧಿಯ ವಿಧಾನಮಂಡಲ ಅಧಿವೇಶನದಲ್ಲಿ ತೋಟಗಾರಿಕಾ ಇಲಾಖೆಗೆ ಕೇಳಿಬಂದ ಒಟ್ಟು ಪ್ರಶ್ನೆಗಳ ಸಂಖ್ಯೆ 26 (ವಿಧಾನಸಭೆ = 20 ಮತ್ತು ವಿಧಾನ ಪರಿಷತ್ತು = 06). ಇವುಗಳಲ್ಲಿ ತೋಟಗಾರಿಕಾ ಮಿಷನ್ ಗೆ ಕೇಂದ್ರ ಸರ್ಕಾರದ ಯೋಜನೆ, ರಾಜ್ಯದಲ್ಲಿರುವ ಸರ್ಕಾರಿ ತೋಟಗಾರಿಕಾ ಕಾಲೇಜುಗಳ ಸಂಖ್ಯೆ, ಹನಿ ನೀರಾವಾರಿ, ತೋಟಗಾರಿಕಾ ಕ್ಷೇತ್ರಗಳ ಸಂಖ್ಯೆ, ತೋಟಗಾರಿಕಾ ಕ್ಷೇತ್ರಗಳ ಗುತ್ತಿಗೆ ನೀಡುವ ಬಗ್ಗೆ, ರೈತರಿಗೆ ನೀಡುತ್ತಿರುವ ಸೌಲಭ್ಯಗಳ ಬಗ್ಗೆ ಪ್ರಶ್ನೆಗಳನ್ನು ಕೇಳಲಾಗಿರುತ್ತದೆ.

| **2011ರ ಆಯವ್ಯಯ ಅಧಿವೇಶನದಲ್ಲಿ ವಿಧಾನಸಭೆಯಲ್ಲಿ ಕೇಳಲ್ಪಟ್ಟ ಪಕ್ಷವಾರು ಒಟ್ಟು ಪ್ರಶ್ನೆಗಳು** | |
|---|---|
| **ಪಕ್ಷ** | **ಒಟ್ಟು ಪ್ರಶ್ನೆಗಳು** |
| ಬಿ.ಜೆ.ಪಿ | 4 |
| ಜೆ.ಡಿ.ಎಸ್ | 2 |
| ಕಾಂಗ್ರೆಸ್ | 14 |
| **ಒಟ್ಟು** | **20** |

| **2011ರ ಆಯವ್ಯಯ ಅಧಿವೇಶನದಲ್ಲಿ ವಿಧಾನ ಪರಿಷತ್ತಿನಲ್ಲಿ ಕೇಳಲ್ಪಟ್ಟ ಪಕ್ಷವಾರು ಒಟ್ಟು ಪ್ರಶ್ನೆಗಳು** | |
|---|---|
| **ಪಕ್ಷ** | **ಒಟ್ಟು ಪ್ರಶ್ನೆಗಳು** |
| ಪಕ್ಷೇತರ | 2 |
| ಬಿ.ಜೆ.ಪಿ | 2 |
| ಜೆ.ಡಿ.ಎಸ್ | 0 |
| ಕಾಂಗ್ರೆಸ್ | 2 |
| **ಒಟ್ಟು** | **6** |

**ದಿನಾಂಕ 8/3/2011– ಚುಕ್ಕೆ 474 : ತೋಟಗಾರಿಕಾ ಮಿಷನ್ ಯೋಜನೆ – ಶ್ರೀ ವೀರಕುಮಾರ ಅಪ್ಪಾಸೋ ಪಾಟೀಲ್**

**ಮಾನ್ಯ ಸಕ್ಕರೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ.**

ಅ) ತೋಟಗಾರಿಕಾ ಮಿಷನ್ ಯೋಜನೆಗೆ ಕೇಂದ್ರ ಸರ್ಕಾರ ನೀಡಿದ ಅನುದಾನವೆಷ್ಟು; ರಾಜ್ಯ ಸರ್ಕಾರದ ಪಾಲು ಎಷ್ಟು (ಮಾಹಿತಿ ನೀಡುವುದು)

ಆ) ಈ ಯೋಜನೆಯಡಿಯಲ್ಲಿ ರೂಪಿಸಲಾಗಿರುವ ಕಾರ್ಯಕ್ರಮಗಳಾವುವು; ಈ ಯೋಜನೆಯಡಿಯಲ್ಲಿ ಗುರುತಿಸಲಾದ ಫಲಾನುಭವಿಗಳ ಸಂಖ್ಯೆ ಎಷ್ಟು (ಯೋಜನಾವಾರು ವಿವರ ನೀಡುವುದು)

ಇ) ಫಲಾನುಭವಿಗಳನ್ನು ಗುರುತಿಸಲು ಇರುವ ಮಾನದಂಡಗಳೇನು;

ಈ) ಕಳೆದ ಮೂರು ವರ್ಷಗಳಿಂದ ಖರ್ಚು ಮಾಡಲಾದ ಹಣವೆಷ್ಟು; ಖರ್ಚಾಗದೆ ಉಳಿದ ಹಣವೆಷ್ಟು; ಖರ್ಚಾಗದಿರಲು ಕಾರಣವೇನು? (ವಿವರ ನೀಡುವುದು)

**ಉತ್ತರಿಸಿದವರು ಸಕ್ಕರೆ ಮತ್ತು ತೋಟಗಾರಿಕಾ ಸಚಿವರು, ಕರ್ನಾಟಕ ಸರ್ಕಾರ**

ಅ) ತೋಟಗಾರಿಕಾ ಮಿಷನ್ ಯೋಜನೆಯಡಿ 2005–06 ಮತ್ತು 2006–07 ನೇ ಸಾಲುಗಳಲ್ಲಿ ಕೇಂದ್ರ ಸರ್ಕಾರದ ಪಾಲು ಶೇ. 100ರಷ್ಟು ಹಾಗೂ 2007–08ನೇ ಸಾಲಿನಿಂದ ಕೇಂದ್ರ ಸರ್ಕಾರದ ಪಾಲು ಶೇ. 85ರಷ್ಟು ಹಾಗೂ ರಾಜ್ಯ ಸರ್ಕಾರದ ಪಾಲು ಶೇ. 15ರಷ್ಟಿರುತ್ತದೆ.

ವಿವರಗಳ ಮಾಹಿತಿ ಇಂತಿದೆ; (ರೂ. ಲಕ್ಷಗಳಲ್ಲಿ )

| **ವರ್ಷ** | **ಕೇಂದ್ರ ಸರ್ಕಾರ** | **ರಾಜ್ಯ ಸರ್ಕಾರ** | **ಒಟ್ಟು** |
|---|---|---|---|
| 2005–06 | 4455.17 | – | 4455.17 |
| 2006–07 | 8448.25 | – | 8448.25 |
| 2007–08 | 8571.04 | 1499.90 | 10070.94 |
| 2008–09 | 12536.88 | 1000.00 | 13536.88 |
| 2009–10 | 8001.67 | 1499.00 | 9500.67 |
| 2010–11 (ಜನವರಿ 11ರ ಅಂತ್ಯಕ್ಕೆ) | 8525.00 | 1773.79 | 10298.79 |
| **ಒಟ್ಟು** | **50538.01** | **5772.69** | **56310.70** |

ಆ) 2010–11ನೇ ಸಾಲಿಗೆ ಈ ಯೋಜನೆಯಡಿಯಲ್ಲಿ ರೂಪಿಸಲಾಗಿರುವ ಕಾರ್ಯಕ್ರಮಗಳು ಹಾಗೂ ಗುರುತಿಸಲಾದ ಫಲಾನುಭವಿಗಳ ಸಂಖ್ಯೆಯನ್ನು ಅನುಬಂಧದಲ್ಲಿ ನೀಡಿದೆ.

ಇ) ಫಲಾನುಭವಿಗಳನ್ನು ಗುರುತಿಸಲು ಇರುವ ಮಾನದಂಡಗಳು ಈ ಕೆಳಗಿನಂತಿವೆ;

1. ಫಲಾನುಭವಿಗಳು ತೋಟಗಾರಿಕೆ ಬೆಳೆ ಬೆಳೆಯಲು ಆಸಕ್ತಿ ಹೊಂದಿರಬೇಕು.
2. ಫಲಾನುಭವಿಗಳು ನೀರಿನ ಸೌಕರ್ಯಗಳನ್ನು ಹೊಂದಿರಬೇಕು.
3. ಫಲಾನುಭವಿಗಳ ಹೆಸರಿನಲ್ಲಿ ಸ್ವಂತ ಜಮೀನು ಹೊಂದಿರಬೇಕು.
4. ಮೊದಲು ಸಲ್ಲಿಸಿರುವ ಅರ್ಹ ಫಲಾನುಭವಿಗಳ ಅರ್ಜಿಗಳನ್ನು ಆದ್ಯತೆ ಮೇರೆಗೆ ಪರಿಗಣಿಸಿ ಆಯ್ಕೆ ಮಾಡಲಾಗುವುದು.

ಈ) ಕಳೆದ ಮೂರು ವರ್ಷಗಳಿಂದ ಅಂದರೆ 2008–09ರಿಂದ 2010–11ನೇ ಸಾಲಿನ ಜನವರಿ ಅಂತ್ಯದವರೆಗೆ ಒಟ್ಟು ರೂ. 33336.34 ಲಕ್ಷಗಳು ಬಿಡುಗಡೆಯಾಗಿದ್ದು ರೂ. 32745.73 ಲಕ್ಷಗಳನ್ನು ಖರ್ಚು ಮಾಡಲಾಗಿದೆ. ಉಳಿದ ರೂ. 590.61 ಲಕ್ಷಗಳನ್ನು ವೆಚ್ಚ ಮಾಡಲು ಕ್ರಮ ಕೈಗೊಳ್ಳಲಾಗಿದೆ.

**ದಿನಾಂಕ 4/3/2011 – ಚುಕ್ಕೆಇಲ್ಲ 282 : ಲಾಲ್‌ಬಾಗ್ ಉದ್ಯಾನವನದಲ್ಲಿ ವಿವಿಧ ಕಾಮಗಾರಿ – ಶ್ರೀ ರಾಮಲಿಂಗಾ ರೆಡ್ಡಿ**

**ಮಾನ್ಯ ಸಕ್ಕರೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ.**

ಅ) ಬೆಂಗಳೂರಿನ ಲಾಲ್‌ಬಾಗ್ ಉದ್ಯಾನವನದಲ್ಲಿ ಕೈಗೊಂಡಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳು ಯಾವುವು;

ಆ) ಈ ಕಾಮಗಾರಿಗಾಗಿ 2010–11ನೇ ಸಾಲಿನಲ್ಲಿ ಬಿಡುಗಡೆ ಮಾಡಿದ ಹಣವೆಷ್ಟು ;

ಇ) ಲಾಲ್‌ಬಾಗ್‌ನ ಪ್ರವೇಶ ಶುಲ್ಕ ವಸೂಲು ಮಾಡುವುದನ್ನು ಖಾಸಗಿಯವರಿಗೆ ನೀಡಲಾಗಿದೆಯೇ;

ಈ) ಹಾಗಿದ್ದಲ್ಲಿ, ನಿಗದಿಪಡಿಸಲಾದ ಪ್ರವೇಶ ಶುಲ್ಕವೆಷ್ಟು;

ಉ) ಈಗಾಗಲೇ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳು ಯಾವುಗ ಪೂರ್ಣಗೊಳ್ಳುವುವು ?

**ಉತ್ತರಿಸಿದವರು ಸಕ್ಕರೆ ಮತ್ತು ತೋಟಗಾರಿಕಾ ಸಚಿವರು, ಕರ್ನಾಟಕ ಸರ್ಕಾರ**

ಅ) ಬೆಂಗಳೂರಿನ ಲಾಲ್ ಬಾಗ್ ಉದ್ಯಾನವನದಲ್ಲಿ ಕೈಗೊಂಡಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳ ವಿವರಗಳನ್ನು ಅನುಬಂಧ–1 ರಲ್ಲಿ ಲಗತ್ತಿಸಿದೆ.

ಆ) ಈ ಕಾಮಗಾರಿಗಾಗಿ 2010–11ನೇ ಸಾಲಿನಲ್ಲಿ ಬಿಡುಗಡೆ ಮಾಡಿದ ಹಣ ರೂ.232.00 ಲಕ್ಷಗಳು.

ಇ) ಹೌದು

ಈ) ಹಿರಿಯರಿಗೆ – ರೂ 10.00

12 ವರ್ಷ ಒಳಪಟ್ಟವರಿಗೆ – ಉಚಿತ

ಉ) ಈಗಾಗಲೇ ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳು ಮಾರ್ಚ್ – 2011 ರ ಅಂತ್ಯದೊಳಗೆ ಪೂರ್ಣಗೊಳ್ಳುವುವು.

# ಉನ್ನತ ಶಿಕ್ಷಣ ಇಲಾಖೆ

ವಿಶ್ಲೇಷಣಾ ಅವಧಿಯ ವಿಧಾನಮಂಡಲ ಅಧಿವೇಶನಗಳಲ್ಲಿ ಉನ್ನತ ಶಿಕ್ಷಣ ಇಲಾಖೆಗೆ ಕೇಳಿಬಂದ ಒಟ್ಟು ಪ್ರಶ್ನೆಗಳ ಸಂಖ್ಯೆ 60 (ವಿಧಾನಸಭೆ = 23 ಮತ್ತು ವಿಧಾನ ಪರಿಷತ್ತು =37). ಇದರಲ್ಲಿ ಹೊಸ ವಿಶ್ವವಿದ್ಯಾಲಯಗಳ ಸ್ಥಾಪನೆ, ಕಟ್ಟಡಗಳ ಕೊರತೆ – ನಿರ್ಮಾಣ, ಉಪನ್ಯಾಸಕ ಹುದ್ದೆಗಳ ನೇಮಕಾತಿಯ ಪ್ರಶ್ನೆಗಳಿದ್ದು, ಕೆಲವು ಪ್ರಶ್ನೆಗಳು ಸ್ನಾತಕೊತ್ತರ ಕೋರ್ಸ್‌ಗಳ ಆರಂಭ, ಸಿ.ಇ.ಟಿ. ತರಬೇತಿ ಮತ್ತು ಅವ್ಯವಹಾರಗಳನ್ನು ಕುರಿತು ಪ್ರಶ್ನೆಗಳಿವೆ.

| **2011ರ ಆಯವ್ಯಯ ಅಧಿವೇಶನದಲ್ಲಿ ವಿಧಾನಸಭೆಯಲ್ಲಿ ಕೇಳಲ್ಪಟ್ಟ ಪಕ್ಷಾವಾರು ಒಟ್ಟು ಪ್ರಶ್ನೆಗಳು** | |
|---|---|
| **ಪಕ್ಷ** | **ಒಟ್ಟು ಪ್ರಶ್ನೆಗಳು** |
| ಬಿ.ಜೆ.ಪಿ | 4 |
| ಜೆ.ಡಿ.ಎಸ್ | 6 |
| ಕಾಂಗ್ರೆಸ್ | 13 |
| **ಒಟ್ಟು** | **23** |

| **2011ರ ಆಯವ್ಯಯ ಅಧಿವೇಶನದಲ್ಲಿ ವಿಧಾನ ಪರಿಷತ್ತಿನಲ್ಲಿ ಕೇಳಲ್ಪಟ್ಟ ಪಕ್ಷಾವಾರು ಒಟ್ಟು ಪ್ರಶ್ನೆಗಳು** | |
|---|---|
| **ಪಕ್ಷ** | **ಒಟ್ಟು ಪ್ರಶ್ನೆಗಳು** |
| ಪಕ್ಷೇತರ | 1 |
| ಬಿ.ಜೆ.ಪಿ | 22 |
| ಜೆ.ಡಿ.ಎಸ್ | 4 |
| ಕಾಂಗ್ರೆಸ್ | 10 |
| **ಒಟ್ಟು** | **37** |

ವಿಧಾನ ಸಭಾ ಶಾಸಕರು ಕೇವಲ ಅವರು ಪ್ರತಿನಿಧಿಸುವ ಕ್ಷೇತ್ರ ಅಥವಾ ಜಿಲ್ಲೆಗಳಿಗೆ ಮಾತ್ರ ಸೀಮಿತಗೊಳಿಸಿ ಹೊಸ ವಿಶ್ವವಿದ್ಯಾಲಯ–ಕಾಲೇಜು–ಕಟ್ಟಡಗಳ ನಿರ್ಮಾಣ ಕುರಿತ ಪ್ರಶ್ನೆಗಳನ್ನು ಕೇಳಿರುತ್ತಾರೆ. ಕರ್ನಾಟಕ ರಾಜ್ಯಕ್ಕೆ ಅನ್ವಯಿಸುವಂತೆ ಪ್ರಶ್ನೆಯಾಗಲಿ ಅಥವಾ ಇಲಾಖೆಗಳಲ್ಲಿ / ವಿಶ್ವವಿದ್ಯಾಲಯಗಳ ಪ್ರವೇಶಾತಿಯಲ್ಲಿನ ಅವ್ಯವಹಾರಗಳು, ಉದ್ಯೋಗ ಸೃಷ್ಠಿಯಂತಹ ಹೊಸ ಪ್ರಶ್ನೆಗಳು ಕೇಳದೆ, ಕಳೆದ ವಿಧಾನಮಂಡಲ ಅಧಿವೇಶನದಲ್ಲಿ ಕೇಳಿರುವ ಪ್ರಶ್ನೆಗಳನ್ನೆ ಕೇಳಿರುತ್ತಾರೆ

ಕಟ್ಟಡಗಳ ನಿರ್ಮಾಣ, ಉಪನ್ಯಾಸಕರ ನೇಮಕಾತಿ, ಸಿ.ಇ.ಟಿ. ತರಬೇತಿ, ಹೆಚ್ಚುವರಿ ಶುಲ್ಕ, ಇವೇ ಮೊದಲಾದ ಪ್ರಶ್ನೆಗಳ ಹೊರತುಪಡಿಸಿ ವಿಶ್ವವಿದ್ಯಾಲಯಗಳಿಗೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಬಗ್ಗೆ, ವೃತ್ತಿಪರ ಕೋರ್ಸಗಳನ್ನು ಪ್ರಾರಂಭಿಸುವ ಬಗ್ಗೆ, ಅಂತಾರಾಷ್ಟ್ರೀಯ ವಿಶ್ವವಿದ್ಯಾಲಯ–ಸಂಸ್ಥೆಗಳ(ಕಂಪನಿ) ಜೊತೆ ಸ್ನೇಹ ಸಂಬಂಧವನ್ನು ಹೆಚ್ಚಿಸುವ, ಉದ್ಯೋಗ ಸೃಷ್ಠಿ ಮಾಡುವಂತಹ ಪಾತ್ರವನ್ನು ಸರ್ಕಾರ ಕೈಗೊಳ್ಳುವ, ಸಂಶೋಧನೆ ಮತ್ತು ಅವುಗಳ ಅಳವಡಿಕೆ, ಸದ್ಯ ವಿಶ್ವವಿದ್ಯಾಲಯಗಳ ಆಡಳಿತ, ಗುಣಮಟ್ಟ ಉನ್ನತೀಕರಣವೇ ಮೊದಲಾದವುಗಳನ್ನು ಕುರಿತು ಆಲೋಚನೆಗಳಾಗಬೇಕಾಗಿದೆ.

**ದಿನಾಂಕ 16–3–2011 ಚುಕ್ಕೆ ಇಲ್ಲ – 244 : ಪರೀಕ್ಷಾ ಫಲಿತಾಂಶ ಅವ್ಯವಹಾರ – ಶ್ರೀರಾಮಲಿಂಗಾರೆಡ್ಡಿ (ಕಾಂಗ್ರೆಸ್ – ಬಿ.ಟಿ.ಎಮ್. ಲೇಔಟ್)**

**ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೇ;**

ಅ) ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ 800 ಇಂಜಿನಿಯರಿಂಗ ವಿದ್ಯಾರ್ಥಿಗಳ ಪರೀಕ್ಷಾ ಫಲಿತಾಂಶಗಳಲ್ಲಿ ಅವ್ಯವಹಾರ ನಡೆದಿದೆ ಎನ್ನಲಾದ ದೂರು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

**ಉತ್ತರಿಸಿದವರು ಡಾ : ವಿ.ಎಸ್.ಆಚಾರ್ಯ, ಉನ್ನತ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ**

ಅ) ಬಂದಿದೆ

ಆ) ಈ ಬಗ್ಗೆ ವಾಸ್ತವಾಂಶವನ್ನು ಪರಿಶೀಲಿಸಲು ಸರ್ಕಾರವು ಆದೇಶ ಸಂ. ಇಡಿ 09 ಯುಟಿವಿ 2011, ದಿನಾಂಕ 28/1/2011ರಂದು ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಗಿದ್ದು, ದಿನಾಂಕ 11–2–2011ರಂದು ಈ ಸಂಬಂಧ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕಾರಣ ಕೇಳುವ ನೋಟೀಸನ್ನು ಜಾರಿಗೊಳಿಸಲಾಗಿದೆ.

ಕಾರ್ಯಕಾರಿ ಸಮಿತಿಯ ಉತ್ತರವನ್ನು ನಿರೀಕ್ಷಿಸಲಾಗುತ್ತಿದೆ.

# ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ

ವಿಶ್ಲೇಷಣಾ ಅವಧಿಯ ವಿಧಾನಮಂಡಲ ಅಧಿವೇಶನಗಳಲ್ಲಿ ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ ಕೇಳಿಬಂದ ಒಟ್ಟು ಪ್ರಶ್ನೆಗಳ ಸಂಖ್ಯೆ 24 (ವಿಧಾನಸಭೆ = 9 ಮತ್ತು ವಿಧಾನ ಪರಿಷತ್ತು =15). ಹೆಚ್ಚಿನ ಪ್ರಶ್ನೆಗಳು ಶಾದಿಮಹಲ್ ನಿರ್ಮಾಣ, ಫಲಾನುಭವಿಗಳ ತಾರತಮ್ಯ, ವಕ್ಫ್ ಮಂಡಳಿಯಿಂದ ಬಿಡುಗಡೆಯಾದ ಹಣ ಮತ್ತು ಬಾಕಿ ಇರುವ ಹಣಗಳ ವಿವರಗಳ ಬಗ್ಗೆ ಪ್ರಶ್ನೆ ಮಾಡಲಾಗಿದೆ.

**2011ರ ಆಯವ್ಯಯ ಅಧಿವೇಶನದಲ್ಲಿ ವಿಧಾನಸಭೆಯಲ್ಲಿ ಕೇಳಲ್ಪಟ್ಟ ಪಕ್ಷಾವಾರು ಒಟ್ಟು ಪ್ರಶ್ನೆಗಳು**

| ಪಕ್ಷ | ಒಟ್ಟು ಪ್ರಶ್ನೆಗಳು |
|---|---|
| ಬಿ.ಜೆ.ಪಿ | 2 |
| ಜೆ.ಡಿ.ಎಸ್ | 1 |
| ಕಾಂಗ್ರೆಸ್ | 6 |
| **ಒಟ್ಟು** | **9** |

**2011ರ ಆಯವ್ಯಯ ಅಧಿವೇಶನದಲ್ಲಿ ವಿಧಾನ ಪರಿಷತ್ತಿನಲ್ಲಿ ಕೇಳಲ್ಪಟ್ಟ ಪಕ್ಷಾವಾರು ಒಟ್ಟು ಪ್ರಶ್ನೆಗಳು**

| ಪಕ್ಷ | ಒಟ್ಟು ಪ್ರಶ್ನೆಗಳು |
|---|---|
| ಪಕ್ಷೇತರ | 0 |
| ಬಿ.ಜೆ.ಪಿ | 0 |
| ಜೆ.ಡಿ.ಎಸ್ | 8 |
| ಕಾಂಗ್ರೆಸ್ | 7 |
| **ಒಟ್ಟು** | **15** |

ಅಲ್ಪಸಂಖ್ಯಾತರ ಸಾಮಾಜಿಕ, ಶೈಕ್ಷಣಿಕ ಮತ್ತು ಧಾರ್ಮಿಕ ಪ್ರಗತಿಗೆ ನೆರವಾಗುವಂತಹ ಯಾವುದೇ ಪ್ರಶ್ನೆಗಳನ್ನು ಕೇಳಲಾಗಿಲ್ಲ. ಅಲ್ಲದೇ ಅಲ್ಪಸಂಖ್ಯಾತರ ವಿರುದ್ಧ ನಡೆಯುವ ದೌರ್ಜನ್ಯ, ಸರ್ಕಾರದ ಕ್ರಮಗಳು, ಹೊಸ ಯೋಜನೆಗಳ ಅನುಷ್ಠಾನ ಮತ್ತು ಇರುವ ಯೋಜನೆಗಳ ಪ್ರಗತಿಯ ಕುರಿತು ಯಾವುದೇ ಶಾಸಕರು ಪ್ರಶ್ನೆ ಮಾಡಿರುವುದಿಲ್ಲ.

ಅತಿ ಮುಖ್ಯವಾಗಿ ಅಲ್ಪಸಂಖ್ಯಾತ ಜನಾಂಗದವರಲ್ಲಿ ಆಗುತ್ತಿರುವ ಪ್ರಚಲಿತ ಸಮಸ್ಯೆಗಳ ಬಗ್ಗೆ ಗಮನ ಹರಿಸಿಲ್ಲ. ಅಲ್ಪಸಂಖ್ಯಾತರಲ್ಲಿ ಹೆಚ್ಚಾಗುತ್ತಿರುವ ಹೆಣ್ಣುಭ್ರೂಣ ಹತ್ಯೆ, ಲಿಂಗ ತಾರತಮ್ಯ, ಸಣ್ಣ ಕುಟುಂಬಕ್ಕಿರುವ ಪ್ರಾಮುಖ್ಯತೆ, ಯೋಜನೆ ಇಲ್ಲದಿರುವುದು, ಬಡತನ ನಿರ್ಮೂಲನೆ, ಅಲ್ಪಸಂಖ್ಯಾತ ಕುಟುಂಬಗಳ ಮಕ್ಕಳು ಶಾಲೆಗೆ ಹಾಜರಾಗದಿರುವುದು, ಮದರಸಗಳ ಸ್ಥಿತಿಗತಿಗಳು ಮತ್ತು ಮುಂತಾದವುಗಳ ಬಗ್ಗೆ ಶಾಸಕರು ಗಮನ ಹರಿಸಬೇಕಾಗಿದೆ.

**ದಿನಾಂಕ 03–03–2011 – ಚುಕ್ಕೆ ಇಲ್ಲ 407 : ವಕ್ಫ್ ಮಂಡಳಿಯಿಂದ ಬಿಡುಗಡೆಯಾದ ಅನುದಾನ – ಶ್ರೀ ನಾಡಗೌಡ ವೆಂಕಟರಾವ್**

**ಮಾನ್ಯ ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ.**

ಅ) ಕಳೆದ 3 ವರ್ಷಗಳಲ್ಲಿ ರಾಯಚೂರು ಜಿಲ್ಲೆಯಲ್ಲಿ ವಕ್ಫ್ ಮಂಡಳಿಗೆ ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನದ ಮೊತ್ತ ಎಷ್ಟು? (ವರ್ಷವಾರು ವಿವರಗಳನ್ನು ನೀಡುವುದು)

ಆ) ರಾಯಚೂರು ಜಿಲ್ಲೆ ವಕ್ಫ್ ಮಂಡಳಿಯು ತಾಲ್ಲೂಕು ವಕ್ಫ್ ಮಂಡಳಿಗಳಿಗೆ ನೀಡುವ ಅನುದಾನದಲ್ಲಿ ತಾರತಮ್ಯ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಈ ರೀತಿಯ ತಾರತಮ್ಯ ನಿವಾರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

**ಉತ್ತರಿಸಿದವರು ಮಾನ್ಯ ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು, ಕರ್ನಾಟಕ ಸರ್ಕಾರ**

ಅ) ಜಿಲ್ಲೆಯಲ್ಲಿ ವಕ್ಫ್ ಮಂಡಳಿ ಇರುವುದಿಲ್ಲ. ಜಿಲ್ಲಾ ವಕ್ಫ್ ಸಲಹಾ ಇರುತ್ತದೆ. 3 ವರ್ಷಗಳಲ್ಲಿ ರಾಯಚೂರು ಜಿಲ್ಲೆಯ ವಕ್ಫ್ ಸಲಹಾ ಸಮಿತಿಗಳಿಗೆ ಬಿಡುಗಡೆ ಮಾಡುತ್ತಿರುವ ಮೊತ್ತದ ವಿವರ, ಈ ಕೆಳಗಿನಂತಿದೆ.

| ವರ್ಷ | ಮೊತ್ತ ರೂ. |
|---|---|
| 2007–08 | 7,66,000.=00 |
| 2008–09 | 8,06,300=00 |
| 2009–10 | 8,48,400=00 |

ಆ) ಇರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

**ದಿನಾಂಕ 14–03–2011 – ಚುಕ್ಕೆ 988 : ಮುಸ್ಲಿಂ ವಿಧವಾ ಮಹಿಳೆಯರಿಗೆ ನಿರ್ವಹಣಾ ಭತ್ಯೆ – ಶ್ರೀ ಅಬ್ದುಲ್ ಅಜೀಂ**

**ಮಾನ್ಯ ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ.**

ಅ) ಮುಸ್ಲಿಂ ವಿಧವಾ ಮಹಿಳೆಯರಿಗೆ ಜೀವನ ನಿರ್ವಹಣಾ ಭತ್ಯೆ ನೀಡುವ ಕಾಯ್ದೆ ಜಾರಿ ಮಾಡುವ ಯೋಜನೆ ಬಾಕಿಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಕಾಯ್ದೆಯನ್ನು ಕಾರ್ಯರೂಪಕ್ಕೆ ತರಲು ಕಾನೂನಿನಲ್ಲಿರುವ ತೊಡಕುಗಳೇನು? (ವಿವರ ನೀಡುವುದು)

ಇ) ಹಾಗಿದ್ದಲ್ಲಿ, ಈ ಕಾಯ್ದೆಯನ್ನು ಅನುಷ್ಠಾನಗೊಳಿಸಲು ಸರ್ಕಾರವು ಇಲ್ಲಿಯವರೆಗೆ ಕೈಗೊಂಡ ಕ್ರಮಗಳೇನು? ಹಾಗೂ ಎಂದಿನಿಂದ ಈ ಕಾಯ್ದೆಯನ್ನು ಜಾರಿಗೊಳಿಸಲಾಗುವುದು?

**ಉತ್ತರಿಸಿದವರು ಮಾನ್ಯ ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು, ಕರ್ನಾಟಕ ಸರ್ಕಾರ**

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

# ಗೃಹ ಇಲಾಖೆ

ವಿಶ್ಲೇಷಣಾ ಅವಧಿಯ ವಿಧಾನಮಂಡಲ ಅಧಿವೇಶನಗಳಲ್ಲಿ ಗೃಹ ಇಲಾಖೆಗೆ ಕೇಳಿಬಂದದ್ದು: ವಿಧಾನಸಭೆಯಿಂದ 27 ಮತ್ತು ವಿಧಾನ ಪರಿಷತ್ತಿಗೆ 22 ಪ್ರಶ್ನೆಗಳು. ಹೆಚ್ಚಿನ ಪ್ರಶ್ನೆಗಳು ವಿವಿಧ ಹುದ್ದೆಗಳ ನೇಮಕಾತಿ, ಅಗ್ನಿಶಾಮಕ ಠಾಣೆಗಳ ಪ್ರಾರಂಭ ಹಾಗೂ ವಿವಿಧ ಅಧಿಕಾರಿಗಳ ವಿವರ ಇಂತಹ ವಿಚಾರಗಳಿಗೆ ಸಂಬಂಧಿಸಿದ್ದಾಗಿದೆ.

ಕೆಲವು ಪ್ರಶ್ನೆಗಳು ಸಂಚಾರಿ/ಪೊಲೀಸ್ ಠಾಣೆಗಳ ನಿರ್ಮಾಣ, ಪೊಲೀಸರ ವರ್ಗ, ಜೂಜು–ಕಳ್ಳತನ– ದರೋಡೆ ಪ್ರಕರಣಗಳು, ಮೊಕದ್ದಮೆಗಳ ವಿವರ, ಟ್ರಾಫಿಕ್ ದಟ್ಟಣೆ, ಕಾರಾಗೃಹಗಳ ನಿರ್ಮಾಣ, ಬಾಂಗ್ಲ ದೇಶದ ಪ್ರಜೆಗಳು ಅಕ್ರಮವಾಗಿ ನೆಲೆಸಿರುವ ಬಗ್ಗೆ ಮತ್ತು ಹೊಯ್ಸಳ ವಾಹನಗಳ ವಿವರಗಳಂತಹ ಪ್ರಶ್ನೆಗಳಾಗಿವೆ.

**2011ರ ಆಯವ್ಯಯ ಅಧಿವೇಶನದಲ್ಲಿ ವಿಧಾನಸಭೆಯಲ್ಲಿ ಕೇಳಲ್ಪಟ್ಟ ಪಕ್ಷಾವಾರು ಒಟ್ಟು ಪ್ರಶ್ನೆಗಳು**

| ಪಕ್ಷ | ಒಟ್ಟು ಪ್ರಶ್ನೆಗಳು |
|---|---|
| ಬಿ.ಜೆ.ಪಿ | 6 |
| ಜೆ.ಡಿ.ಎಸ್ | 6 |
| ಕಾಂಗ್ರೆಸ್ | 15 |
| **ಒಟ್ಟು** | **27** |

**2011ರ ಆಯವ್ಯಯ ಅಧಿವೇಶನದಲ್ಲಿ ವಿಧಾನ ಪರಿಷತ್ತಿನಲ್ಲಿ ಕೇಳಲ್ಪಟ್ಟ ಪಕ್ಷಾವಾರು ಒಟ್ಟು ಪ್ರಶ್ನೆಗಳು**

| ಪಕ್ಷ | ಒಟ್ಟು ಪ್ರಶ್ನೆಗಳು |
|---|---|
| ಪಕ್ಷೇತರ | 0 |
| ಬಿ.ಜೆ.ಪಿ | 11 |
| ಜೆ.ಡಿ.ಎಸ್ | 4 |
| ಕಾಂಗ್ರೆಸ್ | 8 |
| **ಒಟ್ಟು** | **23** |

ಈ ಇಲಾಖೆಗೆ ನಾಡಿನ ರಕ್ಷಣೆ ಮತ್ತು ಅಪರಾಧಗಳ ಪತ್ತೆಗೆ ನೆರವಾಗುವಂತಹ ಕ್ರಮ ಕೈಗೊಳ್ಳುವುದೇ ಮೊದಲಾದ ವಿಚಾರಗಳನ್ನು ಕುರಿತು ಹಲವಾರು ಶಾಸಕರು ಉತ್ತಮವಾದ ಪ್ರಶ್ನೆಗಳನ್ನು ಕೇಳಿರುತ್ತಾರೆ ಆದರೆ (ಪೊಲೀಸರ ವರ್ಗ, ಜೂಜು–ಕಳ್ಳತನ– ದರೋಡೆ ಪ್ರಕರಣಗಳು, ಮೊಕದ್ದಮೆಗಳ ವಿವರ, ಟ್ರಾಫಿಕ್ ದಟ್ಟಣೆ) ಪೊಲೀಸ್ ಆಯುಕ್ತರು ಅಥವಾ ಉಪ ಪೊಲೀಸ್ ಆಯುಕ್ತರು ಅಥವಾ ಜಿಲ್ಲಾ ಪೊಲೀಸ್ ಆಯುಕ್ತರು ಅಥವಾ ಜಿಲ್ಲಾ ಪೊಲೀಸ್ ಠಾಣೆಗಳಲ್ಲಿ ಸಿಗಬಹುದಾದ ವಿವರಗಳು ಮತ್ತು ಉತ್ತರಗಳನ್ನು ವಿಧಾನ ಸಭೆ ಮತ್ತು ಪರಿಷತ್ತಿನಲ್ಲಿ ಪಡೆಯಲು ಶಾಸಕರು ಅಪೇಕ್ಷಿಸುತ್ತಿದ್ದಾರೇನೋ ಎಂಬ ಅನುಮಾನಪಡುವಂತಹ ಪ್ರಶ್ನೆಗಳು ಕಂಡುಬರುತ್ತವೆ. ರಾಜ್ಯದಲ್ಲಿ ಪೊಲೀಸ್ ಅಧಿಕಾರಿಗಳಿಂದಲೇ ನಡೆದಿರಬಹುದಾದ ದೌರ್ಜನ್ಯಗಳು, ಸಂಘಟಿತ ಅಪರಾಧಗಳು, ಉನ್ನತ ಮಟ್ಟದಲ್ಲಿ ನಡೆಯುವ ಅಪರಾಧಗಳನ್ನು ತಡೆಯುವಂತಹ ಕ್ರಮಗಳನ್ನು ಕುರಿತಾಗಲೀ ಚರ್ಚೆಗಳಾಗಿಲ್ಲ. ಪ್ರಾಯಶಃ ಇಲ್ಲಿ ಕಾಣುವುದು ಹೊಸ ಶಾಸನ ಅಥವಾ ಕಾನೂನುಗಳನ್ನು ಕುರಿತು ಮಾಹಿತಿ ಹಾಗೂ ಅರಿವಿನ ಕೊರತೆ ಅನೇಕ ಶಾಸಕರಿಗೆ ಇದ್ದು, ಈ ಕುರಿತು ತರಬೇತಿ, ವಿವರಣೆ ಪಡೆಯುವುದು ಶಾಸಕರ ಕರ್ತವ್ಯ. ಅಂತಹ ಮಾಹಿತಿ ಇದ್ದದ್ದೇ ಆದಲ್ಲಿ ಶಾಸಕರುಗಳು ಖಂಡಿತಾ ಗೃಹ ಇಲಾಖೆಯ ಕರ್ತವ್ಯಗಳನ್ನು ಕುರಿತು ಸಮರ್ಪಕ ಪ್ರಶ್ನೆಗಳನ್ನು ಕೇಳಿಯಾರು.

**ದಿನಾಂಕ 03-03-2011 – ಚುಕ್ಕೆ ಇಲ್ಲ 274 : ಪೊಲೀಸ್ ಸಿಬ್ಬಂದಿಗಳ ವಿವರ – ಶ್ರೀ ವಸಂತ ಬಂಗೇರ ಕೆ. (ಬೆಳ್ತಂಗಡಿ)**

**ಮಾನ್ಯ ಗೃಹ ಮತ್ತು ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ.**

ಅ) ಬೆಳ್ತಂಗಡಿ ತಾಲ್ಲೂಕು ವ್ಯಾಪ್ತಿಗೊಳಪಟ್ಟ ಬೆಳ್ತಂಗಡಿ, ವೇಣೂರು, ಪಂಜಾಲಕಟ್ಟೆ, ಧರ್ಮಸ್ಥಳ ಹೊರ ಠಾಣೆಗಳಲ್ಲಿ ಮಂಜೂರಾದ ಸಿಬ್ಬಂದಿ ಮತ್ತು ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಪೊಲೀಸ್ ಸಿಬ್ಬಂದಿಗಳ ಸಂಖ್ಯೆ ಎಷ್ಟು (ಠಾಣೆವಾರು, ಹುದ್ದೆವಾರು ವಿವರ ನೀಡುವುದು)

ಆ) ಖಾಲಿ ಇರುವ ಹುದ್ದೆಗಳನ್ನು ಯಾವಾಗ ಭರ್ತಿಗೊಳಿಸಲಾಗುವುದು?

**ಉತ್ತರಿಸಿದವರು ಗೃಹ ಮತ್ತು ಸಾರಿಗೆ ಸಚಿವರು, ಕರ್ನಾಟಕ ಸರ್ಕಾರ**

ಅ) ಬೆಳ್ತಂಗಡಿ ತಾಲ್ಲೂಕು ವ್ಯಾಪ್ತಿಗೊಳಪಟ್ಟ ಬೆಳ್ತಂಗಡಿ, ವೇಣೂರು, ಪಂಜಾಲಕಟ್ಟೆ ಪೊಲೀಸ್ ಠಾಣೆಗಳಲ್ಲಿ ಹಾಗೂ ಧರ್ಮಸ್ಥಳ ಹೊರ ಠಾಣೆಗೆ ಮಂಜೂರಾದ ಸಿಬ್ಬಂದಿ ಮತ್ತು ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಪೊಲೀಸ್ ಸಿಬ್ಬಂದಿಗಳ ವಿವರಗಳನ್ನು ಅನುಬಂಧ–ಅ ನಲ್ಲಿ ನೀಡಲಾಗಿದೆ.

ಆ) ಮೇಲ್ದರ್ಜೆಗೆರಿಸಲ್ಪಟ್ಟ ದಿ: 26/06/2001 ರಿಂದ ಕಾರ್ಯಾರಂಭವಾಗಿರುವ ಪಂಜಾಲಕಟ್ಟೆ ಪೊಲೀಸ್ ಠಾಣೆಗೆ 1 ಪಿಎಸ್ಐ, 3 ಎಎಸ್ಐ, 7 ಸಿಹೆಚ್‌ಸಿ, 21 ಸಿಪಿಸಿ ಹುದ್ದೆಗಳು ಮಂಜೂರಾಗಿರುತ್ತದೆ. ಪ್ರಸ್ತುತ 1 ಪಿಎಸ್ಐ, 5 ಸಿಹೆಚ್‌ಸಿ ಮತ್ತು 6 ಸಿಪಿಸಿ ಹುದ್ದೆಗಳನ್ನು ತುಂಬಲಾಗಿದೆ. ಉಳಿದಂತೆ 2 ಎಎಸ್ಐ ಹುದ್ದೆಗಳನ್ನು ತಾತ್ಕಾಲಿಕವಾಗಿ ಓಓಡಿ ನೆಲೆಯಲ್ಲಿ ಹಂಚಿಕೆ ಮಾಡಿ ಕಾರ್ಯ ನಿರ್ವಹಿಸಲಾಗುತ್ತಿದೆ.

ಪ್ರಸ್ತುತ ದಕ್ಷಿಣ ಕನ್ನಡ ಜಿಲ್ಲಾ ಘಟಕದಲ್ಲಿ ಮಂಗಳೂರು ನಗರ ಪೊಲೀಸ್ ಕಮೀಷನರೇಟ್ ಸೃಜನಗೊಂಡಿರುವುದರಿಂದ ಸಿಬ್ಬಂದಿ ಮರು ಹೊಂದಾಣಿಕೆ ಪ್ರಕ್ರಿಯೆ ಚಾಲನೆಯಲ್ಲಿದ್ದು, ಶೀರ್ಘವೇ ಪೂರ್ಣಗೊಳಿಸಿ ಪರಿಷ್ಕೃತ ಜೇಷ್ಠತಾ ಪಟ್ಟಿಯನ್ನು ತಯಾರಿಸಿ ಎಎಸ್ಐ ಮತ್ತು ಸಿಹೆಚ್‌ಸಿ ಖಾಲಿ ಹುದ್ದೆಗಳನ್ನು ಮುಂಬಡ್ತಿ ಮೂಲಕ ಭರ್ತಿಗೊಳಿಸಲು ಕ್ರಮ ಕೈಗೊಳ್ಳಲಾಗುವುದು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಖಾಲಿ ಇರುವ ಸಿಪಿಸಿ/ಮಪಿಸಿ ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ಚಾಲನೆಯಾಗಿದ್ದು, ಲಿಖಿತ ಪರೀಕ್ಷೆ ಮತ್ತು ದೈಹಿಕ ಕ್ಷಮತೆ ಪರೀಕ್ಷೆಯಲ್ಲಿ ಆಯ್ಕೆಯಾಗಿರುವ 92 ಅಭ್ಯರ್ಥಿಗಳನ್ನು ಈಗಾಗಲೇ ವೈದ್ಯಕೀಯ ಪರೀಕ್ಷೆಗೆ ಒಳಪಡಲಾಗಿದ್ದು, ಶೀರ್ಘದಲ್ಲಿಯೇ ನೇಮಕಾತಿ ಆದೇಶವನ್ನು ಹೊರಡಿಸಲಾಗುವುದು.

**ದಿನಾಂಕ 07-03-2011 – ಚುಕ್ಕೆ 744 : ಜೂಜು ದಂಧೆಯ ಬಗ್ಗೆ – ಡಾ: ಎಸ್.ಆರ್.ಲೀಲಾ. (ನಾಮನಿರ್ದೇಶನ ಹೊಂದಿರುವವರು)**

**ಮಾನ್ಯ ಗೃಹ ಮತ್ತು ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ.**

ಅ) ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನಾದ್ಯಂತ ಓ.ಸಿ.ಎಂಬ ಜೂಜು ಅವ್ಯಾಹತವಾಗಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ;

ಆ) ಮಾರಕ ರೋಗದಂತೆ ಹಬ್ಬುತ್ತಿರುವ ದಂಧೆಗೆ ನಿರುದ್ಯೋಗಿ ಯುವಕರು, ಶಾಲಾ–ಕಾಲೇಜು ವಿದ್ಯಾರ್ಥಿಗಳು ಬಲಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೇಯೇ;

ಇ) ಬಂದಿದ್ದರೆ, ಈ ದಂಧೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು: ಈ ದಂಧೆಯಲ್ಲಿ ಬಂಧನಕ್ಕೊಳಗಾಗಿರುವವರ ಸಂಖ್ಯೆ ಎಷ್ಟು?

ಈ) ಸದರಿ ಓ.ಸಿ.ಬಿಡ್ಡರುಗಳು ಮತ್ತು ಜೂಜುಕೋರರ ಮೇಲೆ ಯಾವ ರೀತಿಯ ಕಾನೂನು ಕ್ರಮಗಳನ್ನು ಜರುಗಿಸಲಾಗಿದೆ (ವಿವರ ಒದಗಿಸುವುದು) ಹಾಗಿಲ್ಲದಿದ್ದಲ್ಲಿ, ಕಾರಣಕರ್ತರ ಮೇಲೆ ಕೈಗೊಂಡಿರುವ ಕ್ರಮಗಳೇನು?

**ಉತ್ತರಿಸಿದವರು ಗೃಹ ಮತ್ತು ಸಾರಿಗೆ ಸಚಿವರು, ಕರ್ನಾಟಕ ಸರ್ಕಾರ**

ಅ) ಹೌದು

ಆ) ಈ ದಂಧೆಯಲ್ಲಿ ನಿರುದ್ಯೋಗಿ ಯುವಕರು, ಶಾಲಾ ಕಾಲೇಜು ವಿದ್ಯಾರ್ಥಿಗಳು ಬಲಿಯಾಗುತ್ತಿರುವುದು ಕಂಡು ಬಂದಿರುವುದಿಲ್ಲ.

ಇ) ಮಟಕಾ ದಂಧೆಯನ್ನು ನಿಯಂತ್ರಣಗೋಳಿಸಲು ಸಾಗರ ತಾಲ್ಲೂಕಿನಾದ್ಯಂತ ಬಾತ್ಮೀದಾರರನ್ನು ನೇಮಿಸಿ, ಗುಪ್ತವಾಗಿ ನಡೆಸುವ ಜೂಜಾಟದ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿ, ದಾಳಿ ನಡೆಸಿ, ಪ್ರಕರಣಗಳನ್ನು ಪತ್ತೆ ಹಚ್ಚಿ, ಮಟಕಾ/ ಜೂಜಾಟವನ್ನು ನಡೆಸುತ್ತಿರುವ ವ್ಯಕ್ತಿಗಳ ಮೇಲೆ ಕಾನೂನಿನಂತೆ ಕಠಿಣ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಮಟಕಾ / ಜೂಜಾಟವನ್ನು ತಾಲ್ಲೂಕಿನಾದ್ಯಂತ ನಿಷೇದಿಸುವ ಸಂಬಂಧ ಠಾಣಾ ಮಟ್ಟದಲ್ಲಿ ಬೀಟ್ ಪೊಲೀಸರಿಂದ ಗುಪ್ತವಾಗಿ ಮಾಹಿತಿಯನ್ನು ಸಂಗ್ರಹಿಸಿ, ಮಟಕಾ / ಜೂಜಾಟವನ್ನು ನಿಯಂತ್ರಣಗೊಳಿಸಲು ಕ್ರಮಕೈಗೊಂಡಿರುತ್ತದೆ.

ಸಾಗರ ತಾಲ್ಲೂಕಿನಾದ್ಯಂತ ಕಳೆದ ಮೂರು ವರ್ಷಗಳಲ್ಲಿ ಓಸಿ/ ಮಟಕಾ ಜೂಜಾಟವನ್ನು ತಡೆಯಲು ಎಲ್ಲಾ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡು ಈ ಕೆಳಕಂಡಂತೆ ಪ್ರಕರಣಗಳನ್ನು ದಾಖಲಿಸಲಾಗಿದೆ.

| ವರ್ಷ | ದಾಖಲಾದ ಪ್ರಕರಣಗಳು | ವಶಪಡಿಸಿಕೊಂಡ ಹಣ | ದಸ್ತಗಿರಿಯಾದ ಸಂಖ್ಯೆ |
|---|---|---|---|
| 2008 | 15 | 807–00 | 18 |
| 2009 | 18 | 18,336–00 | 28 |
| 2010 | 18 | 18,840–00 | 23 |
| 2011 (ಜನವರಿ ಮಾಹೆ ಕೊನೆಗೊಂಡಂತೆ) | 1 | 200–00 | 1 |

ಈ) ದಸ್ತಗಿರಿ ಮಾಡಿರುವ ಆರೋಪಿಗಳ ಮೇಲೆ ಮತ್ತು ಒ.ಸಿ. ಬಿಡ್ಡರುಗಳ ಮೇಲೆ ಕಲಂ 78 ಕ್ಲಾಸ್ (3) ಕೆ.ಪಿ.ಆಕ್ಟ್ ರೀತ್ಯಾ ಪ್ರಕರಣಗಳನ್ನು ದಾಖಲಿಸಿ. ಪದೇ ಪದೇ ಮಟಕಾ ಜೂಜಾಟವನ್ನು ನಡೆಸುವ ವ್ಯಕ್ತಿಗಳ ಮೇಲೆ 110 ಸಿ.ಆರ್.ಪಿ.ಸಿ. ರೀತ್ಯಾ 2008 ನೇ ಸಾಲಿನಲ್ಲಿ 6 ಪ್ರಕರಣಗಳನ್ನು ಮತ್ತು 2009 ನೇ ಸಾಲಿನಲ್ಲಿ 4 ಪ್ರಕರಣಗಳನ್ನು ದಾಖಲಿಸಿ, ದೋಷಾರೋಪಣಾ ಪಟ್ಟಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ.

## ಪ್ರವಾಸೋದ್ಯಮ ಇಲಾಖೆ

ವಿಶ್ಲೇಷಣಾ ಅವಧಿಯ ವಿಧಾನಮಂಡಲ ಅಧಿವೇಶನಗಳಲ್ಲಿ ಪ್ರವಾಸೋದ್ಯಮ ಇಲಾಖೆಗೆ ಕೇಳಿಬಂದ ಒಟ್ಟು ಪ್ರಶ್ನೆಗಳ ಸಂಖ್ಯೆ 25 (ವಿಧಾನಸಭೆ = 30 ಮತ್ತು ವಿಧಾನ ಪರಿಷತ್ತು = 20). ಇದರಲ್ಲಿ ಬಹುತೇಕ ಪ್ರಶ್ನೆಗಳು ಪ್ರವಾಸಿ ತಾಣಗಳ ಅಭಿವೃದ್ಧಿ, ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ, ಪಕ್ಷಿಧಾಮಗಳ ಅಭಿವೃದ್ಧಿ, ಪ್ರವಾಸಿ ತಾಣಗಳಿಗೆ ವಿಮಾನ–ರೈಲು ನಿಲ್ದಾಣಗಳನ್ನು ಕಲ್ಪಿಸುವುದು ಮತ್ತು ಮೂಲಭೂತ ಸೌಲಭ್ಯಗಳ ಅಭಿವೃದ್ಧಿ ಸಂಬಂಧಿತ ಪ್ರಶ್ನೆಗಳನ್ನು ಕಾಣಬಹುದಾಗಿದೆ.

**2011ರ ಆಯವ್ಯಯ ಅಧಿವೇಶನದಲ್ಲಿ ವಿಧಾನಸಭೆಯಲ್ಲಿ ಕೇಳಲ್ಪಟ್ಟ ಪಕ್ಷಾವಾರು ಒಟ್ಟು ಪ್ರಶ್ನೆಗಳು**

| ಪಕ್ಷ | ಒಟ್ಟು ಪ್ರಶ್ನೆಗಳು |
|---|---|
| ಬಿ.ಜೆ.ಪಿ | 8 |
| ಜೆ.ಡಿ.ಎಸ್ | 5 |
| ಕಾಂಗ್ರೆಸ್ | 17 |
| **ಒಟ್ಟು** | **30** |

**2011ರ ಆಯವ್ಯಯ ಅಧಿವೇಶನದಲ್ಲಿ ವಿಧಾನ ಪರಿಷತ್ತಿನಲ್ಲಿ ಕೇಳಲ್ಪಟ್ಟ ಪಕ್ಷಾವಾರು ಒಟ್ಟು ಪ್ರಶ್ನೆಗಳು**

| ಪಕ್ಷ | ಒಟ್ಟು ಪ್ರಶ್ನೆಗಳು |
|---|---|
| ಪಕ್ಷೇತರ | 3 |
| ಬಿ.ಜೆ.ಪಿ | 7 |
| ಜೆ.ಡಿ.ಎಸ್ | 7 |
| ಕಾಂಗ್ರೆಸ್ | 3 |
| **ಒಟ್ಟು** | **20** |

ಈ ಮೇಲಿನ ಪ್ರಶ್ನೆಗಳನ್ನು ಕೇಳಿರುವ ಕೆಲವು ಶಾಸಕರು ಎಂದಿನಂತೆ ಕೇವಲ ತಮ್ಮ ಜಿಲ್ಲೆಗಳಿಗೆ ಸಂಬಂಧಿಸಿದಂತೆ ಪ್ರವಾಸೋದ್ಯಮ ತಾಣ ಅಥವಾ ಇಲಾಖೆಯ ಅಭಿವೃದ್ಧಿ ಕುರಿತ ಪ್ರಶ್ನೆಗಳನ್ನು ಮಾತ್ರ ಕೇಳಿರುತ್ತಾರೆ. ಇದನ್ನು ಹೊರತುಪಡಿಸಿ ಪ್ರವಾಸಿಧಾಮಗಳ ದಿನಗೂಲಿ ನೌಕರರನ್ನು ಖಾಯಂಗೊಳಿಸುವ, ಪ್ರವಾಸೋದ್ಯಮ ಇಲಾಖೆಗೆ ಅನುದಾನ, ಇಲಾಖೆಯಿಂದ ನಡೆಯುತ್ತಿರುವ ಹೋಟೆಲ್‌ಗಳ ವಿವರ ಮತ್ತು ಪ್ರವಾಸಿಗರ ಅನುಕೂಲಕ್ಕಾಗಿ ಶೌಚಾಲಯಗಳ ನಿರ್ಮಾಣದಂತಹ ಪ್ರಶ್ನೆಗಳನ್ನು ಕೇಳಿರುತ್ತಾರೆ. ಇವೆಲ್ಲದರ ಜೊತೆಯಲ್ಲಿ ಪ್ರಾಯಶಃ ಯಾರೋ ಕೆಲವರಿಗೆ ಮಾತ್ರ ಉಪಯೋಗವಾಗಬಹುದಾದಂತಹ 'ಸಿಮೆಂಟ್ ಕಾಂಕ್ರೀಟ್ ಹೆಲಿಪ್ಯಾಡ್‌ಗಳನ್ನು ನಿರ್ಮಿಸಲಾಗಿದೆಯೇ'(!) ಎಂಬ ಅನಾವಶ್ಯಕವೆನಿಸಬಹುದಾದ ಪ್ರಶ್ನೆಗಳನ್ನೂ ಕೇಳಿರುತ್ತಾರೆ. ಇಂತಹ ಪ್ರಶ್ನೆಯನ್ನು ಕೇಳುವ ಉದ್ದೇಶವನ್ನೇ ಸಾರ್ವಜನಿಕರು ಪ್ರಶ್ನಿಸಬೇಕಾಗುತ್ತದೆ. ಇವುಗಳನ್ನು ತೀಕ್ಷ್ಣವಾಗಿ ಗಮನಿಸಿದ್ದೇ ಆದಲ್ಲಿ, ಈ ಪ್ರಶ್ನೆಗಳಿಗೆ ಸಂಬಂಧಿಸಿದ ಸಚಿವರೂ ನೀಡಿರುವ ಉತ್ತರಗಳೂ ಸಹ ಅದೇ ಧಾಟಿಯಲ್ಲಿದ್ದು ಸಂಪೂರ್ಣ ಮಾಹಿತಿ ನೀಡಿರುವುದಿಲ್ಲ.

**ದಿನಾಂಕ 08–03–2011 – ಚುಕ್ಕೆ 213 : ಪ್ರವಾಸಿ ಕೇಂದ್ರಗಳಲ್ಲಿ ಸಿಮೆಂಟ್ ಕಾಂಕ್ರೀಟ್ ಹೆಲಿಪ್ಯಾಡ್ ನಿರ್ಮಾಣ – ವಸಂತಬಂಗೇರ ಕೆ. (ಬೆಳ್ತಂಗಡಿ)**

ಮಾನ್ಯ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ.

ಅ) ರಾಜ್ಯದ ಯಾವ ಪ್ರಮುಖ ಪ್ರವಾಸಿ ಕೇಂದ್ರಗಳಲ್ಲಿ 2011–11 ರ ಸಾಲಿನಲ್ಲಿ ಸಿಮೆಂಟ್ ಕಾಂಕ್ರೀಟ್ ಹೆಲಿಪ್ಯಾಡ್‌ಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ.

ಆ) ಹಾಗಿದ್ದಲ್ಲಿ, ಎಷ್ಟು ಕಾಮಗಾರಿಗೆ ಈವರೆಗೆ ಮಂಜೂರಾತಿ ನೀಡಲಾಗಿದೆ. (ಸ್ಥಳ ಹಾಗೂ ಅಂದಾಜು ವೆಚ್ಚದ ವಿವರ ನೀಡುವುದು)?

**ಉತ್ತರಿಸಿದವರು ಪ್ರವಾಸೋದ್ಯಮ ಸಚಿವರು, ಕರ್ನಾಟಕ ಸರ್ಕಾರ.**

ಅ) ಪ್ರವಾಸೋದ್ಯಮ ಇಲಾಖೆಯ ವತಿಯಿಂದ 2010-11 ನೇ ಸಾಲಿನಲ್ಲಿ ಯಾವುದೇ ಪ್ರಮುಖ ಪ್ರವಾಸಿ ಕೇಂದ್ರಗಳಲ್ಲಿ ಸಿಮೆಂಟ್ ಹೆಲಿಪ್ಯಾಡ್‌ಗಳನ್ನು ನಿರ್ಮಿಸಲು ಉದ್ದೇಶಿಸಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

**ದಿನಾಂಕ 17-03-2011 – ಚುಕ್ಕೆ ಇಲ್ಲ 1035 : ಕೊಕ್ಕರೆ ಬೆಳ್ಳೂರಿನ ರಸ್ತೆ ಅಭಿವೃದ್ಧಿ ಬಗ್ಗೆ – ಶ್ರೀ ಬಿ. ರಾಮಕೃಷ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಮಾನ್ಯ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ.**

ಅ) ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು ಕೊಕ್ಕರೆ ಬೆಳ್ಳೂರಿನ ಅಭಿವೃದ್ಧಿಗೆ ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ; (ವಿವರ ನೀಡುವುದು)

ಆ) ಈ ಊರಿನ ಅಭಿವೃದ್ಧಿಗೆ ಯಾವ ಯೋಜನೆ ರೂಪಿಸಲಾಗಿದೆ; ಪ್ರವಾಸಿಗರಿಗೆ ಇಲ್ಲಿ ವಿಶ್ರಾಂತಿ ತೆಗೆದುಕೊಳ್ಳಲು ಯಾವುದೇ ಅನುಕೂಲವಿಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸರ್ಕಾರ ಯಾವ ಯೋಜನೆ ರೂಪಿಸಿದೆ; (ವಿವರ ನೀಡುವುದು)

ಇ) ಇಲ್ಲಿನ ಅಕ್ಕಪಕ್ಕದ ರಸ್ತೆಗಳು ಹಾಳಾಗಿದ್ದು, ಅವುಗಳನ್ನು ಸರಿಪಡಿಸಲು ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ? (ವಿವರ ನೀಡುವುದು)

**ಉತ್ತರಿಸಿದವರು ಪ್ರವಾಸೋದ್ಯಮ ಸಚಿವರು, ಕರ್ನಾಟಕ ಸರ್ಕಾರ.**

ಅ) ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು ಕೊಕ್ಕರೆ ಬೆಳ್ಳೂರಿನಲ್ಲಿ ಕೇಂದ್ರ ಸರ್ಕಾರದ ಗ್ರಾಮೀಣ ಪ್ರವಾಸೋದ್ಯಮ ಯೋಜನೆಯಡಿಯಲ್ಲಿ ಪ್ರವಾಸಿ ಸೌಲಭ್ಯಗಳಲ್ಲಿ ರೂ.77.17 ಲಕ್ಷಗಳಲ್ಲಿ ಅಭಿವೃದ್ಧಿಪಡಿಸಲಾಗಿದೆ.

ಆ) ಹೌದು, ಅನುದಾನದ ಲಭ್ಯತೆಯನ್ನು ಆಧರಿಸಿ ಈ ತಾಣದ ಬಳಿ ಪ್ರವಾಸಿಗರಿಗೆ ವಿಶ್ರಾಂತಿ ತೆಗೆದುಕೊಳ್ಳಲು ಅನುಕೂಲ ಮಾಡಿಕೊಡುವ ಬಗ್ಗೆ ಪರಿಶೀಲಿಸಲಾಗುವುದು.

ಇ) ಈ ವಿಷಯವು ಪ್ರವಾಸೋದ್ಯಮ ಇಲಾಖೆಯ ವ್ಯಾಪ್ತಿಗೆ ಬರುವುದಿಲ್ಲ.

## ಬಂದೀಖಾನೆ ಇಲಾಖೆ

ವಿಶ್ಲೇಷಣಾ ಅವಧಿಯ ವಿಧಾನಮಂಡಲ ಅಧಿವೇಶನಗಳಲ್ಲಿ ಬಂದೀಖಾನೆ ಇಲಾಖೆಗೆ ಕೇಳಿಬಂದ ಒಟ್ಟು ಪ್ರಶ್ನೆಗಳ ಸಂಖ್ಯೆ 6 (ವಿಧಾನಸಭೆ = 3 ಮತ್ತು ವಿಧಾನ ಪರಿಷತ್ತು = 3). ಜೈಲುಗಳಲ್ಲಿ ಮೊಬೈಲ್ ಬಳಕೆ, ಉಪ-ಕಾರಾಗೃಹ ಪ್ರಾರಂಭಿಸುವ ಕುರಿತು, ಬಂದೀಖಾನೆ ಸ್ಥಳಾಂತರಿಸುವ ಬಗ್ಗೆ, ಕಾರಾಗೃಹದಲ್ಲಿ ಖಾಸಗಿ ಭದ್ರತಾ ಪಡೆಯನ್ನು ನೇಮಿಸುವ ವಿಚಾರ ಮತ್ತು ರಾಜ್ಯದಲ್ಲಿನ ಬಂದೀಖಾನೆಗಳ ಕುರಿತಾದ ಪ್ರಶ್ನೆಗಳಿವೆ.

| **2011ರ ಆಯವ್ಯಯ ಅಧಿವೇಶನದಲ್ಲಿ ವಿಧಾನಸಭೆಯಲ್ಲಿ ಕೇಳಲ್ಪಟ್ಟ ಪಕ್ಷಾವಾರು ಒಟ್ಟು ಪ್ರಶ್ನೆಗಳು** | |
|---|---|
| **ಪಕ್ಷ** | **ಒಟ್ಟು ಪ್ರಶ್ನೆಗಳು** |
| ಬಿ.ಜೆ.ಪಿ | 1 |
| ಜೆ.ಡಿ.ಎಸ್ | 0 |
| ಕಾಂಗ್ರೆಸ್ | 2 |
| **ಒಟ್ಟು** | **3** |

| **2011ರ ಆಯವ್ಯಯ ಅಧಿವೇಶನದಲ್ಲಿ ವಿಧಾನ ಪರಿಷತ್ತಿನಲ್ಲಿ ಕೇಳಲ್ಪಟ್ಟ ಪಕ್ಷಾವಾರು ಒಟ್ಟು ಪ್ರಶ್ನೆಗಳು** | |
|---|---|
| **ಪಕ್ಷ** | **ಒಟ್ಟು ಪ್ರಶ್ನೆಗಳು** |
| ಪಕ್ಷೇತರ | 0 |
| ಬಿ.ಜೆ.ಪಿ | 3 |
| ಜೆ.ಡಿ.ಎಸ್ | 0 |
| ಕಾಂಗ್ರೆಸ್ | 0 |
| **ಒಟ್ಟು** | **3** |

**ದಿನಾಂಕ 07-03-2011 – ಚುಕ್ಕೆ ಇಲ್ಲ 676 : ಕಾರಾಗೃಹದಲ್ಲಿ ಖಾಸಗಿ ಭದ್ರತಾ ಪಡೆ – ಶ್ರೀ ಮಹಾತೇಶ್ ಶಿವಾನಂದ ಕೌಜಲಗಿ.**

**ಮಾನ್ಯ ಸಮಾಜ ಕಲ್ಯಾಣ ಮತ್ತು ಬಂದೀಖಾನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ.**

ಅ) ಕಾರಾಗೃಹದಲ್ಲಿ ಖಾಸಗಿ ಭದ್ರತಾ ಪಡೆಯನ್ನು ನೇಮಿಸುವ ವಿಚಾರ ಸರ್ಕಾರದ ಮುಂದಿದೆಯೇ;

ಆ) ಖಾಸಗಿ ಭದ್ರತಾ ಪಡೆಯನ್ನು ನೇಮಿಸಿದರೆ ಆಗುವ ಸಾಧಕ-ಬಾಧಕಗಳೇನು;(ವಿವರ ನೀಡುವುದು)

**ಉತ್ತರಿಸಿದವರು ಸಮಾಜ ಕಲ್ಯಾಣ ಹಾಗೂ ಬಂದೀಖಾನೆ ಸಚಿವರು, ಕರ್ನಾಟಕ ಸಕಾರ.**

ಅ) ಹೌದು

ಆ) ಕಾರಾಗೃಹಗಳ ಇಲಾಖೆಯಲ್ಲಿ ಕಾವಲು ಸಿಬ್ಬಂದಿಗಳ ತೀವ್ರ ಕೊರತೆ ಇದ್ದು, ಈ ಕೊರತೆಯನ್ನು ನೀಗಿಸಲು ಭದ್ರತಾ ಸಿಬ್ಬಂದಿಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗಿರುತ್ತದೆ. ಖಾಸಗಿ ಭದ್ರತಾ ಸಿಬ್ಬಂದಿಗಳನ್ನು ನೇಮಕ ಮಾಡಿಕೊಂಡಿರುವುದರಿಂದ ಕಾರಾಗೃಹಗಳಲ್ಲಿ ಕಾವಲು ಸಿಬ್ಬಂದಿಗಳ ತೀವ್ರ ಕೊರತೆಯನ್ನು ನೀಗಿಸಲು ಹಾಗೂ ಕಾರಾಗೃಹಗಳ ಸುರಕ್ಷತೆ ಮತ್ತು ಭದ್ರತೆಯನ್ನು ರಕ್ಷಿಸಲು ಸ್ವಲ್ಪಮಟ್ಟಿಗೆ ಅನುಕೂಲವಾಗುತ್ತದೆ. ಖಾಸಗಿ ಭದ್ರತಾ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳುವ ಪೂರ್ವದಲ್ಲಿ ನಿಗದಿತ ವಯೋಮಿತಿ, ಕನ್ನಡ ಜ್ಞಾನ, ಇಲಾಖೆಯ ನಿಯಮಾವಳಿ ಪ್ರಕಾರ ಕರ್ತವ್ಯ ನಿರ್ವಹಿಸುವುದು, ಬಂದಿಗಳ ಜೊತೆ ಯಾವುದೇ ರೀತಿಯ ಸಂಬಂಧವಿರಬಾರದು, ಬಂದಿಗಳ ಜೊತೆ ಯಾವುದೇ ರೀತಿಯ ಸಂಬಂದವಿರಬಾರದು, ಬಂದಿಗಳೊಂದಿಗೆ ನಿಯಮಬಾಹಿರ ಚಟುವಟಿಕೆಗಳನ್ನು ನಡೆಸತಕ್ಕದಲ್ಲ, ಮುಂತಾದ ಷರತ್ತುಗಳಿಗೆ ಒಳಪಟ್ಟಂತೆ ನೇಮಕ ಮಾಡಿಕೊಂಡಿರುವುದರಿಂದ ಈವರೆಗೆ ಯಾವುದೇ ಬಾಧಕಗಳು ಕಂಡುಬಂದಿರುವುದಿಲ್ಲ.

**ದಿನಾಂಕ 03-03-2011 – ಚುಕ್ಕೆ ಇಲ್ಲ 591: ಸೇಡಂ ತಾಲ್ಲೂಕು ಉಪ-ಕಾರಾಗೃಹ ಕಟ್ಟಡ ಕುರಿತು – ಶ್ರೀ ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್**

**ಮಾನ್ಯ ಸಮಾಜ ಕಲ್ಯಾಣ ಮತ್ತು ಬಂದೀಖಾನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ.**

ಅ) ಸೇಡಂ ತಾಲ್ಲೂಕು ಕೇಂದ್ರದಲ್ಲಿರುವ ಉಪ-ಕಾರಾಗೃಹ ಕಟ್ಟಡ ಕಂದಾಯ ಇಲಾಖೆಯ ವಶದಲ್ಲಿರುವುದು ನಿಜವೇ?

ಆ) ಉಪ-ಕಾರಾಗೃಹದ ಕಟ್ಟಡ ಕಾಮಗಾರಿ ಪೂರ್ಣಗೊಂಡಿದ್ದು ಕಟ್ಟಡ ಕಾರಾಗೃಹ ಇಲಾಖೆಗೆ ವಹಿಸದೇ ಇರಲು ಕಾರಣವೇನು?

ಇ) ಕಟ್ಟಡ ಕಾರಾಗೃಹ ಇಲಾಖೆಗೆ ನೀಡಿ ಅವಶ್ಯವಿರುವ ವಿವಿಧ ದರ್ಜೆಯ ಸಿಬ್ಬಂದಿ ನಿಯೋಜನೆ ಮಾಡುವುದು ಅವಶ್ಯವಿಲ್ಲವೇ?

ಈ) ಈ ಉಪ ಕಾರಾಗೃಹಕ್ಕೆ ಮಂಜೂರಾದ ವಿವಿಧ ದರ್ಜೆಯ ಹುದ್ದೆಗಳೆಷ್ಟು?

ಉ) ಕಾರಾಗೃಹ ಇಲಾಖೆಯಿಂದ ಪುನರ್ ಪ್ರಾರಂಬಿಸಲು ಬೇಕಾಗುವ ಕಾಲಾವಕಾಶ ಎಷ್ಟು?

**ಉತ್ತರಿಸಿದವರು ಮಾನ್ಯ ಸಮಾಜ ಕಲ್ಯಾಣ ಹಾಗೂ ಬಂದೀಖಾನೆ ಸಚಿವರು, ಕರ್ನಾಟಕ ಸರ್ಕಾರ.**

ಅ) ನಿಜ

ಆ) ಅಗತ್ಯವಾದ ಕನಿಷ್ಠ ಸಿಬ್ಬಂದಿ ಹುದ್ದೆಗಳ ಸೃಜನೆಯಾಗದ ಕಾರಣ ಇಲಾಖೆಯ ವಶಕ್ಕೆ ಪಡೆಯಲಾಗಿಲ್ಲ.

ಇ) ಅವಶ್ಯವಿದೆ.

ಈ) ಇದುವರೆಗೆ ಯಾವುದೇ ಹುದ್ದೆ ಮಂಜೂರಾಗಿಲ್ಲ.

ಉ) ಕಾರಾಗೃಹ ಇಲಾಖೆಯಲ್ಲಿ ಪುನರ್ ವಿಂಗಡನೆಗಾಗಿ ವಿವಿಧ ಹುದ್ದೆಗಳನ್ನು ಸೃಜಿಸಲು, ಸರ್ಕಾರದ ಕಾರ್ಯದರ್ಶಿ, ಇಲಾಖಾ ಮುಖ್ಯಸ್ಥರು ಹಾಗೂ ಇನ್ನಿತರ ಅಧಿಕಾರಿಗಳೊಂದಿಗೆ ಒಂದು ಸಮಿತಿಯನ್ನು ರಚಿಸಿ ಹುದ್ದೆಗಳ ಸೃಜನೆಗಳ ಬಗ್ಗೆ ಪರಿಶೀಲಿಸಲಾಗುತ್ತದೆ.

## ರೇಷ್ಮೆ ಇಲಾಖೆ

ವಿಶ್ಲೇಷಣಾ ಅವಧಿಯ ವಿಧಾನಮಂಡಲ ಅಧಿವೇಶನಗಳಲ್ಲಿ ರೇಷ್ಮೆ ಇಲಾಖೆಗೆ ಕೇಳಿಬಂದ ಒಟ್ಟು ಪ್ರಶ್ನೆಗಳ ಸಂಖ್ಯೆ 25 (ವಿಧಾನಸಭೆ = 4 ಮತ್ತು ವಿಧಾನ ಪರಿಷತ್ತು = 3). ರೇಷ್ಮೆ ಮಾರುಕಟ್ಟೆಗಳಲ್ಲಿ ರೈತರಿಗೆ ಕಿರುಕುಳ ಮೋಸ, ರೇಷ್ಮೆ ಬೆಳೆಯನ್ನು ಅಭಿವೃದ್ಧಿಪಡಿಸುವ ಬಗ್ಗೆ, ರೇಷ್ಮೆ ಬೆಳೆಗಾರರು ಸಂಕಷ್ಟದಲ್ಲಿರುವ ಬಗ್ಗೆ ಮತ್ತು ರೇಷ್ಮೆ ಗೂಡಿನ ಮಾರುಕಟ್ಟೆಗಳ ಬಗ್ಗೆ ಪ್ರಶ್ನೆಗಳನ್ನು ಕೇಳಲಾಗಿದೆ.

| **2011ರ ಆಯವ್ಯಯ ಅಧಿವೇಶನದಲ್ಲಿ ವಿಧಾನಸಭೆಯಲ್ಲಿ ಕೇಳಲ್ಪಟ್ಟ ಪಕ್ಷಾವಾರು ಒಟ್ಟು ಪ್ರಶ್ನೆಗಳು** | |
|---|---|
| **ಪಕ್ಷ** | **ಒಟ್ಟು ಪ್ರಶ್ನೆಗಳು** |
| ಬಿ.ಜೆ.ಪಿ | 1 |
| ಜೆ.ಡಿ.ಎಸ್ | 0 |
| ಕಾಂಗ್ರೆಸ್ | 3 |
| **ಒಟ್ಟು** | **4** |

| **2011ರ ಆಯವ್ಯಯ ಅಧಿವೇಶನದಲ್ಲಿ ವಿಧಾನ ಪರಿಷತ್ತಿನಲ್ಲಿ ಕೇಳಲ್ಪಟ್ಟ ಪಕ್ಷಾವಾರು ಒಟ್ಟು ಪ್ರಶ್ನೆಗಳು** | |
|---|---|
| **ಪಕ್ಷ** | **ಒಟ್ಟು ಪ್ರಶ್ನೆಗಳು** |
| ಪಕ್ಷೇತರ | 1 |
| ಬಿ.ಜೆ.ಪಿ | 0 |
| ಜೆ.ಡಿ.ಎಸ್ | 1 |
| ಕಾಂಗ್ರೆಸ್ | 1 |
| **ಒಟ್ಟು** | **3** |

ಪ್ರತೀ ವರ್ಷದಂತಯೇ ಈ ಬಾರಿಯು ಪ್ರಶ್ನೆಗಳ ಪುನರಾವರ್ತನೆಯಾಗಿದೆ. ಸರ್ಕಾರ ಹಲವಾರು ಯೋಜನೆಗಳನ್ನು ಜಾರಿಗೆ ತಂದಿರುವುದಾಗಿ ತಿಳಿಸಿದ್ದಾರೆ ಆದರೆ ಇವುಗಳು ರೈತರಿಗೆ ತಲುಪದಿರುವುದು ವಿಪರ್ಯಾಸವಾಗಿದೆ.

**ದಿನಾಂಕ 16–03–2011 – ಚುಕ್ಕೆ ಇಲ್ಲ 651 : ರೇಷ್ಮೆ ಮಾರುಕಟ್ಟೆಗಳಲ್ಲಿ ರೈತರಿಗೆ ಕಿರುಕುಳ ಮೋಸ ಮಾಡುತ್ತಿರುವ ಬಗ್ಗೆ – ಶ್ರೀ ನಾಗರಾಜ್ ಎಸ್. (ಸಂದೇಶ್ ನಾಗರಾಜ್)**

**ಮಾನ್ಯ ಕಾರ್ಮಿಕ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ.**

ಅ) ರಾಜ್ಯದ ರೇಷ್ಮೆ ಮಾರುಕಟ್ಟೆಗಳಲ್ಲಿ ರೈತರಿಗೆ ಮೋಸ ಮಾಡುತ್ತಿರುವ ಕಿರುಕುಳ ನೀಡುತ್ತಿರುವ ಬಗ್ಗೆ ಸರ್ಕಾರಕ್ಕೆ ದೂರುಗಳು ಬಂದಿವೆಯೇ: ಹಾಗಿದ್ದಲ್ಲಿ ಕಳೆದ 3 ವರ್ಷಗಳಲ್ಲಿ ಎಷ್ಟು ಪ್ರಕರಣಗಳು ದಾಖಲಾಗಿವೆ; ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಜಿಲ್ಲಾವಾರು ವಿವರ ನೀಡುವುದು);

ಆ) ತಪ್ಪಿತಸ್ಥ ಅಧಿಕಾರಿಗಳು ಮತ್ತು ದಲ್ಲಾಳಿಗಳು ಹಾಗೂ ವ್ಯಾಪಾರಿಗಳನ್ನು ಗುರುತಿಸಿ ಅವರ ವಿರುದ್ಧ ಕ್ರಮ ಜರುಗಿಸಲಾಗಿದೆಯೇ; ಹಾಗಿದ್ದಲ್ಲಿ ಕೈಗೊಂಡಿರುವ ಕ್ರಮಗಳೇನು;

ಇ) ರೇಷ್ಮೆ ಬೆಳೆಗಾರರಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲ ನೀಡುವ ಯೋಜನೆಯನ್ನು ರೂಪಿಸಲಾಗಿದೆಯೇ; ಇದನ್ನು ಜಾರಿಗೆ ತರಲಾಗಿದೆಯೇ; ಇದರಿಂದ ಪ್ರಯೋಜನ ಪಡೆಯುವ ರೈತರ ಅಂದಾಜು ಸಂಖ್ಯೆ ಎಷ್ಟು ?

**ಉತ್ತರಿಸಿದವರು ಮಾನ್ಯ ಕಾರ್ಮಿಕ ಮತ್ತು ರೇಷ್ಮೆ ಸಚಿವರು, ಕರ್ನಾಟಕ ಸರ್ಕಾರ.**

ಅ&ಆ) ರಾಜ್ಯದ ರೇಷ್ಮೆ ಗೂಡಿನ ಮಾರುಕಟ್ಟೆಗಳಲ್ಲಿ ರೈತರಿಗೆ ಮೋಸ ಮಾಡುತ್ತಿರುವ, ಕಿರುಕುಳ ನೀಡುತ್ತಿರುವ ಪ್ರಕರಣಗಳು ದಾಖಲಾಗಿರುವುದಿಲ್ಲ. ಆದರೆ ತೂಕದಲ್ಲಿ, ಹರಾಜು ಕೂಗುವುದರಲ್ಲಿ ಮೋಸ ಮಾಡುವಂತಹ ಪ್ರಕರಣಗಳ ಬಗ್ಗೆ ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ;

– ನಿಖರವಾದ ತೂಕಕ್ಕಾಗಿ ಎಲೆಕ್ಟ್ರಾನಿಕ್ ತೂಕದ ಯಂತ್ರಗಳನ್ನು ಸರಬರಾಜು ಮಾಡಲಾಗಿದೆ.

– ಮಾರುಕಟ್ಟೆಗಳು ವ್ಯವಸ್ಥಿತವಾಗಿ ಕಾರ್ಯ ನಿರ್ವಹಿಸುವ ಬಗ್ಗೆ ಕಾಲ–ಕಾಲಕ್ಕೆ ಸುತ್ತೋಲೆ/ಆದೇಶಗಳನ್ನು ಹೊರಡಿಸಲಾಗಿದೆ.

– ದೂರುಗಳು ಬಂದಲ್ಲಿ ಅವನ್ನು ಕೂಲಂಕುಷವಾಗಿ ಪರಿಶೀಲಿಸಿ ಅವುಗಳು ಮರುಕಳಿಸದಂತೆ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.

– ಹಿರಿಯ ಅಧಿಕಾರಿಗಳು ಮಾರುಕಟ್ಟೆಗೆ ಅನಿರೀಕ್ಷಿತ ಭೇಟಿ ನೀಡಿ ಪರಿಶೀಲನೆ ನಡೆಸಿ ಅವ್ಯವಹಾರಗಳು ಕಂಡು ಬಂದಲ್ಲಿ ಸೂಕ್ತ ಶಿಸ್ತಿನ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಮಾರುಕಟ್ಟೆಗಳಲ್ಲಿ ವಹಿವಾಟನ್ನು ಗಣಕೀಕರಿಸಿ ಶೀಘ್ರ ಮತ್ತು ಪಾರದರ್ಶಕ ವಹಿವಾಟು ವ್ಯವಸ್ಥೆ ಮಾಡಲಾಗುತ್ತಿದೆ. ಇದಲ್ಲದೇ ಪ್ರಮುಖ ಮಾರುಕಟ್ಟೆಗಳಲ್ಲಿ ಸಿಸಿಟಿವಿ ಅಳವಡಿಸಿ ಮೋಸದ ಪ್ರಕರಣಗಳನ್ನು ನಿಯಂತ್ರಿಸಲಾಗುತ್ತಿದೆ.

ಇ) ಜಿಲ್ಲಾ ಸಹಕಾರ ಬ್ಯಾಂಕು ಮತ್ತು ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳು ರೇಷ್ಮೆ ಬೆಳೆಗಾರರಿಗೆ ರೇಷ್ಮೆ ಚಟುವಟಿಕೆಗಳಿಗೆ ಶೇಕಡಾ 3ರ ಬಡ್ಡಿದರದಲ್ಲಿ ಸಾಲ ಸೌಲಭ್ಯಗಳನ್ನು ನೀಡುತ್ತಿವೆ. 2010–11ನೇ ಸಾಲಿನಲ್ಲಿ ರೇಷ್ಮೆ ಚಟುವಟಿಕೆಗಳಿಗಾಗಿ ರೂ. 3978.917 ಲಕ್ಷಗಳ ಸಾಲ ಸೌಲಭ್ಯ ಒದಗಿಸುವ ಗುರಿ ಹೊಂದಿದ್ದು, 5488 ರೇಷ್ಮೆ ಬೆಳೆಗಾರರು ಪ್ರಯೋಜನ ಪಡೆಯಲಿದ್ದಾರೆ.

**ದಿನಾಂಕ 28–02–2011 – ಚುಕ್ಕೆ ಇಲ್ಲ 356 : ರೇಷ್ಮೆ ಕಾರ್ಖಾನೆ ಕೇಂದ್ರಗಳ ಬಗ್ಗೆ – ಶ್ರೀ ನೆ.ಲ. ನರೇಂದ್ರ ಬಾಬು**

**ಮಾನ್ಯ ಕಾರ್ಮಿಕ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ.**

ಅ) ರಾಜ್ಯದಲ್ಲಿ ಯಾವ ಯಾವ ಜಿಲ್ಲೆಗಳಲ್ಲಿ ರೇಷ್ಮೆ ಕಾರ್ಖಾನೆ (ಗೂಡು) ಮಾರಾಟ ಕೇಂದ್ರಗಳಿವೆ; (ವಿವರ ನೀಡುವುದು)

ಆ) ಈ ಕೇಂದ್ರಗಳಿಗೆ ಅಗತ್ಯ ಮೂಲಭೂತ ಸೌಕರ್ಯ ಸರ್ಕಾರ ಒದಗಿಸಿದೆಯೇ:

ಇ) ಜಿಲ್ಲೆಗಳಲ್ಲಿರುವ ಎಲ್ಲಾ ಮಾರಾಟ ಕೇಂದ್ರಗಳಲ್ಲಿ ರೇಷ್ಮೆ ಗೂಡಿನ ವ್ಯವಹಾರ ನಡೆಯುತ್ತದೆಯೇ;

ಈ) ಹಾಗಿದ್ದಲ್ಲಿ, ಇರುವ ಸಮಸ್ಯೆ ಮತ್ತು ಕಾರಣಗಳನ್ನು ನೀಡುವುದು?

**ಉತ್ತರಿಸಿದವರು ಮಾನ್ಯ ಕಾರ್ಮಿಕ ಮತ್ತು ರೇಷ್ಮೆ ಸಚಿವರು, ಕರ್ನಾಟಕ ಸರ್ಕಾರ.**

ಅ) ರಾಜ್ಯದಲ್ಲಿ ಒಟ್ಟು 66 ಅಧಿಸೂಚಿತ ಸರ್ಕಾರಿ ರೇಷ್ಮೆ ಗೂಡಿನ ಮಾರುಕಟ್ಟೆಗಳಿವೆ. ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಆ) ಎಲ್ಲಾ ಪ್ರಮುಖ ಮಾರುಕಟ್ಟೆಗಳಲ್ಲಿ ಮೂಲಭೂತ ಸೌಲಭ್ಯಗಳಾದ ಗೂಡು ಶೇಖರಿಸಲು ಸ್ಥಳಾವಕಾಶ, ಕುಡಿಯುವ ನೀರು, ಶೌಚಾಲಯ, ಎಲೆಕ್ಟ್ರಾನಿಕ್ ತೂಕದ ಯಂತ್ರಗಳು, ಬಿನ್ ಗಳು ಪ್ಲಾಸ್ಟಿಕ್ ಕ್ರೇಟುಗಳನ್ನು ಒದಗಿಸಲಾಗಿದೆ.

ಇ) ಇಲ್ಲ. ಪ್ರಸ್ತುತ 52 ಮಾರುಕಟ್ಟೆಗಳಲ್ಲಿ ರೇಷ್ಮೆ ಗೂಡಿನ ವಹಿವಾಟು ನಡೆಯುತ್ತಿದೆ.

ಈ) ಬಾಗಲೂರು, ದೇವನಹಳ್ಳಿ, ಬಳ್ಳಾರಿ, ಗೌರಿಬಿದನೂರು, ಕಡೂರು, ಚಿತ್ರದುರ್ಗ, ರಾಮನಾಥಪುರ, ಹಾವೇರಿ, ಕುಶಾಲನಗರ, ಬಂಗಾರಪೇಟೆ, ಮಂಡ್ಯ, ಶ್ರೀರಂಗಪಟ್ಟಣ, ನಂಜನಗೂಡು ಮತ್ತು ಲಿಂಗಸಗೂರು ಈ ಸ್ಥಳಗಳಲ್ಲಿ ರೇಷ್ಮೆಗೂಡು ಖರೀದಿಸುವ ನೂಲು ಬಿಚ್ಚಾಣಿಕೆದಾರರು ಕಡಿಮೆ ಇರುವ ಕಾರಣ ವಹಿವಾಟು ನಡೆಯುತ್ತಿಲ್ಲ.

* * *

## ಕರ್ನಾಟಕ ಸಾಮಾಜಿಕ ಕಾವಲು ಪಡೆ ಸಭೆ ನಡೆದ ವಿವರ

| ದಿನಾಂಕ | ಸ್ಥಳ | ಭಾಗವಹಿಸಿದ್ದವರ ಸಂಖ್ಯೆ |
|---|---|---|
| 04.07.2011 | ಆಶೀರ್ವಾದ್, ಬೆಂಗಳೂರು. | 11 |
| 19.07.2011 | ಚೈಲ್ಡ್ ರೈಟ್ಸ್ ಟ್ರಸ್ಟ್, ಬೆಂಗಳೂರು. | 21 |
| 29.07.2011 | ಚೈಲ್ಡ್ ರೈಟ್ಸ್ ಟ್ರಸ್ಟ್, ಬೆಂಗಳೂರು. | 09 |
| 28.10.2011 | ಚೈಲ್ಡ್ ರೈಟ್ಸ್ ಟ್ರಸ್ಟ್, ಬೆಂಗಳೂರು. | 14 |
| 18.11.2011 | ಚೈಲ್ಡ್ ರೈಟ್ಸ್ ಟ್ರಸ್ಟ್, ಬೆಂಗಳೂರು. | 12 |
| 23.01.2012 | ಗಾಂಧೀ ಭವನ, ಬೆಂಗಳೂರು. | 28 |
| 10.02.2012 | ಚೈಲ್ಡ್ ರೈಟ್ಸ್ ಟ್ರಸ್ಟ್, ಬೆಂಗಳೂರು. | 13 |
| 24.02.2012 | ಚೈಲ್ಡ್ ರೈಟ್ಸ್ ಟ್ರಸ್ಟ್, ಬೆಂಗಳೂರು. | 21 |
| 20.04.2012 | ಚೈಲ್ಡ್ ರೈಟ್ಸ್ ಟ್ರಸ್ಟ್, ಬೆಂಗಳೂರು. | 13 |
| 04.05.2012 | ಚೈಲ್ಡ್ ರೈಟ್ಸ್ ಟ್ರಸ್ಟ್, ಬೆಂಗಳೂರು. | 05 |

## ಭಾಗವಹಿಸಿದ ವ್ಯಕ್ತಿಗಳು

ಶ್ರೀ ರವಿ.ಜಿ
ಶ್ರೀ ಮನೋಹರ್ ಆರ್
ಶ್ರೀ ವಿನಯ್ ಬೈಂದೂರ್
ಶ್ರೀ ಆನಂದ್. ಎಸ್
ಶ್ರೀ. ಆರ್.ಎಸ್.ಎನ್. ಗೌಡ
ಶ್ರೀಮತಿ ಮಂಜು ಜಾರ್ಜ್
ಶ್ರೀಮತಿ ಅಮೃತ ಬೈಚ್ವಾಲ್
ಶ್ರೀ ಮಂಜುನಾಥ ಎ.ವಿ.
ಶ್ರೀಮತಿ ಕೃತಿ ವಿಶ್ವನಾಥ್
ಶ್ರೀ ಸತ್ಯನಾರಾಯಣ. ಎಸ್
ಶ್ರೀ ವಾಸುದೇವ ಶರ್ಮಾ
ಶ್ರೀ ಸತೀಶ್ ಜಿ.ಸಿ
ಕುಮಾರಿ ರಶ್ಮಿ. ಎಮ್
ಶ್ರೀ ಶಿವಶಂಕರ್
ಶ್ರೀ ಶಿವರಾಜು. ಡಿ.ಕೆ
ಶ್ರೀ ಧನಂಜಯ ಕೆ.ಎಲ್.
ಶ್ರೀಮತಿ ಹರಿಣಿ
ಶ್ರೀ ಶಿವಕುಮಾರ ಎಮ್
ಶ್ರೀ ಮಲ್ಲಿಕಾರ್ಜುನ. ಎಲ್.ಎಸ್.
ಶ್ರೀಮತಿ ವಿಮಲ ಜಿ
ಡಾ. ಪದ್ಮಿನಿ
ಶ್ರೀ ಅನ್ವೇಶ ಪಾಥಕ್
ಶ್ರೀಮತಿ ಸಂಜನಾ ಪ್ರಧಾನ್
ಶ್ರೀ ಶಂಕರ್.ಎಮ್
ಶ್ರೀ ಮೊಹಮ್ಮದ್ ಅತರುಲ್ಲಾ ಶರೀಫ್
ಶ್ರೀ ಸೈಯ್ಯದ್ ಇಶ್ತಿಯಾಖ್
ಶ್ರೀ ಶಶಿಕುಮಾರ್. ಎಮ್.ಜೆ
ಶ್ರೀ ಜಾನ್ ಪೌಲ್
ಶ್ರೀ ಅನಂತರಾಮಯ್ಯ. ಎಸ್
ಶ್ರೀ ಪ್ರವೀಣ್
ಡಾ. ಸಂಗೀತ ಸೆಕ್ಸೇನ
ಶ್ರೀಮತಿ ಜಭೀನ್ ತಾಜ್
ಶ್ರೀಮತಿ ಯಶೋಧ
ಶ್ರೀ ಜೋಸೇ. ಬಿ
ಶ್ರೀ ಜಸ್ವೀನ್ ಜಾನಿ
ಶ್ರೀ ಅನಿಲ್ ಕುಮಾರ್. ಟಿ.ಎಮ್
ಶ್ರೀ ಆನಂದ್
ಶ್ರೀ ವೆಂಕಟೇಶ್ ಮೂರ್ತಿ
ಶ್ರೀ ವಿನ್ಸೆಂಟ್ ಜಿ.
ಶ್ರೀಮತಿ ವಿದ್ಯಾ ಎಸ್.
ಶ್ರೀ ನಾಗರಾಜ ಬಿ.ಜಿ
ಕುಮಾರಿ ಭವ್ಯ ಜೆ.ಈ
ಕುಮಾರಿ ರಶ್ಮಿ ಜಿ.ಎಂ
ಶ್ರೀಮತಿ ಕಾತ್ಯಾಯಿನಿ ಚಾಮರಾಜ್
ಶ್ರೀ ಸಂತೋಷ್ .ಎಸ್
ಶ್ರೀ ಪಾಪಣ್ಣ ಎನ್.ಅ
ಶ್ರೀ ಕುಮಾರ್ ಹೆಚ್.ಸಿ.
ಶ್ರೀ ಪ್ರಕಾಶ್ ಎಸ್
ಶ್ರೀ ಗುರುರಾಜ್ ಬುಧ್ಯ

## ಸಂಘ ಸಂಸ್ಥೆಗಳು

| |
|---|
| ವಿಶ್ವ ಕನ್ನಡ ಸಮಾಜ |
| ಅರ್ಬನ್ ರಿಸರ್ಚ್ ಸೆಂಟರ್ |
| ಚೈಲ್ಡ್ ರೈಟ್ಸ್ ಟ್ರಸ್ಟ್ |
| ಕರ್ನಾಟಕ ಮಕ್ಕಳ ಹಕ್ಕುಗಳ ನಿಗಾ ಕೇಂದ್ರ |
| ಇವಾಂಜೆಲಿಕಲ್ ಸೋಷಿಯಲ್ ಆಕ್ಷನ್ ಫೋರಂ |
| ಪೋರ್ತ್ ವೇವ್ ಫೌಂಡೇಷನ್ |
| ದಕ್ಷ |
| ಕನ್ನಡ ರಣಧೀರ ಪಡೆ |
| ಕನ್ಸರ್ನ್ ಫಾರ್ ವರ್ಕಿಂಗ್ ಚಿಲ್ಡ್ರನ್ |
| ದಕ್ಷಿಣ ಭಾರತ ಶಿಕ್ಷಣ ಮತ್ತು ಮೇಲ್ವಿಚಾರಣೆ ಘಟಕಗಳು (ಸಿಕ್ರಂ) |
| ಸಿ.ಎಂ.ಆರ್. ಇನ್ಸಿಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್ |
| ಇನ್ಸಾ–ಇಂಡಿಯಾ |
| ಕರ್ನಾಟಕ ನಾಗರೀಕ ಹಾಗೂ ಗ್ರಾಹಕರ ಹಿತರಕ್ಷಣಾ ವೇದಿಕೆ |
| ಚೈಲ್ಡ್ ರೈಟ್ಸ್ ಅಂಡ್ ಯು |
| ಎನ್ಫೋಲ್ಡ್ ಟ್ರಸ್ಟ್ |
| ಸ್ತ್ರೀ ಜಾಗೃತಿ ಸಮಿತಿ |
| ದಿ ಹಂಗರ್ ಪ್ರೋಜೆಕ್ಟ್ |
| ಈಕ್ವೇಷನ್ |
| ಭ್ರಷ್ಟಾಚಾರ ನಿರ್ಮೂಲನಾ ವೇದಿಕೆ |